# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 18 ಸೋಮವಾರ 2022

ಸಂಪುಟ: 43 | ಸಂಚಿಕೆ: 03 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




## ಇನ್ಮುಂದೆ ಗ್ರಾಮ ಪಂಚಾಯ್ತಿಯಲ್ಲೇ ಸಿಗಲಿದೆ ಮದುವೆ ಸರ್ಟಿಫಿಕೇಟ್

**ಬೆಂಗಳೂರು:** ಇನ್ನು ಮುಂದೆ ಗ್ರಾಮ ಪಂಚಾಯ್ತಿಯಲ್ಲೇ ಮದುವೆ ಸರ್ಟಿಫಿಕೇಟ್ ಸಿಗಲಿದೆ. ಈ ಸಂಬಂಧ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಡಿಯಲ್ಲಿ ಸರ್ಕಾರ ವಿವಾಹ ನೋಂದಣಿ ಅಧಿಕಾರವನ್ನು ಪಿಡಿಓಗಳಿಗೆ ಸರ್ಕಾರ ನೀಡಿದೆ. ಹೀಗಾಗಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಇನ್ನು ಮುಂದೆ ಮದುವೆ ನೋಂದಣಿಗೆ ಅವಕಾಶ ನೀಡಲಾಗುತ್ತಿದೆ.

ಇಷ್ಟು ದಿನ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಮದುವೆ ನೋಂದಣಿಗೆ ಅವಕಾಶ ಇತ್ತು. ಮದುವೆ ನಡೆದ ಸ್ಥಳ ಅಥವಾ ಪತಿ–ಪತ್ನಿಯರು ವಾಸಿಸುವ ಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿರುವ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಬೇಕಿತ್ತು. ಅದಕ್ಕೆ ಅಗತ್ಯವಾದ ಅರ್ಜಿ ನಮೂನೆ ಅದೇ ಕಚೇರಿಯಲ್ಲಿ ದೊರೆಯುತ್ತಿತ್ತು. ಇಲ್ಲವೇ ಅದನ್ನು ಇಂಟರ್ನೆಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿತ್ತು. ಈ ಅರ್ಜಿಯನ್ನು ಎಚ್ಚರಿಕೆಯಿಂದ ತುಂಬಿ ನಂತರ ಮೂವರು ಸಾಕ್ಷಿಗಳು (ಸ್ನೇಹಿತರು, ಬಂಧುಗಳು) ಸಹಿ ಮಾಡಬೇಕಿತ್ತು. ಈ ಅರ್ಜಿಗೆ ವಧು–ವರ ಕೂಡ ಸಹಿ ಮಾಡಿ, ನಂತರ ಅದಕ್ಕೆ ಮೊಹರು ಹಾಕಿ ರಿಜಿಸ್ಟ್ರಾರ್ ಸಹಿ ಮಾಡುತ್ತಿದ್ದರು. ಆದರೆ ಇನ್ಮುಂದೆ ಪಿಡಿಓಗೆ ಮದುವೆ ನೋಂದಣಿ ಅಧಿಕಾರವನ್ನು ಸರ್ಕಾರ ಕೊಟ್ಟಿದೆ.

### ವಾಟ್ಸಾಪ್‌ನಲ್ಲಿ ಪ್ರಚೋದನಾಕಾರಿ ಪೋಸ್ಟ್

# ಹುಬ್ಬಳ್ಳಿ ಉದ್ವಿಗ್ನ

● ಪೊಲೀಸ್ ಠಾಣೆ, ಸರ್ಕಾರಿ ಆಸ್ಪತ್ರೆ, ದೇವಾಲಯದ ಮೇಲೆ ಕಲ್ಲು ತೂರಾಟ ● ಹಲವು ವಾಹನಗಳಿಗೆ ಹಾನಿ, ಇನ್ಸ್‌ಪೆಕ್ಟರ್ ಸೇರಿ 12 ಮಂದಿ ಪೊಲೀಸರಿಗೆ ಗಾಯ ● 40 ಮಂದಿ ಬಂಧನ, ಏ.20ರವರೆಗೆ ನಿಷೇಧಾಜ್ಞೆ






ಹುಬ್ಬಳ್ಳಿ,ಏ.17–ಯುವಕನೋರ್ವ ವಾಟ್ಸಾಪ್ ಸ್ಟೇಟಸ್‌ನಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಾಕಿದ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ಶನಿವಾರ ರಾತ್ರಿ ಹಿಂಸಾಚಾರ ನಡೆದಿದೆ. ಪೊಲೀಸ್ ಇನ್ಸ್‌ಪೆಕ್ಟರ್ ಸೇರಿ 12 ಮಂದಿ ಪೊಲೀಸರು ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದು, ಉದ್ರಿಕ್ತ ಗುಂಪು ಆಸ್ಪತ್ರೆ ಮತ್ತು ದೇವಸ್ಥಾನದ ಮೇಲೂ ದಾಳಿ ನಡೆಸಿದೆ.

ಪರಿಸ್ಥಿತಿಯನ್ನು ತಹಬದಿಗೆ ತರಲು ಪೊಲೀಸರು ಲಾಠಿ ಚಾರ್ಜ್ ಮಾಡಿ, ಅದು ವಿಫಲವಾದಾಗ ಅಶ್ರುವಾಯು ಸಿಡಿಸಿ, ಗಾಳಿಯಲ್ಲಿ ಗುಂಡು ಹಾರಿಸಿದರು. ಗಲಭೆ ಸಂಬಂಧ 40 ಮಂದಿಯನ್ನು ಪೊಲೀಸರು ಬಂಧಿಸಿದ್ದು, ಏ.20ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಹುಬ್ಬಳ್ಳಿಯಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ●9ನೇ ಪುಟಕ್ಕೆ

> ಕೋಮು ದ್ವೇಷ ಬಿತ್ತಿದ ಕಿಡಿಗೇಡಿಯನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ. ರಂಜಾನ್ ತಿಂಗಳು ಇರುವುದರಿಂದ ಎಲ್ಲರೂ ಶಾಂತಿ ಕಾಪಾಡಬೇಕು. ಉದ್ರೇಕಕ್ಕೆ ಒಳಗಾಗಿ ಕೆಲವರು ಕಲ್ಲು ತೂರಾಟ ಮಾಡಿದ್ದಾರೆ. ಈ ಘಟನೆ ನಡೆಯಬಾರದಿತ್ತು. ಎಲ್ಲರೂ ಶಾಂತಿ ಕಾಪಾಡಬೇಕು.
> – ಅಲ್ತಾಫ್ ಕಿತ್ತೂರ, ಹುಬ್ಬಳ್ಳಿ ಅಂಜುಮಾನ್ ಸಂಸ್ಥೆ ಉಪಾಧ್ಯಕ್ಷ

## ಗಲಭೆಕೋರರಿಗೆ ಸಿಎಂ ಬೊಮ್ಮಾಯಿ ಎಚ್ಚರಿಕೆ



ಬಳ್ಳಾರಿ: ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಬೊಮ್ಮಾಯಿ, ಹುಬ್ಬಳ್ಳಿಯಲ್ಲಿ ಕಿಡಿಗೇಡಿಗಳು ಕಾನೂನು ಕೈಗೆ ತೆಗೆದುಕೊಂಡಿದ್ದಾರೆ. ಪೊಲೀಸ್ ಠಾಣೆ ಬಳಿ ಗಲಾಟೆ ಮಾಡಿದ್ದು ಅಕ್ಷಮ್ಯ ಅಪರಾಧ. ಪೊಲೀಸರು ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ. ಯಾರೇ ಕಾನೂನು ಕೈಗೆ ತೆಗೆದುಕೊಂಡರೂ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಕಾನೂನು ಕೈಗೆ ತೆಗೆದುಕೊಳ್ಳುವ ಸಾಹಸ ಮಾಡಬೇಡಿ ಎಂದು ಗಲಭೆಕೋರರಿಗೆ ಎಚ್ಚರಿಕೆ ನೀಡಿದ್ದಾರೆ. ಘಟನೆಗೆ ಮತ್ತೆ ರಾಜಕೀಯ ಬಣ್ಣವನ್ನ ಬಳಿಯುವುದು ಬೇಡ. ಘಟನೆಯಲ್ಲಿ ಯಾರೇ ಭಾಗಿಯಾಗಿದ್ದರೂ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ. ಹುಬ್ಬಳ್ಳಿ ನಡೆದಿರುವ ಘಟನೆ ಮತ್ತೆ ಎಲ್ಲೂ ನಡೆಯಬಾರದು. ಕಾನೂನು ಸುವ್ಯವಸ್ಥೆ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದಾರೆ.

## ಶಾಂತಿ, ಸಾಮರಸ್ಯ ಹಾಳು ಮಾಡುವ ದುಷ್ಪ್ರಯತ್ನಗಳು ಕಳವಳಕಾರಿ



ಬೆಂಗಳೂರು: ತಡರಾತ್ರಿ ಹುಬ್ಬಳ್ಳಿಯಲ್ಲಿ ನಡೆದ ಕಹಿ ಘಟನೆಗಳು ನನಗೆ ತೀವ್ರ ಆಘಾತ ಉಂಟು ಮಾಡಿವೆ. ಕರ್ನಾಟಕದ ಶಾಂತಿ, ಸಾಮರಸ್ಯ ಹಾಳು ಮಾಡುವ ದುಷ್ಪ್ರಯತ್ನಗಳು ಕಳವಳಕಾರಿ. ಧರ್ಮ ಧರ್ಮಗಳ ನಡುವೆ ಬೆಂಕಿ ಹಾಕಿ ಬೇಳೆ ಬೇಯಿಸಿಕೊಳ್ಳುವ ●9ನೇ ಪುಟಕ್ಕೆ

## ಜೆಡಿಎಸ್‌ನ ನೂತನ ರಾಜ್ಯಾಧ್ಯಕ್ಷ ಇಬ್ರಾಹಿಂ



ಬೆಂಗಳೂರು,ಏ.17–ಮಾಜಿ ಕೇಂದ್ರ ಸಚಿವ ಸಿ.ಎಂ.ಇಬ್ರಾಹಿಂ ಅವರು ಜೆಡಿಎಸ್‌ನ ನೂತನ ರಾಜ್ಯಾಧ್ಯಕ್ಷರಾಗಿ ಭಾನುವಾರ ಅಧಿಕಾರ ಸ್ವೀಕರಿಸಿದರು.

ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ಜೆಡಿಎಸ್‌ನ ನಿಕಟಪೂರ್ವ ರಾಜ್ಯಾಧ್ಯಕ್ಷ ಹೆಚ್.ಕೆ.ಕುಮಾರಸ್ವಾಮಿ ಅವರು ಸಿ.ಎಂ.ಇಬ್ರಾಹಿಂ ಅವರಿಗೆ ಪಕ್ಷದ ಧ್ವಜ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಎಲ್ಲಾ ಸಮಾಜಗಳನ್ನು ಒಟ್ಟಿಗೆ ಕರೆದುಕೊಂಡು ಹೋಗುವ ಜವಾಬ್ದಾರಿ ಸಿ.ಎಂ. ಇಬ್ರಾಹಿಂ ಅವರಿಗಿದೆ. ವಿಧಾನಸಭಾ ಚುನಾವಣೆಯಲ್ಲಿ 30–40 ಸ್ಥಾನ ಗೆಲ್ಲುವುದು ದೊಡ್ಡದೇನಲ್ಲ. ನಾವು ಸುಮ್ಮನಿದ್ದರೂ ಜನರು ನಮಗೆ ಮತ ಹಾಕಿ ಗೆಲ್ಲಿಸುತ್ತಾರೆ. ಆದರೆ ನಮ್ಮ ಗುರಿ 123 ಸ್ಥಾನ ಗೆದ್ದು, ಅಧಿಕಾರದ ಚುಕ್ಕಾಣಿ ಹಿಡಿಯುವುದಾಗಿದೆ. ಹೀಗಾಗಿ ಪಕ್ಷದ ನಾಯಕರು ಮೈಚಳಿ ಬಿಟ್ಟು ಜನರ ಬಳಿಗೆ ಹೋಗಿ ಕೆಲಸ ಮಾಡಬೇಕಾಗಿದೆ. ಆಗ ಮಾತ್ರ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲಿದೆ ಎಂದರು.

ಜನತಾ ಜಲಧಾರೆ ಹೆಸರಿನಲ್ಲಿ ಕಾರ್ಯಕ್ರಮಕ್ಕೆ ಯಶಸ್ವಿಯಾಗಿ ಚಾಲನೆ ಕೊಟ್ಟಿದ್ದೇವೆ. ಮೇ 8ರ ತನಕ ಜನತಾ ಜಲಧಾರೆ ಯಾತ್ರೆ ವಿಧಾನಸಭಾ ಕ್ಷೇತ್ರದಲ್ಲಿ ಸಂಚಾರ ನಡೆಸಲಿದೆ. ಜೆಡಿಎಸ್ ರಾಜ್ಯದಲ್ಲಿ ಶಾಂತಿಯ ತೋಟವನ್ನು ಬಯಸುತ್ತದೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಜನರ ಕಷ್ಟ ಬಗೆಹರಿಯುವುದು ಬೇಕಿಲ್ಲ ಎಂದರು.

ನೂತನ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ಜೆಡಿಎಸ್ ಒಂದು ಪಕ್ಷವಲ್ಲ, ಒಂದು ಕುಟುಂಬವಿದ್ದಂತೆ. ಪಕ್ಷದಲ್ಲಿ ಶಿಸ್ತು ಬಹಳ ಮುಖ್ಯ. ದೇವೇಗೌಡರು ಎಲ್ಲಾ ಜನಾಂಗವನ್ನೂ ಸಮನಾಗಿ ನೋಡಿದ್ದರು. ಹುಬ್ಬಳ್ಳಿ ಈದ್ಗಾ ವಿವಾದವನ್ನು ಬಗೆಹರಿಸಿ ಶಾಂತಿ ಮೂಡಿಸಿದ್ದರು. ನಮ್ಮ ಪಕ್ಷದಿಂದ ಬೇರೆಯವರು ಒಬ್ಬರನ್ನು ಕರೆದುಕೊಂಡು ಹೋದರೆ 10 ಜನ ನಮ್ಮ ಪಕ್ಷಕ್ಕೆ ಬರುತ್ತಾರೆ. ನಮಗೆ ಬೇಕಾಗಿರುವುದು ಶಕ್ತಿಯುತವಾಗಿ ಓಡಾಡುವವರು. ಮೇ 4ರ ಬಳಿಕ ನನ್ನ ಕೆಲಸ ಆರಂಭವಾದರೆ ವಿಧಾನಸಭೆ ಚುನಾವಣೆ ಬಳಿಕ ನಿಲ್ಲಲಿದೆ. ಬಸವನಬಾಗೇವಾಡಿಯಲ್ಲಿ ಮೊದಲ ಸಭೆ ನಡೆಸುತ್ತೇನೆ ಎಂದರು.



## ಬಿಜೆಪಿ ಕಾರ್ಯಕಾರಿಣಿಯಲ್ಲಿ ಚುನಾವಣಾ ರಣ ಕಹಳೆ

● ವಿಜಯನಗರ ಜಿಲ್ಲೆಯಿಂದಲೇ ವಿಜಯ ಪತಾಕೆ ಹಾರಿಸೋಣ
● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತಿಗೆ ನಡ್ಡಾ ಮೆಚ್ಚುಗೆ





ಹೊಸಪೇಟೆ (ವಿಜಯನಗರ), ಏ.17–ಹೊಸಪೇಟೆಯಲ್ಲಿ ಎರಡು ದಿನಗಳ ಬಿಜೆಪಿ ಕಾರ್ಯಕಾರಿಣಿ ಸಭೆ ಭಾನುವಾರ ಮುಕ್ತಾಯವಾಗಿದ್ದು, ಮುಂದಿನ ಚುನಾವಣೆಯಲ್ಲಿ ವಿಜಯ ಪತಾಕೆ ಹಾರಿಸಲು ಪುಣ್ಯಭೂಮಿಯಾದ ವಿಜಯನಗರದಿಂದಲೇ ಆರಂಭಿಸೋಣ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚುನಾವಣಾ ರಣಕಹಳೆ ಮೊಳಗಿಸಿದರು.

ಈ ಕಾರ್ಯಕಾರಿಣಿಯಿಂದ ಹೊಸ ದಿಕ್ಸೂಚಿ ಸಿಕ್ಕಿದೆ. ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ, ಕರ್ನಾಟಕದಲ್ಲಿ 2023ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅಷ್ಟೇ ಸತ್ಯ. ಕರ್ನಾಟಕವನ್ನು ಸುಭಿಕ್ಷಾ ಹಾಗೂ ಸಂಪದ್ಭರಿತ ರಾಜ್ಯವನ್ನಾಗಿ ಮಾಡಬೇಕೆಂಬುದು ನಮ್ಮ ಜವಾಬ್ದಾರಿ. ಪಕ್ಷ ಸಂಘಟಿಸಿ 2023ರಲ್ಲಿ ವಿಜಯ ಯಾತ್ರೆ ಆರಂಭಿಸಿ ಪಕ್ಷ ಅಧಿಕಾರಕ್ಕೆ ಬರಬೇಕು. ಲೋಕಸಭೆಯಲ್ಲಿ ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷವೂ ಆಗಿಲ್ಲ. ದೇಶದಲ್ಲಿ ಕಾಂಗ್ರೆಸ್ ಮುಳುಗಿ ಹೋಗಿದೆ. 2013ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು. ಇನ್ನು ಮುಂದೆ ಅವರು ಗೆಲ್ಲಲು ಸಾಧ್ಯವಿಲ್ಲ ಎಂದು ಸಿಎಂ ಹೇಳಿದರು. ●9ನೇ ಪುಟಕ್ಕೆ

**ಎರಡು ದಿನಗಳ ಕಾಲ ನಡೆದ ಬಿಜೆಪಿ ಕಾರ್ಯಕಾರಿಣಿಯಲ್ಲಿ 2023ರ ವಿಧಾನಸಭೆ ಚುನಾವಣೆಯಲ್ಲಿ 150 ಮಿಷನ್‌ಗೆ ಕಾರ್ಯತಂತ್ರ ರೂಪಿಸುವ ಬಗ್ಗೆ ಚರ್ಚಿಸಲಾಯಿತು. ಸರ್ಕಾರವು ಪ್ರಸ್ತುತ ಇರುವ ಗೊಂದಲಗಳಿಂದ ಹೊರ ಬರಬೇಕು. ಕಾಂಗ್ರೆಸ್‌ನ ಹಿಂದೂ ವಿರೋಧಿ ನೀತಿ ಬಯಲು ಮಾಡಬೇಕು. ಮೋದಿ ಅವರ ಸ್ವಚ್ಛ ಆಡಳಿತ, ಯಡಿಯೂರಪ್ಪ ಮಾರ್ಗದರ್ಶನ ಹಾಗೂ ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲಿ 150ರ ಗುರಿ ಮುಟ್ಟಬೇಕು ಎನ್ನುವ ಬಗ್ಗೆ ಕಾರ್ಯಕಾರಿಣಿಯಲ್ಲಿ ಚರ್ಚೆಯಾಯಿತು.**

### ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮ ವಿರೋಧಿಸಿ

## ರಾಜವಂಶಸ್ಥರ ನೇತೃತ್ವದಲ್ಲಿ ಬಹಿರಂಗ ಸಭೆ



**ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘ, ಪಾರಂಪರಿಕ ಕಟ್ಟಡ ಸಂರಕ್ಷಣಾ ಸಮಿತಿ ಸದಸ್ಯರಿಂದ ರಾಜವಂಶಸ್ಥರ ಭೇಟಿ, ಚರ್ಚೆ**

ಮೈಸೂರು, ಏ.17(ಎಂಟಿವೈ)– ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮಗೊಳಿಸುವುದನ್ನು ವಿರೋಧಿಸಿ ಎರಡು ದಿನಗಳಲ್ಲಿ ರಾಜವಂಶಸ್ಥರ ನೇತೃತ್ವದಲ್ಲಿ ಬಹಿರಂಗ ಸಭೆ ನಡೆಸಲಾಗುವುದು ಎಂದು ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಪೈಲ್ವಾನ್ ಮಹದೇವ್ ಅವರು ತಿಳಿಸಿದ್ದಾರೆ.

ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮಗೊಳಿಸಲು ಅವಕಾಶ ನೀಡದಂತೆ ಕೋರಿ ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಮುಖಂಡರು, ಪಾರಂಪರಿಕ ಕಟ್ಟಡ ಸಂರಕ್ಷಣಾ ಸಮಿತಿ ಸದಸ್ಯರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಮಹದೇವ್ ಈ ವಿಷಯ ತಿಳಿಸಿದರು.

ಈ ಸಂಬಂಧ ವಿವಿಧ ಸಂಘಟನೆಗಳ ಜೊತೆ ಸೇರಿ ಸಭೆ ನಡೆಸುತ್ತೇವೆ. ಸಭೆಯಲ್ಲಿ ನಮ್ಮ ಹೋರಾಟದ ರೂಪುರೇಷೆ ಸಿದ್ಧಪಡಿಸುತ್ತೇವೆ. ನಾವು ಯಾವುದೇ ಕಾರಣಕ್ಕೂ ಕಟ್ಟಡ ನೆಲಸಮ ಮಾಡಲು ಬಿಡುವುದಿಲ್ಲ. ಕಮಿಷನ್ ಆಸೆಗಾಗಿ ಕಟ್ಟಡ ಮರು ನಿರ್ಮಾಣ ನಡೆಯುತ್ತಿದೆ. ಯೋಗ್ಯವಾದ ಕಟ್ಟಡವನ್ನು ಸರ್ಕಾರವೇ ಕೆಡವುತ್ತಿದೆ. ಉತ್ತರ ಭಾಗದಲ್ಲಿ ಮಾರುಕಟ್ಟೆ ಕುಸಿದಿಲ್ಲ. ನವೀಕರಣದ ಹೆಸರಿನಲ್ಲಿ ಸರ್ಕಾರವೇ ಕಟ್ಟಡವನ್ನು ಕೆಡವಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಸಮಿತಿ ಹಾಗೂ ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಸದಸ್ಯರು ಶಿಥಿಲಾವಸ್ಥೆಯಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಿ ಪುನರ್ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿ, ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದು, ಇದಕ್ಕೆ ತಾವು ಸಮ್ಮತಿ ಸೂಚಿಸಬಾರದು. ನಮ್ಮ ಈ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಕೋರಿದರು.


ಅರಮನೆಯಲ್ಲಿರುವ ರಾಜವಂಶಸ್ಥರ ಖಾಸಗಿ ನಿವಾಸದಲ್ಲಿ ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಪೈಲ್ವಾನ್ ಮಹದೇವ್ ಹಾಗೂ ಪಾರಂಪರಿಕ ತಜ್ಞ ರಂಗರಾಜ್ ಹಾಗೂ ಇನ್ನಿತರರು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿ, ಕಟ್ಟಡದ ನೆಲಸಮದಿಂದ ಪಾರಂಪರಿಕತೆಗೆ ಆಗುವ ಧಕ್ಕೆ ●9ನೇ ಪುಟಕ್ಕೆ



### ಚೇಂಬರ್ ಆಫ್ ಕಾಮರ್ಸ್ ಚುನಾವಣೆ

## ಸುಧಾಕರ್ ಶೆಟ್ಟಿ ಬಣಕ್ಕೆ ಭರ್ಜರಿ ಜಯ

**ನೂತನ ಅಧ್ಯಕ್ಷರಾಗಿ ಕೆ.ಬಿ.ಲಿಂಗರಾಜು ಆಯ್ಕೆ**



ಮೈಸೂರು,ಏ.17(ಎಸ್‌ಬಿಡಿ)–ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ(ಚೇಂಬರ್ ಆಫ್ ಕಾಮರ್ಸ್)ಯ ಕಾರ್ಯಕಾರಿ ಮಂಡಳಿಗೆ ನಡೆದ ಚುನಾವಣೆಯಲ್ಲಿ ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಅವರ ತಂಡ ಭರ್ಜರಿ ಜಯಭೇರಿ ಭಾರಿಸಿದೆ. ಚುನಾವಣೆಯಲ್ಲಿ ಸ್ಪರ್ಧಿಸಿದ್ದ ತಂಡದ ಎಲ್ಲರೂ ಗೆಲುವು ಸಾಧಿಸಿ, ದಾಖಲೆ ಬರೆದಿದ್ದಾರೆ.

ಸಂಸ್ಥೆಯ 2022–23ನೇ ಸಾಲಿನ ಕಾರ್ಯಕಾರಿ ಸಮಿತಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಕೆ.ಬಿ.ಲಿಂಗರಾಜು 331 ಮತಗಳೊಂದಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಆರ್.ಆನಂದ್ (359 ಮತ), ಗೌರವ ಕಾರ್ಯದರ್ಶಿಯಾಗಿ ಎ.ಕೆ.ಶಿವಾಜಿರಾವ್ (319), ಗೌರವ ಜಂಟಿ ಕಾರ್ಯದರ್ಶಿಯಾಗಿ ವಿನೋದ್ ಜೈನ್ (306), ಖಜಾಂಚಿಯಾಗಿ ಎಸ್.ಜೆ. ಅಶೋಕ್ (311) ಚುನಾಯಿತರಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎಸ್. ಅಚ್ಯುತ, ಎಂ.ಸಿ.ಬನ್ನಾಲಿ, ಸಿ.ಕೆ.ಗಣೇಶ್, ಎನ್.ಹೆಚ್. ಜಯಂತ್, ಪಿ.ಕುಮಾರ್, ಎಸ್.ಕುಮಾರಸ್ವಾಮಿ, ಎಸ್. ಮಹಾದೇವ್, ಸಿ.ನಾರಾಯಣಗೌಡ, ಆರ್.ಎನ್. ರಮೇಶ್, ಕೆ.ಟಿ.ಶಾಮಸುಂದರ್, ಶ್ರೀಶೈಲ ರಾಮಣ್ಣವರ್, ಆರ್.ಎಂ.ಶ್ರೀವತ್ಸ ಆಯ್ಕೆಯಾಗಿದ್ದಾರೆ. ಇನ್ನು ಮೈಸೂರು ತಾಲೂಕಿನಿಂದ ರಾಧಾಕೃಷ್ಣ ಶಾಸ್ತ್ರೀ, ಡಿ.ಪದ್ಮನಾಭ ಹಾಗೂ ಬಿ.ಎಸ್.ರವೀಂದ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

### ಅಗ್ನಿಶಾಮಕ ಸೇವಾ ಸಪ್ತಾಹ

# ಮೈಸೂರಲ್ಲಿ ಬೈಕ್, ಸೈಕಲ್ ರ್‍ಯಾಲಿ

## ಬೆಂಕಿ ಆಕಸ್ಮಿಕ, ಸುರಕ್ಷತೆ ಕುರಿತು ಅರಿವು




ಅಗ್ನಿ ಸೇವಾ ಸಪ್ತಾಹದ ಅಂಗವಾಗಿ ಮೈಸೂರಲ್ಲಿ ಭಾನುವಾರ ನಡೆದ ರ್‍ಯಾಲಿಗೆ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು.

ಮೈಸೂರು,ಏ.17(ಆರ್‌ಕೆಬಿ)–ಅಗ್ನಿ ಸೇವಾ ಸಪ್ತಾಹದ ಅಂಗವಾಗಿ ಬೆಂಕಿ ಆಕಸ್ಮಿಕಗಳು ಮತ್ತು ತುರ್ತು ಸಂದರ್ಭ ದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜನಜಾಗೃತಿಗಾಗಿ ನೂರಾರು ಮಂದಿ ಭಾನುವಾರ ಬೈಕ್ ಮತ್ತು ಸೈಕಲ್ ರ್‍ಯಾಲಿ ಮೂಲಕ ತಿಳುವಳಿಕೆ ಮೂಡಿಸಿದರು. ಮೈಸೂರು ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ಹೊರಟ ರ್‍ಯಾಲಿ ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ), ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ ಸೇರಿದಂತೆ ಹಲವು ಪ್ರಮುಖ ರಸ್ತೆಗಳ ಮೂಲಕ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ಆವರಣ ತಲುಪಿತು. ಅಗ್ನಿಶಾಮಕ ವಿಭಾಗದೊಂದಿಗೆ ಅಪೋಲೋ ಆಸ್ಪತ್ರೆ, ಜಾವಾ, ಯೆಜ್ಡಿ, ಟ್ರಿಣ್–ಟ್ರಿಣ್, ಲೇಟ್ಸ್ ಡೂ ಇಟ್ ಸೇರಿದಂತೆ ಹಲವು ಸಂಸ್ಥೆಗಳು ರ್‍ಯಾಲಿಗೆ ಸಹಯೋಗ ನೀಡಿದ್ದವು.

'ಅಗ್ನಿ ಸುರಕ್ಷತೆ ಕಲಿಯಿರಿ, ಉತ್ಪಾದಕತೆಯನ್ನು ಹೆಚ್ಚಿಸಿ' ಎಂಬ ವಿಷಯದೊಂದಿಗೆ ನಡೆದ ರ್‍ಯಾಲಿಗೆ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಸಿರು ಬಾವುಟ ಬೀಸುವ ಮೂಲಕ ಚಾಲನೆ ನೀಡಿದರು. ರ್‍ಯಾಲಿಯಲ್ಲಿ ಭಾಗವಹಿಸಿದ್ದವರು ಅಗ್ನಿ ಸುರಕ್ಷತೆಯ ಸಂದೇಶಗಳನ್ನು ಹೊಂದಿರುವ ಫಲಕಗಳನ್ನು ಹಿಡಿದು, ಪ್ರಮುಖ ರಸ್ತೆಗಳಲ್ಲಿ ಸಾಗಿದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಮೈಸೂರು ವಿಭಾಗದ ಮುಖ್ಯ ಅಗ್ನಿಶಾಮಕ ಅಧಿಕಾರಿ ಪಿ.ಎಸ್. ಜಯರಾಮಯ್ಯ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಕೆ.ಪಿ.ನವೀನ್‌ಕುಮಾರ್, ಜಿಲ್ಲಾಡಳಿತದ ವಿಪತ್ತು ನಿರ್ವಹಣಾ ಘಟಕದ ಅಧಿಕಾರಿ ಸುಧೀರ್, ಬನ್ನಿಮಂಟಪ ಅಗ್ನಿಶಾಮಕ ಅಧಿಕಾರಿ ಸಿ.ಚಂದನ, ಮಂಡ್ಯ ಅಗ್ನಿ ಶಾಮಕ ಅಧಿಕಾರಿ ಗುರುರಾಜ್, ಹೆಬ್ಬಾಳ ಅಗ್ನಿಶಾಮಕ ಅಧಿಕಾರಿ ಗಂಗಾನಾಯಕ್ ಇನ್ನಿತರರು ಉಪಸ್ಥಿತರಿದ್ದರು.

ಸರಸ್ವತಿಪುರಂ ಅಗ್ನಿಶಾಮಕ ದಳದ ಆವರಣದಲ್ಲಿ ಅಗ್ನಿ ಅನಾಹುತಗಳ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ, ಸುರಕ್ಷತಾ ಕ್ರಮಗಳು, ಅಗ್ನಿಶಾಮಕ ಸಾಧನಗಳ ಬಳಕೆ ಮತ್ತು ಇತರ ಅಗ್ನಿಶಾಮಕ ಉಪಕರಣಗಳ ನಿರ್ವಹಣೆ ಕುರಿತು ಅಣಕು ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆ ನಡೆಯಿತು.

ಕಟ್ಟಡಗಳಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಮತ್ತು ಇತರ ವಿದ್ಯುತ್ ಬೆಂಕಿ, ಎಲ್‌ಪಿಜಿ ಸಿಲಿಂಡರ್‌ಗಳ ಬಳಕೆ, ಗ್ಯಾಸ್ ಸಿಲಿಂಡರ್ ಸ್ಫೋಟದಲ್ಲಿ ಬೆಂಕಿಯನ್ನು ನಂದಿಸುವುದು, ಬಸ್‌ಗಳು, ಲಿಫ್ಟ್‌ಗಳಲ್ಲಿ ಕಂಡು ಬರುವ ಬೆಂಕಿಯನ್ನು ನಂದಿಸುವಲ್ಲಿ ಸಾರ್ವಜನಿಕರು ಏನು ಮಾಡಬೇಕು ಎಂಬ ಬಗ್ಗೆ ಅಗ್ನಿಶಾಮಕ ಸಿಬ್ಬಂದಿ ಪ್ರಾತ್ಯಕ್ಷಿಕೆ ನೀಡಿದರು.

ಇದೇ ವೇಳೆ ಕರ್ತವ್ಯದ ಸಂದರ್ಭದಲ್ಲಿ ಜೀವ ತ್ಯಾಗ ಮಾಡಿದ ಹಲವರನ್ನು ಸ್ಮರಿಸಿ, ಅವರಿಗೆ ಒಂದು ನಿಮಿಷ ಮೌನಾಚರಣೆ ಮೂಲಕ ಗೌರವ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಅಪೋಲೋ ಬಿಜಿಎಸ್ ಆಸ್ಪತ್ರೆಯ ಸಹಯೋಗದಲ್ಲಿ ಹಿರಿಯ ತಂತ್ರಜ್ಞ ಡಾ.ಫಜ್ಲುಲ್ ರೆಹಮಾನ್ ನೇತೃತ್ವದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ 80ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು.

ಅಪೋಲೋ ಆಸ್ಪತ್ರೆಯ ಡಾ. ಸತೀಶ್ ಕುಮಾರ್ ರೆಡ್ಡಿ, ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಅಧಿಕಾರಿ ಎನ್.ಸಿ.ತ್ಯಾಗರಾಜ್, ಫೈರ್ ಕೂಲ್‌ನ ವೆಂಕಟೇಶ್, ಕ್ಲುಬರ್ ಲ್ಯೂಬ್ರಿಕೇಷನ್ ಸಂಸ್ಥೆಯ ಸಹಾಯಕ ವ್ಯವಸ್ಥಾಪಕಿ ಭಾಮಿನಿ ಇನ್ನಿತರರು ಉಪಸ್ಥಿತರಿದ್ದರು.



ಜನಜಾಗೃತಿಗಾಗಿ ನೂರಾರು ಮಂದಿ ಬೈಕ್ ಮತ್ತು ಸೈಕಲ್ ರ್‍ಯಾಲಿ ನಡೆಸಿದರು.



### ಅಗ್ನಿಶಾಮಕ ಅಧಿಕಾರಿಗೆ ಮೇಯರ್ ತರಾಟೆ

ಮೈಸೂರು, ಏ.17– ಅಗ್ನಿಶಾಮಕ ಸೇವಾ ಸಪ್ತಾಹ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಬೈಕ್ ಮತ್ತು ಸೈಕಲ್ ರ್‍ಯಾಲಿಯ ವೇಳೆ ತಮಗೆ ಅಗೌರವ ತೋರಲಾಗಿದೆ ಎಂದು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಅವರು ಅಗ್ನಿಶಾಮಕ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ಭಾನುವಾರ ನಡೆಯಿತು.



ಜಾಥಾಗೆ ತಮ್ಮನ್ನು ಆಹ್ವಾನಿಸಿದ್ದ ಸಮಯಕ್ಕೆ ಬಂದಿದ್ದರೂ ತಾವು ಆಗಮಿಸುವ ಮೊದಲೇ ಆಯೋಜಕರು ರ್‍ಯಾಲಿಗೆ ಚಾಲನೆ ಕೊಟ್ಟಿದ್ದರು. ಇದರಿಂದ ಕೆಂಡಾಮಂಡಲರಾದ ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ನೀವು ಹೇಳಿದ ಸಮಯಕ್ಕೆ ಬಂದಿದ್ದೇನೆ. ನನಗೆ ಅಗೌರವ ತೋರಿದ್ದೀರಿ. ನಾನು ಮೇಲಧಿಕಾರಿಗೆ ಬರೆಯುತ್ತೇನೆ ಎಂದು ಆಯೋಜಕರ ವಿರುದ್ಧ ಕಿಡಿಕಾರಿದರು. 'ಎಷ್ಟು ದಿನದಿಂದ ಕಾದಿದ್ರಿ ಹೀಗೆ ಅವಮಾನ ಮಾಡಲಿಕ್ಕೆ...' ಎಂದು ಅಗ್ನಿಶಾಮಕ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

# ಸುಸಜ್ಜಿತ 'ನಾಚಾರಮ್ಮ ಸಭಾ ಭವನ' ಉದ್ಘಾಟನೆ

## ಮಕ್ಕಳಿಂದ ದೂರಾಗುವ ವೃದ್ಧರಿಗೂ ನೆರವು: ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್

ಮೈಸೂರು,ಏ.17(ಆರ್‌ಕೆಬಿ)– ಮೈಸೂರಿನ ಜಯನಗರದ 2ನೇ ಮುಖ್ಯರಸ್ತೆಯಲ್ಲಿ ಕೌಶಿಕ ಸಂಕೇತಿ ಸಂಘವು 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಸುಸಜ್ಜಿತ 'ನಾಚಾರಮ್ಮ ಸಭಾ ಭವನ'ದ ಉದ್ಘಾಟನೆಯನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭಾನುವಾರ ನೆರವೇರಿಸಿದರು.

ಕೌಶಿಕ ಸಂಕೇತಿ ಸಂಘ ಬಾಲಕರ ವಿದ್ಯಾರ್ಥಿನಿಲಯದ ಆವರಣದಲ್ಲಿ ನಿರ್ಮಾಣಗೊಂಡಿರುವ ಭವನವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, 1944ರಲ್ಲಿ ಸ್ಥಾಪನೆಗೊಂಡ ಕೌಶಿಕ ಸಂಕೇತಿ ಸಂಘವು ತನ್ನ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸುಸಜ್ಜಿತ ಸಭಾ ಭವನ ನಿರ್ಮಿಸಿರುವುದು ಶ್ಲಾಘನೀಯ ಕಾರ್ಯ ಎಂದರು.

ನೆರೆ ರಾಜ್ಯ ಕೇರಳದಿಂದ ಮೈಸೂರಿಗೆ ವಲಸೆ ಬಂದು ನೆಲೆಸಿದ ಕೌಶಿಕ ಸಂಕೇತಿ ಸಮುದಾಯ, ಬಳಿಕ ಶಿವಮೊಗ್ಗ ಇನ್ನಿತರೆ ಕಡೆಗಳಲ್ಲೂ ನೆಲೆಗೊಂಡಿತು. ವ್ಯವಸಾಯ, ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ನೀಡಿ ಸ್ವಯಂ ಅಭಿವೃದ್ಧಿ ಹೊಂದಿದ ಸಮುದಾಯ.



ಮೈಸೂರಿನ ಜಯನಗರದಲ್ಲಿ ಕೌಶಿಕ ಸಂಕೇತಿ ಸಂಘದ 'ನಾಚಾರಮ್ಮ ಸಭಾ ಭವನ'ವನ್ನು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಎಂ.ಎನ್.ಅನಂತ, ವಲಯ ಅಧ್ಯಕ್ಷ ಆರ್.ಎಸ್.ಪದ್ಮನಾಭ ಇನ್ನಿತರರು ಚಿತ್ರದಲ್ಲಿದ್ದಾರೆ.

ಇವರೆಲ್ಲರೂ ಸೇರಿ ದಾನಿಗಳ ನೆರವಿನ ಹಸ್ತದಿಂದ ಇಂದು ಇಂತಹ ಕಟ್ಟಡ ಬರಲು ಸಾಧ್ಯವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿವೇತನದ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇಲ್ಲಿ ಓದುವ ವಿದ್ಯಾರ್ಥಿಗಳು ಕ್ರಮೇಣ ಉನ್ನತ ವ್ಯಾಸಂಗ ಪಡೆದು, ಹೊರ ರಾಜ್ಯ, ವಿದೇಶಗಳಿಗೆ ಉದ್ಯೋಗ ಅರಸಿ ಹೋಗುವುದರಿಂದ ವೃದ್ಧಾಪ್ಯದ ಹೊಸ್ತಿಲಲ್ಲಿರುವವರಿಗೆ ತೊಂದರೆಯಾಗುವುದನ್ನು ಮನಗಂಡು ವೃದ್ಧಾಶ್ರಮದಲ್ಲಿರುವವರಿಗೆ ನೆರವಾಗುತ್ತಿರುವ ಸಂಘದ ಕಾರ್ಯವನ್ನು ಅಭಿನಂದಿಸಿದರು.

ಕೌಶಿಕ ಸಂಕೇತಿ ಸಂಘದ ಅಧ್ಯಕ್ಷ ಎಂ.ಎನ್.ಅನಂತ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಸಂಘದ ಮೈಸೂರು ವಲಯ ಅಧ್ಯಕ್ಷ ಆರ್.ಎಸ್.ಪದ್ಮನಾಭ, ಉಪಾಧ್ಯಕ್ಷ ಎ.ವಿ.ಶ್ರೀಧರಮೂರ್ತಿ, ಪ್ರಧಾನ ಕಾರ್ಯದರ್ಶಿ ಬಿ.ಎನ್.ರಘುನಾಥ್, ಕಟ್ಟಡ ಯೋಜನೆ ಉಪಸಮಿತಿ ಅಧ್ಯಕ್ಷ ಪಿ.ಎಂ.ಸುಬ್ಬರಾಯ, ಮೈಸೂರು ವಲಯ ಯೋಜನಾ ವ್ಯವಸ್ಥಾಪಕ ಕೆ.ಎಸ್.ಸುಬ್ಬರಾಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಇಂದಿನಿಂದ ಶಕ್ತಿಧಾಮದಲ್ಲಿ ಬೇಸಿಗೆ ಶಿಬಿರಕ್ಕೆ ಚಾಲನೆ

## ನಟ ಶಿವರಾಜ್‌ಕುಮಾರ್, ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಸೇರಿ ಹಲವು ಗಣ್ಯರು ಭಾಗಿ



ಮೈಸೂರು, ಏ.17(ಪಿಎಂ)– ಮೈಸೂರಿನ ಶಕ್ತಿಧಾಮವು (ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ) ಸ್ವಯಂ ಸೇವಾ ಸಂಸ್ಥೆ ವತಿಯಿಂದ ಏ.18 ರಿಂದ 24ರವರೆಗೆ ಸಂಸ್ಥೆಯ ಹೆಣ್ಣು ಮಕ್ಕಳು ಮತ್ತು ಸುತ್ತ–ಮುತ್ತಲಿನ ಅವಕಾಶ ವಂಚಿತ ಹೆಣ್ಣು ಮಕ್ಕಳಿಗೆ ಉಚಿತ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಸೋಮವಾರ (ಏ.18) ಮಧ್ಯಾಹ್ನ 3.30ಕ್ಕೆ ಶಕ್ತಿಧಾಮದ ಆವರಣದಲ್ಲಿ ಹಮ್ಮಿಕೊಂಡಿರುವ ಉದ್ಘಾಟನಾ ಸಮಾರಂಭದಲ್ಲಿ ಶಿವರಾಜ್ ಕುಮಾರ್ ಶಿಬಿರಕ್ಕೆ ಚಾಲನೆ ನೀಡಲಿದ್ದು, ಶಕ್ತಿಧಾಮದ ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸ್ಥೆಯ ಉಪಾಧ್ಯಕ್ಷರೂ ಆದ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ, ಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಜಿ.ಎಸ್.ಜಯದೇವ, ಖಜಾಂಚಿ ಎಂ.ಎನ್.ಸುಮನ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ರಾಜ್ಯದ ಹಿಂದುಳಿದ ಪ್ರದೇಶಗಳ ನೂರಾರು ಅವಕಾಶ ವಂಚಿತ ಹೆಣ್ಣು ಮಕ್ಕಳು ಸಂಸ್ಥೆಯಲ್ಲಿ ವಸತಿ ಸೌಲಭ್ಯ ಪಡೆದು, ಮೈಸೂರಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸಂಸ್ಥೆಯು ಹೆಣ್ಣು ಮಕ್ಕಳ ಶೈಕ್ಷಣಿಕ ಸಶಕ್ತೀ ಕರಣದ ಮಹದಾಶಯದೊಂದಿಗೆ ತನ್ನ ಆವರಣದಲ್ಲಿಯೇ ಸಂಸ್ಥೆ ಮಕ್ಕಳಿಗೆ ಶಾಲೆಯನ್ನು ಪ್ರಾರಂಭಿಸಿ ಗುಣಮಟ್ಟದ ಶಿಕ್ಷಣ ಒದಗಿಸುವ ದೃಢ ನಿರ್ಧಾರ ಕೈಗೊಂಡು, ಸರ್ಕಾರದ ಅನುಮತಿ ಪಡೆದಿದೆ. ಸಂಸ್ಥೆಯಲ್ಲಿ ವಸತಿ ಸೌಲಭ್ಯ ಪಡೆದ ಹೆಣ್ಣು ಮಕ್ಕಳ ಜೊತೆಗೆ ಸುತ್ತಮುತ್ತಲಿನ ಪ್ರದೇಶದ ಅವಕಾಶ ವಂಚಿತ ಹೆಣ್ಣು ಮಕ್ಕಳಿಗೂ ಉಚಿತ ಶಿಕ್ಷಣ ನೀಡುವ ಉದ್ದೇಶ ಹೊಂದಲಾಗಿದೆ. ಹಾಗಾಗಿ 2022–23ನೇ ಶೈಕ್ಷಣಿಕ ಸಾಲಿನಿಂದ ನರ್ಸರಿ ಮತ್ತು ಪ್ರಾಥಮಿಕ ಶಾಲಾ ವಿಭಾಗಗಳನ್ನು ಪ್ರಾರಂಭಿಸಲಾಗುತ್ತಿದೆ. ಇದರ ಭಾಗವಾಗಿ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಂತೃಪ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಅರಳಿ ಮರದ ಕೆಳಗೆ ಇದ್ದ ನೂರಾರು ದೇವರ ಫೋಟೋಗಳ ವಿಸರ್ಜನೆ

ಮೈಸೂರು,ಏ.17(ಎಂಟಿವೈ)– ಮೈಸೂರಿನ ವಿಜಯನಗರದ ಒಂದನೇ ಹಂತದ ಪಾರ್ಕ್ ಬಳಿ ಇರುವ ಅರಳಿ ಮರದ ಕೆಳಗೆ ಇಡಲಾಗಿದ್ದ ನೂರಾರು ದೇವರ ಫೋಟೋಗಳನ್ನು ಕ್ಲೀನ್ ಮೈಸೂರು ತಂಡದ ಸದಸ್ಯರು ಗೌರವಯುತವಾಗಿ ವಿಸರ್ಜನೆ ಮಾಡಿ ಗಮನ ಸೆಳೆದರು.

ಕಳೆದ ಹಲವು ವರ್ಷಗಳಿಂದ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಒಡೆದು ಹೋದ ಮತ್ತು ವಿರೂಪಗೊಂಡ ವಿವಿಧ ದೇವರ ಫೋಟೋಗಳನ್ನು ತಂದು ಅರಳಿಮರದ ಬುಡದಲ್ಲಿಟ್ಟು ವಾಪಸ್ಸಾಗುತ್ತಿದ್ದರು. ಇದರಿಂದ ದೇವರ ನೂರಾರು ಫೋಟೋಗಳು ಸಂಗ್ರಹವಾಗಿದ್ದವು. ಅಲ್ಲದೆ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಇದನ್ನು ಗಮನಿಸಿದ ಕ್ಲೀನ್ ಮೈಸೂರು ತಂಡದ ಸದಸ್ಯರು ಕೆಲವು ವಿದ್ಯಾರ್ಥಿನಿಯರೊಂದಿಗೆ ಆಗಮಿಸಿ, ಅರಳಿಮರದ ಬುಡದಲ್ಲಿ ಬಿದ್ದಿದ್ದ ದೇವರ ಫೋಟೋಗಳಿಂದ ಫ್ರೇಮ್, ಗಾಜು ಇವುಗಳಿಂದ ಬೇರ್ಪಡಿಸಿದರು. ದೇವರ ಫೋಟೋಗಳನ್ನು ಹಳ್ಳ ತೆಗೆದು ಅದರೊಳಗೆ ಹೂತು ಹಾಕಿ ಅದರ ಮೇಲೆ ಒಂದು ಪಾರಿಜಾತ ಮತ್ತು ಬೆಟ್ಟದ ನೆಲ್ಲಿಕಾಯಿ ಗಿಡಗಳನ್ನು ನೆಟ್ಟು ನೀರು ಹಾಕಿದರು. ಕ್ಲೀನ್ ಮೈಸೂರು ತಂಡದ ಲೀಲಾ ವೆಂಕಟೇಶ್, ಪ್ರಮೀಳಾ ರವೀಂದ್ರ ಹಾಗೂ ಯುವತಿಯರು ಸ್ವಚ್ಛತಾ ಅಭಿಯಾನದಲ್ಲಿದ್ದರು.



## PUC ವಿದ್ಯಾರ್ಥಿಗಳಿಗೂ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ

ಬೆಂಗಳೂರು: ಏ.22ರಿಂದ ಮೇ 18ರವರೆಗೂ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದೆ. ಈ ಹಿನ್ನೆಲೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ನಿಗಮವು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳವರೆಗೆ ಉಚಿತವಾಗಿ ಪ್ರಯಾಣಿಸುವ ಅವಕಾಶ ಕಲ್ಪಿಸಿದೆ. ಅಲ್ಲದೆ ಪರೀಕ್ಷೆ ಮುಗಿದ ನಂತರ ದ್ವಿತೀಯ ಪಿಯುಸಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ಉಚಿತವಾಗಿ ಸರ್ಕಾರಿ ಬಸ್‌ನಲ್ಲಿ ವಾಪಸ್ ತೆರಳಬಹುದಾಗಿದೆ. ವಿದ್ಯಾರ್ಥಿಗಳು ಅವರ ವಿದ್ಯಾ ಸಂಸ್ಥೆಯ ಹೊರತಾಗಿ ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಾಸಸ್ಥಳದ ಪರೀಕ್ಷಾ ಕೇಂದ್ರಗಳವರೆಗೆ ನಿಗಮದ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಡಲಾಗಿದೆ.

# ಅರಣ್ಯ ಇಲಾಖೆ ನೌಕರರ ಗೃಹ ನಿರ್ಮಾಣ ಸಂಘಕ್ಕೆ ನಿರ್ದೇಶಕರ ಆಯ್ಕೆ





ಮೈಸೂರು,ಏ.17(ಎಂಟಿವೈ)–ಮೈಸೂರು ಜಿಲ್ಲಾ ಅರಣ್ಯ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಗೆ ಮುಂದಿನ ಐದು ವರ್ಷಗಳ ಅವಧಿಗಾಗಿ ನಡೆದ ಚುನಾವಣೆಯಲ್ಲಿ 12 ಮಂದಿ ನಿರ್ದೇಶಕರಾಗಿ ಆಯ್ಕೆಯಾದರು.

ಮೈಸೂರಿನ ಅಶೋಕಪುರಂನಲ್ಲಿ ಅರಣ್ಯ ಭವನ ಆವರಣದಲ್ಲಿರುವ ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ನಿರ್ದೇಶಕರಾಗಿ ಬಂಡೀಪುರ ಹುಲಿ ಯೋಜನೆ ಕಚೇರಿಯ ಅಧೀಕ್ಷಕ ಎಸ್.ಶೇಖರ್, ಕೇಶವಮೂರ್ತಿ, ಕೆ.ಸಿ.ನಾಗಭೂಷಣ ಆರಾಧ್ಯ, ವಿ.ಗೋಪಾಲಶೆಟ್ಟಿ, ಆರ್.ಸಿದ್ದಯ್ಯ, ನಾಗರಾಜು, ಡಿ. ಸಿದ್ದರಾಜು, ಮಹಿಳಾ ಕೋಟಾದಲ್ಲಿ ಎಂವಿಎನ್ ರತ್ನ, ಸುಧಾಮಣಿ, ಪರಿಶಿಷ್ಟ ಜಾತಿ ಕೋಟಾದಲ್ಲಿ ಡಿ.ಮಹಾದೇವಯ್ಯ, ಪರಿಶಿಷ್ಟ ಪಂಗಡ ಕೋಟಾದಲ್ಲಿ ಡಿ.ಪ್ರೇಮಕುಮಾರ್ ಚುನಾಯಿತರಾದರು. ಹಿಂದುಳಿದ ವರ್ಗಗಳ ಕೋಟಾದಲ್ಲಿ ಎಂ.ಪುಟ್ಟಮಾದೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದರು. 12 ಸ್ಥಾನಕ್ಕೆ 17ಮಂದಿ ಕಣದಲ್ಲಿದ್ದರು

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆ ಅಧಿಕಾರಿ ಬಿ.ಎನ್.ರಘು ಕಾರ್ಯನಿರ್ವಹಿಸಿದರು. ಹಿಂದಿನ ಅವಧಿಯಲ್ಲಿ ಅವಿರೋಧ ಆಯ್ಕೆ ಮಾಡಲಾಗಿತ್ತು. ಕೋವಿಡ್ ಕಾರಣದಿಂದ ಚುನಾವಣೆ ನಡೆದಿರಲಿಲ್ಲ. ಮುಂದಿನ ವಾರ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

## ಯುವಕ ನಾಪತ್ತೆ



ಮೈಸೂರು, ಏ.17–ನಾಗಮಲೆಗೆ ಹೋದ ಯುವಕನೋರ್ವ ಕಾಣೆಯಾಗಿರುವ ಪ್ರಕರಣ ನಗರದ ಗೋಕುಲಂನಿಂದ ವರದಿಯಾಗಿದೆ. ಬಡಾವಣೆಯ ವಾಸಿ ಹುಚ್ಚನಾಯಕ ಅವರ ಮಗ ಹೆಚ್.ಶ್ರೇಯಸ್ ಕುಮಾರ್ (23) ಕಾಣೆಯಾದ ಯುವಕ. ಈತ ವಿದ್ಯಾವರ್ಧಕ ಕಾಲೇಜಿನಲ್ಲಿ ಎಂ.ಕಾಂ. ವ್ಯಾಸಂಗ ಮಾಡುತ್ತಿದ್ದು, ಆಧ್ಯಾತ್ಮಿಕ ವಿಚಾರಗಳಲ್ಲಿ ಆಕರ್ಷಿತನಾಗಿದ್ದ. ಏ.6ರಂದು ನಾಗಮಲೆಗೆ ಹೋಗಿ–ಬರುತ್ತೇನೆ ಎಂದು ಹೇಳಿ ಮನೆಯಲ್ಲಿ ತನ್ನ ಮೊಬೈಲ್ ಇಟ್ಟು ಸಿಮ್ ಮಾತ್ರ ತೆಗೆದುಕೊಂಡು ಹೋಗಿರುತ್ತಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇದುವರೆಗೂ ಮನೆಗೆ ಹಿಂತಿರುಗದ ಕಾರಣ ಆತನನ್ನು ಹುಡುಕಿಕೊಡುವಂತೆ ತಂದೆ ಹುಚ್ಚನಾಯಕ ಅವರು ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈತನ ಬಗ್ಗೆ ಸುಳಿವು ಸಿಕ್ಕವರು ದೂ: 0821–2418316, 2418339 ಮೂಲಕ ತಿಳಿಸಲು ಕೋರಲಾಗಿದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

18.04.2022 ಸೋಮವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022 ರಿಂದ 26.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ:** ಕದಳಿ ಮಹಿಳಾ ವೇದಿಕೆ ವಾರ್ಷಿಕೋತ್ಸವ ಮತ್ತು 'ಕದಳಿಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ, ಅಧ್ಯಕ್ಷತೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಅತಿಥಿಗಳು: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಕದಳಿಶ್ರೀ ಪ್ರಶಸ್ತಿ ಪುರಸ್ಕಾರ: ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ, ಉಪಸ್ಥಿತಿ: ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ಶರಣ ಸಾಹಿತ್ಯ ಪರಿಷತ್ ನಗರ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ ಜೆಎಸ್‌ಎಸ್ ಮಹಿಳಾ ಕಾಲೇಜು ಸರಸ್ವತಿಪುರಂ, ಸಮಯ : ಬೆಳಗ್ಗೆ 10.30

■ **ಬಾಸುದೇವ ಸೋಮಾನಿ ಕಾಲೇಜು:** ಬಾಸುದೇವ ಸೋಮಾನಿ ಕಾಲೇಜು ಐಕ್ಯೂಎಸಿ, ಎನ್‌ಎಸ್‌ಎಸ್ ಹಾಗೂ ರಾಜ್ಯಶಾಸ್ತ್ರ ವಿಭಾಗದ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಆಚರಣೆ, ಉದ್ಘಾಟನೆ: ಶ್ರೀರಂಗಪಟ್ಟಣ ಉಪ ಪೊಲೀಸ್ ವರಿಷ್ಠಾಧಿಕಾರಿ ಎಸ್.ಎನ್.ಸಂದೇಶ್‌ಕುಮಾರ್, ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ.ಪುಟ್ಟಸ್ವಾಮಿ, ಬಹುಮಾನ ವಿತರಣೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಬಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ.ಎನ್.ಎಸ್.ರಾಜೇ ಅರಸ್, ಮುಖ್ಯ ಅತಿಥಿಗಳು: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಕುಬೇರ್ ಪಿ. ಗೌಡ, ಮ್ಯಾನೇಜಿಂಗ್ ಟ್ರಸ್ಟಿ ಪ್ರಭಾ ಪುಟ್ಟಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಸಮಯ ಬೆಳಗ್ಗೆ: 11ಕ್ಕೆ

### ವಿವಿಧೆಡೆ ಶ್ರೀ ರಾಮನವಮಿ

■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ವಿದ್ವಾನ್‌ರಾಮಕೃಷ್ಣನ್ ಮೂರ್ತಿ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಮೈಸೂರು ಕಾರ್ತಿಕ್ –ಪಿಟೀಲು, ವಿದ್ವಾನ್ ಅನಂತ ಆರ್.ಕೃಷ್ಣನ್ –ಮೃದಂಗ, ವಿದ್ವಾನ್ ವಾಜಪಲ್ಲಿ ಕೃಷ್ಣಕುಮಾರ್–ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ ಸಂಜೆ 5.30ಕ್ಕೆ.

■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ಶ್ರುತಿ ಮಹಿಳಾ ಸಮಾಜದಿಂದ ಭಜನೆ, ಸಂಜೆ 6ಕ್ಕೆ ಶ್ರೀ ಕೃಪಾ ಕಲಾ ಬಳಗದಿಂದ ಭಜನೆ ಭಜನೆ, ಸಂಜೆ 7 ರಿಂದ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ "ಸಂಗ್ರಾಮದ ಸ್ಮೃತಿಗಳು" ಮೈಸೂರು ಸಂಸ್ಥಾನದ ಹೋರಾಟದ ನೆನಪುಗಳ ಮಾಲೆ ಪ್ರಸ್ತುತಿ: ದಿವಾಕರ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಹಂಸಿನಿ ಎಸ್. ಕುಮಾರ್, ಎಂ.ಎ. ಶೋಭಾ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ: ಮೈಸೂರು ಕೃಷ್ಣಮೂರ್ತಿ, 7.15 ತ್ಯಾಜ್ಯ ನಿಭಾಯಿಸುವ ರೀತಿ "ಮನೆ ಬಾಗಿಲಿಗೆ ಸಮಗ್ರ ಮಾಹಿತಿ" ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ ಪ್ರಾಯೋಜಿತ ಕಾರ್ಯಕ್ರಮ, 9.00 "ಯಕ್ಷ ಪರಂಪರೆ" ಯಕ್ಷಗಾನದ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ: ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜತ ಕಾರ್ಯಕ್ರಮ, ನಿರ್ಮಾಣ ಮತ್ತು ಪ್ರಸ್ತುತಿ: ದಿವಾಕರ ಹೆಗಡೆ, 9.35 ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ ಆಕಾಶವಾಣಿಯೊಂದಿಗೆ", 10.00 ಲಯ ಸಂಭ್ರಮ ತಾಳ, ಲಯ, ರಸಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ: ಹೆಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ: ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

**ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ಭಕ್ತಿಗೀತೆಗಳು: ಎಲ್. ಅರ್ಚನಾ, ಎಂ. ರಾಘವೇಂದ್ರ, 12.45 ನಮ್ಮ ಆರೋಗ್ಯ "ಕ್ಷಯಮುಕ್ತ ಭಾರತ, ಕ್ಷಯಮುಕ್ತ ಮೈಸೂರು" ಕುರಿತು ಡಾ. ಮಹಮದ್ ಸಿರಾಜ್ ಅಹಮದ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆ– ಎಂ.ಆರ್. ಶ್ರೀಹರ್ಷ, 3.00 ಓಲೇಟಿ ವೆಂಕಟೇಶ್ವರಲು ಹಾಡುಗಾರಿಕೆ, 4.00 ಮಹಿಳಾರಂಗ "ಆಕಾಶವಾಣಿ ಅಡುಗೆ ಮನೆ" ಸಂಪನ್ಮೂಲ ವ್ಯಕ್ತಿಗಳೊಂದಿಗೆ ನೇರ ಫೋನ್ ಇನ್ ಕಾರ್ಯಕ್ರಮ ಪ್ರಸ್ತುತಿ: ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ "ಕಿಸಾನ್‌ವಾಣಿ, ಕೃಷಿ ಬದುಕಿನ ಯಶಸ್ವಿ ಯಾನ" ಸುರೇಶ ದೇವಾಂಗ ಅವರೊಂದಿಗೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.



ವಿದ್ವಾನ್ ಕೆ.ಜೆ.ದಿಲೀಪ್ ಮತ್ತು ವಿದುಷಿ ಇಳಾ ಎಸ್. ದಿಲೀಪ್ ಅವರಿಂದ ದ್ವಂದ್ವ ಪಿಟೀಲು ವಾದನ, ವಿದ್ವಾನ್ ವಿನೋದ್ ಶಾಂ ಆನೂರು–ಮೃದಂಗ , ವಿದ್ವಾನ್ ಟಿ.ಎಸ್.ಗೋಪಿ ಶ್ರವಣ್–ಮೋರ್ಚಿಂಗ್, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, 4ನೇ ಮೇನ್ 9ನೇ ಕ್ರಾಸ್.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮೋತ್ಸವ, ವಿದ್ವಾನ್ ಕುಣ್ಯೈಕುಡಿ ಬಾಲಮುರಳೀಕೃಷ್ಣ ಅವರಿಂದ ಪಿಟೀಲು ವಾದನ, ಪತ್ರಿ ಸತೀಶ್ ಕುಮಾರ್ –ಮೃದಂಗ, ಗಿರಿಧರ ಉಡುಪ–ಘಟಂ, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಸಂಜೆ 6.30 ರಿಂದ.

### ಅಳಗಂಚಿ ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಡಿಇಡಿ ಕಾಲೇಜು ಸುತ್ತೂರು:** ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ವಾರ್ಷಿಕ ಶಿಬಿರ ಉದ್ಘಾಟನಾ ಸಮಾರಂಭ, ಶಿಬಿರದ ಉದ್ಘಾಟನೆ: ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜೆ.ಎಲ್.ತ್ರಿಪುರಾಂತಕ, ಅಧ್ಯಕ್ಷತೆ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ಪ್ರಾಂಶುಪಾಲ ರಘುನಂದನ್ ಆರ್, ಮುಖ್ಯ ಅತಿಥಿಗಳು: ಮೈಮುಲ್ ನಿರ್ದೇಶಕ ಕೆ.ಜಿ.ಮಹೇಶ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣ ಅಳಗಂಚಿ, ಸಮಯ ಸಂಜೆ 4.30

# ಕೇವಲ ನಾಲ್ಕಾರು ಸಾಲುಗಳಿದ್ದರೂ ಮುಕ್ತಕ ಸಾಹಿತ್ಯದ ಭಾವ ಅಗಾಧ

**● ವಕೀಲ ನೀಲಕಂಠನಹಳ್ಳಿ ತಮ್ಮಣ್ಣಗೌಡ ಅಭಿಮತ ● 'ಕಾರ್ತಿಕ ಮಾಸ' ಮುಕ್ತಕ ಕೃತಿ ಬಿಡುಗಡೆ**



ಮೈಸೂರಿನ ವಿಜಯನಗರದ ಜಿಲ್ಲಾ ಕಸಾಪ ಭವನದಲ್ಲಿ ಭಾನುವಾರ ಲೇಖಕಿ ಕಮಲಾ ರಾಜೇಶ್ ಅವರಿಗೆ 'ಸಾಹಿತ್ಯ ಸೇವಾರತ್ನ ಪ್ರಶಸ್ತಿ' ಹಾಗೂ ಇವರ ತಂದೆಯೂ ಆದ ಮಾಜಿ ಸೈನಿಕ ರಂಗೇಗೌಡ ಅವರಿಗೆ 'ಕಾಯಕ ಸೇವಾರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು,ಏ.17(ಪಿಎಂ)– ಮುಕ್ತಕ ಸಾಹಿತ್ಯದಲ್ಲಿ ಕೇವಲ ನಾಲ್ಕಾರು ಸಾಲುಗಳಿದ್ದರೂ ಅದರೊಳಗಿನ ಭಾವ ಅಗಾಧ. ಕೆಲ ಸಾಲುಗಳಲ್ಲೇ ವಸ್ತು ವಿಷಯದ ಇಡೀ ಪರಿಸರವನ್ನು ಈ ಸಾಹಿತ್ಯ ಅನಾವರಣ ಮಾಡುತ್ತದೆ ಎಂದು ಅಂಕಣಕಾರ ಹಾಗೂ ವಕೀಲ ನೀಲಕಂಠನಹಳ್ಳಿ ತಮ್ಮಣ್ಣಗೌಡ ಹೇಳಿದರು.

ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಭವನದಲ್ಲಿ ಜಿಲ್ಲಾ ಕಸಾಪ, ಹಿಮಾಲಯ ಪ್ರತಿಷ್ಠಾನ ಮತ್ತು ಕನ್ನಡ ಸಾಹಿತ್ಯ ಕಲಾ ಕೂಟದ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕಮಲಾ ರಾಜೇಶ್ ಅವರ 'ಕಾರ್ತಿಕ ಮಾಸ' ಮುಕ್ತಕ ಕೃತಿ ಬಿಡುಗಡೆಗೊಳಿಸಿ, ಕೃತಿ ಕುರಿತು ಅವರು ಮಾತನಾಡಿದರು.


ಮುಕ್ತಕ ಮತ್ತು ಚುಟುಕು ಸಾಹಿತ್ಯ ಎರಡೂ ಸಮಾನವಾಗಿ ಒಂದಕ್ಕೊಂದು ಪೂರಕವಾದ ಸ್ವರೂಪ ಹೊಂದಿವೆ. ಒಟ್ಟಾರೆ ಈ ಎರಡು ವಿಧದ ಸಾಹಿತ್ಯವೂ ಕೆಲ ಸಾಲುಗಳಲ್ಲೇ ಅಗಾಧ ಭಾವವನ್ನು ಅನಾವರಣ ಮಾಡುತ್ತವೆ ಎಂದು ತಿಳಿಸಿದರು.

ಇಂದು ಬಿಡುಗಡೆಗೊಂಡ ಕಾರ್ತಿಕ ಮಾಸ ಕೃತಿಯಲ್ಲಿ 106 ಕವನ ಮತ್ತು ಪದ್ಯಗಳು ಇವೆ. ಇಲ್ಲಿನ ಕಾವ್ಯ ಮಿಂಚಿನ ಸಂಚಲನ ಉಂಟು ಮಾಡಲಿವೆ. ಪುರಾಣ, ಪರಿಸರ, ರಾಷ್ಟ್ರಭಕ್ತಿ, ಪ್ರೀತಿ–ಪ್ರಣಯ ಮತ್ತು ಭಕ್ತಿ ಸೇರಿದಂತೆ ಮೊದಲಾದ ವಿಷಯ ಕುರಿತಂತೆ ಮುಕ್ತಕ ಸ್ವರೂಪದ ಸಾಹಿತ್ಯ ಕೃತಿಯಲ್ಲಿ ಮೂಡಿಬಂದಿದೆ ಎಂದರು.

ಇಂದು ರಾಜ್ಯದಲ್ಲಿ ನಡೆಯುತ್ತಿರುವ ಸಂಘರ್ಷ ನೋಡಿದರೆ, ನಾಗರಿಕ ಸಮಾಜದಲ್ಲಿ ನಾವಿದ್ದೇವಾ? ಎಂದು ಪ್ರಶ್ನೆ ಮೂಡುತ್ತದೆ. 'ರಾಮ ರಾಜ್ಯ' ಎಂಬ ಕವನವೊಂದು ಈ ಕೃತಿಯಲ್ಲಿದ್ದು, ಇದರಲ್ಲಿ ಶಾಂತಿಯು ಈ ರಾಜ್ಯ, ದೇಶ ಮತ್ತು ಭೂಮಿ ಮೇಲೆ ನೆಲಸಬೇಕೆಂಬ ಆಶಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಮುಕ್ತಕ ಸಾಹಿತ್ಯ ಸೇವೆಗಾಗಿ ಕಮಲಾ ರಾಜೇಶ್ ಅವರಿಗೆ 'ಸಾಹಿತ್ಯ ಸೇವಾರತ್ನ ಪ್ರಶಸ್ತಿ' ಹಾಗೂ ಇವರ ತಂದೆಯೂ ಆದ ಮಾಜಿ ಸೈನಿಕ ರಂಗೇಗೌಡ ಅವರಿಗೆ 'ಕಾಯಕ ಸೇವಾರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಯೂನಿವರ್ಸಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ್ ಜಿ.ಎಸ್.ಹಳ್ಳಿ, ಮುಕ್ತಕ ಸಾಹಿತಿ ಮುತ್ತುಸ್ವಾಮಿ, ಲೇಖಕಿ ಲತಾ ಮೋಹನ್, ಸಮಾಜ ಸೇವಕ ಎಂ.ಎಲ್.ಕಲ್ಯಾಣ್‌ಕುಮಾರ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಮತ್ತಿತರರು ಹಾಜರಿದ್ದರು.

# ಆಗಸದಲ್ಲಿ ಪಿಂಕ್ ಮೂನ್



ಮೈಸೂರು, ಏ.17(ಎಂಟಿವೈ)–ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಕಳೆದ ರಾತ್ರಿ 12.15ಕ್ಕೆ ಪಿಂಕ್ ಮೂನ್(ಸೂಪರ್ ಮೂನ್) ಗೋಚರಿಸಿತು. ಹಿಂದೂ ಕ್ಯಾಲೆಂಡರ್‌ನಲ್ಲಿ ಹನುಮ ಜಯಂತಿ ದಿನದ ನಕ್ಷತ್ರದಂದು ಗುಲಾಬಿ ಬಣ್ಣದ ಚಂದ್ರ ಕಾಣಿಸಿಕೊಳ್ಳುತ್ತಾನೆ ಎಂಬ ಪ್ರತೀತಿ. ಕಳೆದ ರಾತ್ರಿ 5 ರಿಂದ 8 ನಿಮಿಷಕ್ಕೂ ಹೆಚ್ಚು ಸಮಯ ಪಿಂಕ್ ಮೂನ್ ಕಾಣಿಸಿದೆ. ಆ ನಂತರ ಮೋಡ ಕವಿದಿದ್ದರಿಂದ ಚಂದ್ರ ಕಾಣಿಸಲಿಲ್ಲ. ಇದನ್ನು ಪಿಂಕ್ ಮೂನ್, ಸ್ಪ್ರೂಟಿಂಗ್ ಗ್ರಾಸ್ ಮೂನ್, ಗ್ರೋಯಿಂಗ್ ಮೂನ್, 'ಫಿಶ್ ಮೂನ್' ಮತ್ತು 'ಹರೇ ಮೂನ್' ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಈ ಸಮಯದಲ್ಲಿ ಭೂಮಿಗೆ ಚಂದ್ರ ಸ್ವಲ್ಪ ಹತ್ತಿರವಾಗಿರುತ್ತದೆ. ಇದರಿಂದ ದೊಡ್ಡದಾಗಿ ಮತ್ತು ಪ್ರಕಾಶಮಾನವಾಗಿ ಕಾಣುತ್ತದೆ. ಸೂಪರ್ ಮೂನ್ ಚಿತ್ರವನ್ನು ಮೈಸೂರಿನ ಬೋಗಾದಿ ನಿವಾಸಿ ಸಾಗರ್ ಸುರೇಶ್ ತಮ್ಮ ಕ್ಯಾಮರಾದಲ್ಲಿ ಕ್ಲಿಕ್ಕಿಸಿದ್ದಾರೆ. ಸಾಗರ್ ಸುರೇಶ್ ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದು, ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕರಾಗಿದ್ದಾರೆ.

# ಕೆ.ಎಸ್.ಈಶ್ವರಪ್ಪ ಪ್ರಕರಣ ಮುಗಿದ ಅಧ್ಯಾಯ, ಬಂಧನದ ಅಗತ್ಯವೇನಿದೆ?



ವಿಜಯಪುರ,ಏ.17–ಈಶ್ವರಪ್ಪ ಪ್ರಕರಣ ಈಗ ಮುಗಿದ ಅಧ್ಯಾಯವಾಗಿದ್ದು, ಕಾಂಗ್ರೆಸ್ ಅವರ ಬಂಧನಕ್ಕೆ ಆಗ್ರಹಿಸುತ್ತಿದೆ.. ಆದರೆ ಅಗತ್ಯವೇನಿದೆ? ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ವಿಜಯಪುರ ಜಿಲ್ಲೆ ನಿಡಗುಂದಿ ತಾಲೂಕಿನ ಆಲಮಟ್ಟಿ ಬಳಿಯ ಕೃಷ್ಣಾ ನದಿ ತೀರದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಕಾಲದಲ್ಲಿ ಬೆಳಗಾವಿ ಜಿಲ್ಲೆಯ ಕುರುಬ ಸಮಾಜದ ಪ್ರಾಮಾಣಿಕ ಡಿವೈಎಸ್ಪಿ ಕಲ್ಲಪ್ಪ ಹಂಡಿಭಾಗ್ ಆತ್ಮಹತ್ಯೆ ಮಾಡಿಕೊಂಡರು. ಆಗ ಸಿದ್ದರಾಮಯ್ಯ ರಾಜೀನಾಮೆ ಕೊಟ್ರಾ? ಆಗಿನ ಗೃಹ ಸಚಿವರು ರಾಜೀನಾಮೆ ಕೊಟ್ಟರಾ? ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಶ್ವರಪ್ಪ ರಾಜೀನಾಮೆ ನೀಡಿದ್ದಾರೆ, ಆದರೆ ಬಂಧನ ಯಾಕೆ ಆಗಬೇಕು ಎಂದು ಹರಿಹಾಯ್ದಿದ್ದಾರೆ. ಹಂಡೀಭಾಗ್ ಸರ್ಕಾರದ ನಡವಳಿಕೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದರು. ಇವರಿಗೆ ಚುನಾವಣೆ ಸಂದರ್ಭದಲ್ಲಿ ಈಗ ಮಾತನಾಡಲು ಇಶ್ಯೂ ಇಲ್ಲ. ಜನರ ಸಮಸ್ಯೆಗಳ ಇಶ್ಯೂ ಇಲ್ಲ. ರಾಜೀನಾಮೆ ಆಯ್ತು, ಈಗ ಬಂಧನಕ್ಕೆ ಹೋರಾಟ ಮಾಡುತ್ತಿದ್ದಾರೆ. ಇದರಿಂದ ಏನು ಉಪಯೋಗ ಇಲ್ಲ. ಎರಡೂ ಪಕ್ಷಗಳನ್ನೂ ಜನ ತಿರಸ್ಕರಿಸೋ ಕಾಲ ಬಂದಿದೆ ಎಂದು ಹೇಳಿದರು. ಸಂತೋಷ್ ಪ್ರಕರಣದಲ್ಲಿ ಮಹಾನಾಯಕನ ಹೆಸರು ಪ್ರಸ್ತಾಪ ವಿಚಾರವಾಗಿ ಮಾತನಾಡಿದ್ದು, ನನಗೆ ಮಹಾ ನಾಯಕ, ದುರಂತ ನಾಯಕರೋ, ಯಾವ ಕಳ್ಳ ನಾಯಕರೋ ಗೊತ್ತಿಲ್ಲ. ಘಟನೆ ಬಗ್ಗೆ ವಾಸ್ತವಾಂಶವನ್ನು ಜನರ ಮುಂದೆ ಸರ್ಕಾರ ಇಡಬೇಕು. ಇದರಲ್ಲಿ ಯಾರ ಪಾತ್ರ ಇದೆ, ಯಾಕೆ ಘಟನೆ ನಡೆಯಿತು ಎಂಬುದರ ಬಗ್ಗೆ ತನಿಖೆ ಆಗಬೇಕು ಎಂದರು.

# ಸ್ನಾತಕೋತ್ತರ ಪದವಿ 3ನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ

ಮೈಸೂರು, ಏ.17–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ), ಮಾರ್ಚ್ 2022ರಲ್ಲಿ ನಡೆಸಿದ ಸ್ನಾತಕೋತ್ತರ ಪದವಿಗಳ ಮೂರನೆಯ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಿದೆ. ಫಲಿತಾಂಶವನ್ನು ಕಾಲೇಜಿನ ವೆಬ್‌ಸೈಟ್ http://www.jsscacs.edu.in or www. result. jsscacs.edu.inನಲ್ಲಿ ಪಡೆಯಬಹುದು. ಫೋಟೋಪ್ರತಿ ಪಡೆಯಲು ಕೊನೆಯ ದಿನಾಂಕ ಏ.21 ಮತ್ತು ಮರು ಮೌಲ್ಯಮಾಪನಕ್ಕೆ ಕೊನೆ ದಿನಾಂಕ ಏ.23.

**ಕ್ಷಯ ರೋಗದ ಬಗ್ಗೆ ಅರಿವು ಮೂಡಿಸಲು ಕ್ರಿಕೆಟ್ ಪಂದ್ಯಾವಳಿ**

# ಆರ್‌ಎನ್‌ಟಿಸಿಪಿ ತಂಡಕ್ಕೆ ಎನ್‌ಟಿಇಪಿ ಕಪ್

**ಮೈಸೂರು ಡಿಹೆಚ್‌ಓ ತಂಡಕ್ಕೆ 2ನೇ, ಕೆ.ಆರ್.ನಗರ ತಂಡಕ್ಕೆ 3ನೇ ಸ್ಥಾನ**



ಮೈಸೂರು, ಏ.17(ಆರ್‌ಕೆಬಿ)– ಕ್ಷಯರೋಗದ ಕುರಿತು ಅರಿವು ಮೂಡಿಸಲು ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ ಮತ್ತು ಎನ್‌ಟಿಇಪಿ (ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ) ನೌಕರರ ಸಂಘದ ವತಿಯಿಂದ ಮೈಸೂರಿನ ಜೆ.ಕೆ.ಮೈದಾನದಲ್ಲಿ ಮೂರು ದಿನಗಳ ಕಾಲ 'ಎನ್‌ಟಿಇಪಿ ಕಪ್' ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಚಿತ್ರನಟ ಶ್ರೀನಗರ ಕಿಟ್ಟಿ ಬ್ಯಾಟ್ ಬೀಸುವ ಮೂಲಕ ಪಂದ್ಯಾವಳಿಗೆ ಚಾಲನೆ ನೀಡಿದರು. ಈ ಪಂದ್ಯಾವಳಿಯಲ್ಲಿ 16 ಕ್ರಿಕೆಟ್ ತಂಡಗಳು ಭಾಗವಹಿಸಿದ್ದವು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮದ್, ಕ್ಷಯ ಒಂದು ಸಾಂಕ್ರಾಮಿಕ ರೋಗವಾಗಿದ್ದು, ವಿಶ್ವದ ಒಟ್ಟು ಕ್ಷಯ ರೋಗಿಗಳಲ್ಲಿ 5ನೆಯ ಒಂದು ಭಾಗದಷ್ಟು ರೋಗಿಗಳು ಭಾರತದಲ್ಲಿದ್ದಾರೆ. ಭಾರತದಲ್ಲಿ ಶೇ.40 ಯುವ ಸಮುದಾಯವು ಕ್ಷಯರೋಗ ಸೋಂಕಿತರಾಗಿದ್ದು, ಜೀವಿತಾವಧಿಯಲ್ಲಿ ರೋಗಿಯಾಗಿ ಪರಿಣಮಿಸುವ ಸಾಧ್ಯತೆ ಇದೆ ಎಂದರು.

ಪ್ರತಿದಿನ 5 ಸಾವಿರ ಮಂದಿ ಹೊಸ ಕ್ಷಯ ರೋಗಿಗಳಾಗುತ್ತಿದ್ದಾರೆ. ಪ್ರತಿ ಒಂದೂವರೆ ನಿಮಿಷಕ್ಕೆ ಒಬ್ಬರು ಕ್ಷಯ ರೋಗದಿಂದ ಮೃತಪಡುತ್ತಿದ್ದಾರೆ. ಕಫದಲ್ಲಿ ಕ್ರಿಮಿಯನ್ನು ಹೊಂದಿರುವ ಕ್ಷಯರೋಗಿ ಚಿಕಿತ್ಸೆ ಪಡೆಯದೇ ಇದ್ದರೆ ಒಂದು ವರ್ಷದಲ್ಲಿ 10–15 ಜನರಿಗೆ ರೋಗ ಹರಡುತ್ತಾನೆ. ಎರಡು ವಾರ ಅಥವಾ ಅದಕ್ಕಿಂತ ಹೆಚ್ಚು ದಿನಗಳು ಸತತವಾದ ಕೆಮ್ಮು, ಜ್ವರ, ಎದೆಯಲ್ಲಿ ನೋವು, ತೂಕ ಕಡಿಮೆಯಾಗುವುದು, ಹಸಿವಾಗದಿರುವುದು, ಕಫದಲ್ಲಿ ರಕ್ತ ಬೀಳುವುದು ಇವೆಲ್ಲ ಕ್ಷಯ ರೋಗದ ಲಕ್ಷಣ ವಾಗಿರಬಹುದು ಎಂದರು.

ಈ ಲಕ್ಷಣಗಳು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಬೇಕು. ಕ್ಷಯ ರೋಗದ ಪರೀಕ್ಷೆ ಮತ್ತು ಚಿಕಿತ್ಸೆ ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತದೆ. ಕ್ಷಯ ರೋಗದ ಬಗ್ಗೆ ಅರಿವು ಮೂಡಿಸಲು ವಿಶ್ವದಾದ್ಯಂತ ವಿಶ್ವ ಕ್ಷಯ ರೋಗ ದಿನ ಆಚರಿಸಲಾಗಿದೆ. 'ಎಲ್ಲಾ ಕ್ಷಯ ರೋಗಿಗಳನ್ನು ಗುರುತಿಸಿ ಚಿಕಿತ್ಸೆ ನೀಡಿ, ಕ್ಷಯದಿಂದ ಗುಣಪಡಿಸಿ,' ಎಂಬ ಘೋಷಣಾ ವಾಕ್ಯವಾಗಿದ್ದು, ಎಲ್ಲರೂ ಕ್ಷಯರೋಗ ನಿಯಂತ್ರಣಕ್ಕೆ ಸಹಕರಿಸುವಂತೆ ಮನವಿ ಮಾಡಿದರು. ಮೂರು ದಿನಗಳ ಪಂದ್ಯಾವಳಿಯಲ್ಲಿ ಎನ್‌ಟಿಇಪಿ (ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮ) ತಂಡ (ಆಯೋಜಕರು) ವಿಜೇತರಾಗುವ ಮೂಲಕ ಎನ್‌ಟಿಇಪಿ ಕಪ್ ತನ್ನದಾಗಿಸಿಕೊಂಡಿತ್ತಲ್ಲದೆ 20 ಸಾವಿರ ರೂ. ಬಹುಮಾನ ಪಡೆದುಕೊಂಡಿತು. ಮೈಸೂರು ಡಿಹೆಚ್‌ಓ ತಂಡ ಎರಡನೇ ಸ್ಥಾನ, ಕೆ.ಆರ್.ನಗರ ತಂಡ ಮೂರನೇ ಸ್ಥಾನ ಪಡೆದುಕೊಂಡಿತು. ಪ್ರತಿ ತಂಡಕ್ಕೆ 6 ಓವರ್‌ಗಳನ್ನು ನಿಗದಿಪಡಿಸಲಾಗಿತ್ತು. ಈ ಬಾರಿ ಮೂರು ಸ್ಥಾನಗಳು ಮೈಸೂರು ಜಿಲ್ಲೆಗೆ ದಕ್ಕಿರುವುದು ವಿಶೇಷ.

# ಕಾನೂನು ಕೈಗೆತ್ತಿಕೊಳ್ಳುವವರನ್ನು ಸುಮ್ಮನೆ ಬಿಡುವ ಮಾತಿಲ್ಲ



ಹೊಸಪೇಟೆ, ಏ. 17– ಕಾನೂನನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸುವವರ ವಿರುದ್ಧ ಅತ್ಯುಗ್ರ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಅರಗ ಜ್ಞಾನೇಂದ್ರ ಹೇಳಿದರು. ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿವಾದಿತ ಸ್ಟೇಟಸ್‌ನ್ನು ಪೋಸ್ಟ್ ಮಾಡಿದ ಕಿಡಿಗೇಡಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದರು.

ಪೊಲೀಸರ ಮೇಲೆ ನಡೆದ ಹಲ್ಲೆ, ಹಿಂಸಾಚಾರ ಘಟನೆ ಅತ್ಯಂತ ಖಂಡನೀಯ. ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಪ್ರಾರ್ಥನಾ ಮಂದಿರದ ಮೇಲೆ ಭಗವಾಧ್ವಜಾವನ್ನು ಎಡಿಟ್ ಮಾಡಿ ತನ್ನ ಸಾಮಾಜಿಕ ಜಾಲತಾಣದ ಸ್ಟೇಟಸ್‌ನಲ್ಲಿ ಅಪ್‌ಲೋಡ್ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬ ಕಿಡಿಗೇಡಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆದರೆ ಈ ಘಟನೆಯನ್ನು ಖಂಡಿಸಿ ಪೊಲೀಸ್ ಠಾಣೆ ಬಳಿ ಪ್ರತಿಭಟನೆ ನಡೆಸಿದ್ದ ಕೆಲವು ಕಿಡಿಗೇಡಿಗಳು ಪೊಲೀಸ್ ಸಿಬ್ಬಂದಿಯನ್ನು ಟಾರ್ಗೆಟ್ ಮಾಡಿ ಹಿಂಸಾಚಾರ ಮಾಡಿದ್ದಾರೆ ಎಂದರು. ಹಲವು ಪೊಲೀಸ್ ಸಿಬ್ಬಂದಿ ಕಲ್ಲು ತೂರಾಟದಲ್ಲಿ ಗಾಯಗೊಂಡಿದ್ದಾರೆ. ವಾಹನಗಳು ಜಖಂಗೊಂಡಿವೆ. ಘಟನೆಗೆ ಸಂಬಂಧಿಸಿದಂತೆ ಇದುವರೆಗೆ ಹಲವು ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿದ್ದ ಕಿಡಿಗೇಡಿಗಳನ್ನು ವಶಕ್ಕೆ ಪಡೆಯಲಾಗಿದೆ. ಇನ್ನಿತರ ದುಷ್ಕರ್ಮಿಗಳ ಹೆಡೆಮುರಿ ಕಟ್ಟಿ ಬಂಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಪರಿಸ್ಥಿತಿ ತಹಬದಿಗೆ ತರಲಾಗಿದ್ದು, ಹುಬ್ಬಳ್ಳಿ ನಗರದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ನಿಷೇಧಾಜ್ಞೆ ವಿಧಿಸಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ.

## ನಕ್ಕರೆ ಅದೇ ಸ್ವರ್ಗ

ಗಿರಾಕಿ : ಒಂದು ಕೆ.ಜಿ ಚಿಪ್ಸ್‌ಗೆ ಎಷ್ಟು ರೂಪಾಯಿ
ವ್ಯಾಪಾರಿ : 80 ರೂಪಾಯಿ
ಗಿರಾಕಿ : ಲೂಸ್ ತಗೊಂಡರೆ.
ವ್ಯಾಪಾರಿ : ಯಾರ್ ತಗೊಂಡ್ರು ಅಷ್ಟೆ

**ಮೈಸೂರು ಮಿತ್ರ**

ಸೋಮವಾರ, 18 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ವಿದ್ಯೆಯ ಮುಖ್ಯ ಗುರಿ ಏನೆಂದರೆ ಇತರರೊಡನೆ ಕೂಡಿ ಬಾಳುವುದನ್ನು ಕಲಿಸುವುದು.

– ಡಾ. ರಾಧಾಕೃಷ್ಣನ್

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು**

ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ.

## ನಿಮ್ಮ ಪತ್ರಗಳು

### 43ನೇ ವಸಂತಕ್ಕೆ ಕಾಲಿಟ್ಟ ಹೆಮ್ಮೆಯ 'ಮೈಸೂರು ಮಿತ್ರ'ನಿಗೆ ಅಭಿನಂದನೆ

ಮಾನ್ಯರೇ

ದಿನದಿಂದ ದಿನಕ್ಕೆ ದಿನಪತ್ರಿಕೆ ಮುದ್ರಣಕ್ಕೆ ಬೇಕಾದ ನ್ಯೂಸ್ ಪ್ರಿಂಟ್ ಮೊದಲಾದ ವಸ್ತುಗಳ ಬೆಲೆ ವಿಪರೀತವಾಗಿದ್ದರೂ ಕೂಡ ನಮ್ಮ 'ಮೈಸೂರು ಮಿತ್ರ' ದಿನಪತ್ರಿಕೆಯು ಶ್ರೀಸಾಮಾನ್ಯನಿಗೆ ಕೈಗೆಟಕುವ ದರದಲ್ಲಿ ಬೆಳಗಿನ ತಾಜಾ ಸುದ್ದಿಗಳನ್ನು ನೀಡುತ್ತಿದ್ದು, 16–4–2022ಕ್ಕೆ 42 ವರ್ಷಗಳನ್ನು ಪೂರೈಸಿ 43ನೇ ವರ್ಷಕ್ಕೆ ದಾಪುಗಾಲು ಹಾಕುತ್ತ ರಾರಾಜಿಸುತ್ತಿದ್ದು, ಅಭಿನಂದನೆಗಳು.

'ಮೈಸೂರು ಮಿತ್ರ' ಪ್ರತಿನಿತ್ಯ ಓದುಗರಿಗೆ ಸುದ್ದಿಯೊಂದಿಗೆ ಓದುಗರ ಪತ್ರ ಎಂಬ ಶಿರೋನಾಮೆಯಡಿಯಲ್ಲಿ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಓದುಗರು ಬರೆಯುವ ಪತ್ರಗಳನ್ನು ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಗಮನ ಸೆಳೆದು ಸಮಸ್ಯೆಗಳನ್ನು ನಿವಾರಿಸಲು ಕಾರಣವಾಗುವ ಮೂಲಕ ಸರ್ಕಾರ, ಸಮಾಜ ಮತ್ತು ಓದುಗರ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ.

ಸರ್ಕಾರದ ಅಂಕು–ಡೊಂಕುಗಳನ್ನು ಯಾವ ಭಯವೂ ಇಲ್ಲದೇ ನಿರ್ಭೀತವಾಗಿ ವಸ್ತು ನಿಷ್ಠ ವರದಿ ಮಾಡುವುದರೊಂದಿಗೆ ವಾಸ್ತವಾಂಶದ ವರದಿಗಳನ್ನು ಜನತೆಗೆ ನೀಡುತ್ತಿರುವುದು ಸಂತಸದ ಸಂಗತಿಯಾಗಿದೆ.

ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಕ್ರಮ ಕೈಗೊಳ್ಳದೇ ಇದ್ದಾಗ ನಮ್ಮ ನೆರವಿಗೆ ಬರುವುದೇ 'ಮೈಸೂರು ಮಿತ್ರ'ನ ಓದುಗರ ಪತ್ರ ವಿಭಾಗ. ಈ ವಿಭಾಗದಲ್ಲಿ ಪತ್ರಗಳು ಪ್ರಕಟವಾದ ನಂತರ ಎಷ್ಟೋ ಸಮಸ್ಯೆಗಳು ನಿವಾರಣೆಯಾಗಿವೆ.

ನೂರ್ಕಾಲ ಅಭಿವೃದ್ಧಿಯಲ್ಲಿ, 'ಮೈಸೂರು ಮಿತ್ರ' ಅತಿ ಹೆಚ್ಚಿನ ಪ್ರಸಾರದೊಂದಿಗೆ, ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡು, ಓದುಗರ, ಜಾಹೀರಾತುದಾರರ ಪ್ರೀತಿಗೆ ಪಾತ್ರರಾಗಿ 43ನೇ ವರ್ಷಕ್ಕೆ ದಾಪುಗಾಲು ಹಾಕುತ್ತಿರುವ 'ಮೈಸೂರು ಮಿತ್ರ' ಎಂದೆಂದಿಗೂ ಚಿರಾಯುವಾಗಿ ರಾರಾಜಿಸುತ್ತಿರಲಿ.

– ಎ.ಎಸ್.ಗೋಪಾಲಕೃಷ್ಣ(ಜಿಕೆ), ರಾಮಕೃಷ್ಣನಗರ, ಮೈಸೂರು

### ಬೃಹತ್ ಮೈಸೂರು ಮಹಾನಗರ ಪಾಲಿಕೆ ಶೀಘ್ರ ಅನುಷ್ಠಾನವಾಗಲಿ

ಮಾನ್ಯರೇ



ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ಮೈಸೂರಿನ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರ ಸಮಕ್ಷಮದಲ್ಲಿ ಮೈಸೂರು ನಗರ ಜನಪ್ರತಿನಿಧಿಗಳು ಸೇರಿ ಚರ್ಚಿಸುತ್ತಿರುವ ವಿಚಾರ ದಿನ ಪತ್ರಿಕೆಗಳಿಂದ ತಿಳಿದು ಬಂದಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮಾಡುತ್ತಿರುವ ಕೆಲಸ ಶ್ಲಾಘನೀಯ. ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ಬೇಕಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ನಗರವನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳನ್ನು ನಿವಾರಿಸಬೇಕಾಗಿದೆ.

ಮೈಸೂರು ನಗರದ ಮಧ್ಯಭಾಗದಲ್ಲಿರುವ ಟೌನ್ ಹಾಲ್‌ನಲ್ಲಿರುವ ಬಹುಮಹಡಿ ವಾಹನ ನಿಲ್ದಾಣ ಹಾಗೂ ರಂಗಮಂದಿರ ಕಾಮಗಾರಿ ಕಳೆದ 12 ವರ್ಷಗಳಿಂದ ನಿಂತಿದೆ. ದೇವರಾಜ ಅರಸ್ ರಸ್ತೆಯಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆಯಾಗಬೇಕಾಗಿದೆ. ಇರ್ವಿನ್ ರಸ್ತೆಯ ಅಗಲೀಕರಣ ಕಾಮಗಾರಿ ಸಮರ್ಪಕವಾಗಿ ಆಗಿಲ್ಲ. ಲ್ಯಾನ್ಸ್‌ಡೌನ್ ಕಟ್ಟಡ ದುರಸ್ತಿ ಕಾರ್ಯ ಕಳೆದ 10 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಬಲ್ಲಾಳ್ ಸರ್ಕಲ್ ಬಳಿ ಇರುವ ಮಯೂರ ಕಾಂಪ್ಲೆಕ್ಸ್‌ನ ಕಬ್ಬಿಣದ ಸರಳುಗಳು ತುಕ್ಕು ಹಿಡಿದಿವೆ. ನಗರದಲ್ಲಿ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳು ತುರ್ತಾಗಿ ಆಗಬೇಕಿವೆ.

– ಮಜೂರು ರಘುವೀರ ಪುರಾಣಿಕ, ಮೈಸೂರು

### ಚಾಮುಂಡಿಬೆಟ್ಟಕ್ಕೆ ರೋಪ್ ವೇ ಬೇಡವೇ ಬೇಡ

ಮಾನ್ಯರೆ,

ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಯೋಜನೆ ಘೋಷಿಸಿದೆ. ಆದರೆ ಚಾಮುಂಡಿ ಬೆಟ್ಟಕ್ಕೆ ರೋಪ್ ವೇ ಹಾಕಿದರೆ ಅದರಿಂದ ಉಪಯೋಗಕ್ಕಿಂತ ಬೆಟ್ಟಕ್ಕೆ ತೊಂದರೆಗಳೇ ಜಾಸ್ತಿ. ಈ ಬಗ್ಗೆ ಚಾಮುಂಡಿಬೆಟ್ಟ ಉಳಿಸಿ ಸಮಿತಿಯವರು ಜನ ಜಾಗೃತಿ ಮೂಡಿಸುತ್ತಿದ್ದಾರೆ.

ಏ. 3 ರಂದು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಒಂಭತ್ತು ಜನ ವಿವಿಧ ಕ್ಷೇತ್ರಗಳ ತಜ್ಞರ ಜೊತೆ ದುಂಡುಮೇಜಿನ ಸಭೆ ಮಾಡಿ ಚಾಮುಂಡಿ ಬೆಟ್ಟದ ಮೇಲೆ ಕಟ್ಟಡಗಳನ್ನು ಕಟ್ಟಿದರೆ, ಮೆಟ್ಟಿಲುಗಳಿಗೆ ರೇಲಿಂಗ್ ಹಾಕಿದರೆ ಮತ್ತು ಬೆಟ್ಟಕ್ಕೆ ರೋಪ್ ವೇ ಮಾಡಿದರೆ ಇವುಗಳಿಂದ ಬೆಟ್ಟಕ್ಕೆ ಯಾವ ಯಾವ ರೀತಿ ಅಪಾಯವಾಗುವುದು? ಎಂಬ ಬಗ್ಗೆ ವಿಸ್ತಾರವಾಗಿ ನಾನಾ ಆಯಾಮಗಳಲ್ಲಿ ಚರ್ಚೆ ಮಾಡಲಾಯಿತು. ಇದರ ಬಗ್ಗೆ ಬಹುತೇಕ ಎಲ್ಲಾ ಪತ್ರಿಕೆಗಳಲ್ಲಿ ಸುದೀರ್ಘವಾದ ವರದಿಗಳು ಪ್ರಕಟವಾಗಿವೆ. ಈಗ ಮೈಸೂರಿನ ನಾಗರಿಕರು, ಗಣ್ಯರು, ಹಿರಿಯ ರಾಜಕಾರಣಿಗಳು ಒಬ್ಬೊಬ್ಬರಾಗಿ ರೋಪ್ ವೇ ಬೇಡವೆಂದು ಹೇಳಿಕೆ ಕೊಡುತ್ತಿದ್ದಾರೆ.

ಈಗ ಇದರ ಜೊತೆಗೆ ರೋಪ್ ವೇ ಅಷ್ಟೊಂದು ಸುರಕ್ಷಿತವಲ್ಲ ಎಂಬುದಕ್ಕೆ ಉದಾಹರಣೆಯಾಗಿ ಏ. 10 ರಂದು ಜಾರ್ಖಂಡ್ ರಾಜ್ಯದ ದಿಯೋಗರ್‌ನಲ್ಲಿ ರೋಪ್ ವೇನಲ್ಲಿ ಇದ್ದ ಕೇಬಲ್ ಕಾರುಗಳು ಡಿಕ್ಕಿ ಹೊಡೆದು ಅನೇಕ ಸಾವು ನೋವು ಆದ ದುರಂತ ಒಂದು ಉದಾಹರಣೆ. ಹೀಗಾಗಿ ರೋಪ್ ವೇ ಅಷ್ಟೊಂದು ಸುರಕ್ಷಿತವಲ್ಲ. ಈ ಅಂಶವನ್ನೂ ಕೂಡ ಸರ್ಕಾರ ಪರಿಗಣಿಸಬೇಕು.

ಚಾಮುಂಡಿ ಬೆಟ್ಟಕ್ಕೆ ಧಕ್ಕೆ ಆಗದಿರಲು ಮತ್ತು ಅದರ ಪ್ರಾಕೃತಿಕ ಸೌಂದರ್ಯ ಮತ್ತು ಧಾರ್ಮಿಕ ಪಾವಿತ್ರ್ಯತೆ ಉಳಿಯುವಂತಾಗಲು ಬೆಟ್ಟದ ಮೇಲೆ ಕಟ್ಟಡಗಳ ನಿರ್ಮಾಣ, ಮೆಟ್ಟಿಲುಗಳಿಗೆ ರೇಲಿಂಗ್ ಅಳವಡಿಕೆ ಮತ್ತು ಬೆಟ್ಟಕ್ಕೆ ರೋಪ್ ವೇ ಯೋಜನೆ ಮಾಡಬಾರದು ಎಂದು ಸರ್ಕಾರಕ್ಕೆ ವಿನಂತಿಸುತ್ತೇವೆ. ಕೇಂದ್ರ ಸರ್ಕಾರದ ಪ್ರಸಾದ ಯೋಜನೆಯ ಹಣ ಬೆಟ್ಟದ ಮೇಲೆ ಮರ ಗಿಡಗಳನ್ನು ಬೆಳೆಸಲು ಮತ್ತು ಶಿಥಿಲಾವಸ್ಥೆಯಲ್ಲಿ ಇರುವ ಪುರಾತನ ದೇವಾಲಯಗಳ ನವೀಕರಣಕ್ಕೆ ಬಳಸಲಿ ಎಂದು ಹೇಳಬಯಸುತ್ತೇವೆ. ಒಟ್ಟಿನಲ್ಲಿ ಮೈಸೂರಿನ ನಾಗರಿಕರ ತೀವ್ರ ವಿರೋಧವನ್ನು ಲೆಕ್ಕಿಸದೆ ಬೆಟ್ಟಕ್ಕೆ ಹಾನಿಯಾಗುವ ಯೋಜನೆಗಳನ್ನು ಜಾರಿ ಮಾಡಿದರೆ ಅದಕ್ಕೆ ಕಾರಣಕರ್ತರಾದವ ರಿಗೆ ಸೂಕ್ತ ಪಾಠ ಕಲಿಸಲು ಜನರು ತೀರ್ಮಾನ ಮಾಡಿದ್ದಾರೆ ಎಂಬುದನ್ನು ಸಂಬಂಧಿಸಿದವರ ಗಮನಕ್ಕೆ ತರಲು ಬಯಸುತ್ತೇವೆ.

–ಪ್ರಭಾ ನಂದೀಶ್, ಗೀತಾ ವೇಲು ಮಣಿ, ಸುಶೀಲಾ, ಸುಗುಣ, ಮೈಸೂರು.

# ಅಯೋಮಯ ಪರಿಸ್ಥಿತಿ ಎದುರಿಸುತ್ತಿರುವ ಶ್ರೀಲಂಕಾ





ನಮ್ಮ ನೆರೆಯ ದ್ವೀಪ ರಾಷ್ಟ್ರವಾದ ಶ್ರೀಲಂಕಾದಲ್ಲಿನ ಆರ್ಥಿಕ ಪರಿಸ್ಥಿತಿ ದಿನೇ ದಿನೆ ಬಿಗಡಾಯಿಸುತ್ತಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ಆ ದೇಶದ ಅಧ್ಯಕ್ಷ ಕೇವಲ 2.2 ಕೋಟಿ ಜನಸಂಖ್ಯೆ ಹೊಂದಿರುವ ಶ್ರೀಲಂಕಾ ಇಂದು ಹಿಂದೆಂದೂ ಕಾಣದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಸಾವಿರಾರು ಸಂಖ್ಯೆಯಲ್ಲಿ ಜನರು ಬೀದಿಗಿಳಿದು, ಅಧ್ಯಕ್ಷರ ರಾಜಿನಾಮೆಗೆ ಒತ್ತಾಯಿಸುತ್ತಿದ್ದಾರೆ. ಜನರ ಪ್ರತಿಭಟನೆಗಳನ್ನು ಹತ್ತಿಕ್ಕಲು ಅಧ್ಯಕ್ಷರು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಮಹತ್ವದ ಬೆಳವಣಿಗೆಯಲ್ಲಿ ಶ್ರೀಲಂಕಾದ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರು ರಾಜಿನಾಮೆ ನೀಡಿ ಬಿಕ್ಕಟ್ಟಿನ ಆಳ ಮತ್ತು ವಿಸ್ತಾರಗಳನ್ನು ಪ್ರತಿಬಿಂಬಿಸಿದ್ದಾರೆ. ದ್ವೀಪ ರಾಷ್ಟ್ರ ಚೀನಾ ದೇಶದಿಂದ ಪಡೆದಿರುವ ಸಾಲಗಳೇ ಇಂದಿನ ಆರ್ಥಿಕ ಬಿಕ್ಕಟ್ಟಿಗೆ ಕಾರಣ ಎಂದು ಹೇಳಲಾಗುತ್ತಿದೆ ಶ್ರೀಲಂಕಾದ ವಿದೇಶಿ ವಿನಿಮಯ ಮೌಲ್ಯ ಪಾತಾಳಕ್ಕೆ ಇಳಿದಿರುವುದರಿಂದ ಬೇರೆ ರಾಷ್ಟ್ರಗಳಿಂದ ಅದು ಪೆಟ್ರೋಲಿಯಂ ಸೇರಿದಂತೆ ಕಚ್ಚಾ ತೈಲ ಮತ್ತು ಇತರ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಸಾದ್ಯವಾಗದಂತಹ ಪರಿಸ್ಥಿತಿ ಇದೆ. ದೇಶದಲ್ಲಿ ದಿನದಲ್ಲಿ 13 ಗಂಟೆಗಳಷ್ಟು ಕಾಲ ವಿದ್ಯುತ್ ಖೋತಾ ಆಗಿದೆ. ಆಹಾರ ಪದಾರ್ಥಗಳು, ಔಷಧಿಗಳು ದೊರೆಯದೇ ಜನ ಬೀದಿ ಬೀದಿಗಳಲ್ಲಿ ಹೋರಾಟ ಮಾಡುತ್ತಿದ್ದಾರೆ. ವೃದ್ಧರು, ಖಾಯಿಲೆಯಿಂದ ನರಳುತ್ತಿರುವವರು ರಸ್ತೆಗಳಲ್ಲಿ ಬಿದ್ದು ಸಾಯುತ್ತಿದ್ದಾರೆ. ಒಟ್ಟಿನಲ್ಲಿ ಶ್ರೀಲಂಕಾದ ಪರಿಸ್ಥಿತಿ ಅಯೋಮಯವಾಗಿದೆ.

ಒಂದು ಕಾಲದಲ್ಲಿ ಅತ್ಯಂತ ಉಚ್ರಾಯ ಸ್ಥಿತಿಯಲ್ಲಿದ್ದ ಶ್ರೀಲಂಕಾ ಪುಟ್ಟ ರಾಷ್ಟ್ರವಾದರೂ ಪ್ರವಾಸೋದ್ಯಮದಲ್ಲಿ ಒಳ್ಳೆಯ ಹೆಸರು ಗಳಿಸಿದೆ. ಅದೇ ರೀತಿ ಇಲ್ಲಿ ಸಾವಿರಾರು ಎಕರೆಯ ಕಾಫಿ ಮತ್ತು ಟೀ ತೋಟಗಳಿವೆ. ರಾಮಾಯಣದಲ್ಲಿ ಉಲ್ಲೇಖ ಮಾಡಲಾಗುವ ಲಂಕೆಯೇ ಇಂದಿನ ಶ್ರೀಲಂಕಾ ಎಂದು ಹೇಳಲಾಗುತ್ತದೆ. ಈ ದೇಶಕ್ಕೆ ಸುಮಾರು 3000 ವರ್ಷಗಳ ಇತಿಹಾಸವಿದೆ. ಈ ಹಿಂದೆ "ಸಿಲೋನ್" ಎಂದು ಕರೆಯಲಾಗುತ್ತಿದ್ದ ಶ್ರೀಲಂಕಾವನ್ನು ಈಗ "ಪ್ರಜಾಸತ್ತಾತ್ಮಕ ಸಮಾಜವಾದಿ ಗಣರಾಜ್ಯ (Democratic Socialist Republic of Srilanka) ಎಂದು ಕರೆಯಲಾಗುತ್ತದೆ. 04.02.1948 ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಈ ದೇಶ ಭಾರತದೊಂದಿಗೆ ಗಡಿ ಹಂಚಿಕೊಂಡಿದೆ. ನಮ್ಮ ದೇಶಕ್ಕೆ ಸಹ ಶ್ರೀಲಂಕಾ ಜೊತೆ ಉತ್ತಮವಾದ ರಾಜತಾಂತ್ರಿಕ ಸಂಬಂಧಗಳಿವೆ. ಶ್ರೀಲಂಕಾದಲ್ಲಿ ಜನಾಂಗೀಯ ಹೋರಾಟ ತಾರಕಕ್ಕೆ ಏರಿದಾಗ, ಅಲ್ಲಿನ ಪರಿಸ್ಥಿತಿಯನ್ನು ನಿಭಾಯಿಸಲು ಭಾರತ ತನ್ನ ಶಾಂತಿ ಪಡೆಯನ್ನು ಕಳುಹಿಸಿತ್ತು ದುರಂತದ ಸಂಗತಿ ಎಂದರೆ, ಪ್ರಧಾನ ಮಂತ್ರಿ ರಾಜೀವ ಗಾಂಧಿ, ಶ್ರೀಲಂಕೆಗೆ ಭೇಟಿ ನೀಡಿದ ಸಮಯದಲ್ಲೇ ಅವರ ಹತ್ಯೆಯ ಯತ್ನ ನಡೆಯಿತು. 1983 ರಿಂದ 2009 ರವರೆಗೆ ಅಂದರೆ ಸುಮಾರು 26 ವರ್ಷಗಳಷ್ಟು ದೀರ್ಘಕಾಲ ಎಲ್‌ಟಿಟಿಇ ಸೇರಿದಂತೆ ಹಲವು ಉಗ್ರ ತಮಿಳು ಉಗ್ರ ಸಂಘಟನೆಗಳು ನಡೆಸಿದ ರಕ್ತಪಾತದ ಹೋರಾಟದಿಂದ ಆ ದೇಶದ ಪ್ರಧಾನಮಂತ್ರಿಯಾಗಿದ್ದ ಪ್ರೇಮದಾಸ ಸೇರಿದಂತೆ ಹಲವು ಪ್ರಮುಖ ರಾಜಕೀಯ ನಾಯಕರು ಕೊಲ್ಲಲ್ಪಟ್ಟರು. 2009ರಲ್ಲಿ ಎಲ್‌ಟಿಟಿಇ ಕಮಾಂಡರ್ ಪ್ರಭಾಕರನ್ ಅವರ ಹತ್ಯೆಯೊಂದಿಗೆ ಆ ದೇಶದ ಒಂದು ಕರಾಳ ಅಧ್ಯಾಯ ಮುಗಿದು ಅಭಿವೃದ್ಧಿಯ ಶಕೆ ಮತ್ತೇ ಪ್ರಾರಂಭವಾಯಿತು.

ಈ ದೇಶದಲ್ಲಿ ಮೂಲವಾಸಿಗಳಾದ ಸಿಂಹಳೀಯರದ್ದೇ ಪ್ರಾಬಲ್ಯ. ಒಟ್ಟು ಜನಸಂಖ್ಯೆಯು ಶೇ. 74.9 ರಷ್ಟು ಸಿಂಹಳೀಯರಿದ್ದಾರೆ. 11.2% ರಷ್ಟು ಶ್ರೀಲಂಕಾ ತಮಿಳರಿದ್ದಾರೆ. ಶೇಕಡಾ 9.2 ರಷ್ಟು ಲಂಕನ್ ಮೂರ್, ಶೇಕಡಾ 0.5 ರಷ್ಟು ಇತರ ಜನಾಂಗಕ್ಕೆ ಸೇರಿದವರಿದ್ದಾರೆ. ಇಲ್ಲಿನ ಶೇಕಡಾ 70.7ರಷ್ಟು ಜನ ಬೌದ್ಧ ಧರ್ಮ ಅನುಸರಿಸಿದರೆ, 12% ಜನ ಹಿಂದುಗಳಿದ್ದಾರೆ. 9.7ರಷ್ಟು ಇಸ್ಲಾಂ ಮತ್ತು 7.4 ರಷ್ಟು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ್ದಾರೆ.

ಶ್ರೀಲಂಕಾದಲ್ಲಿ ಅಧ್ಯಕ್ಷೀಯ ಹಾಗೂ ಪಾರ್ಲಿಮೆಂಟರಿ ಪದ್ದತಿಯ ಮಿಶ್ರಣದ ಸರ್ಕಾರವಿದೆ. ದೇಶದ ಜನರಿಂದ ನೇರವಾಗಿ ಆಯ್ಕೆಯಾಗುವ ರಾಷ್ಟ್ರಪತಿಯೇ ದೇಶ ಮತ್ತು ಸರ್ಕಾರದ ಮುಖ್ಯಸ್ಥರಾಗಿದ್ದು, ಪ್ರಧಾನಿ ಹಾಗೂ ಇತರ ಸಚಿವರನ್ನು ನೇಮಕ ಮಾಡುತ್ತಾರೆ. ಇಲ್ಲಿ ಪ್ರಬಲ ಅಧ್ಯಕ್ಷೀಯ ಆಳ್ವಿಕೆ ಇದೆ.

ಆದರೆ ಕಳೆದ ಎರಡು ವರ್ಷಗಳ ಕಾಲದಿಂದ ಕೊರೊನಾ ದೆಸೆಯಿಂದಾಗಿ ಆ ದೇಶದ ಪ್ರವಾಸೋದ್ಯಮ ನೆಲ ಕಚ್ಚಿದೆ. ಪರಿಸ್ಥಿತಿಯನ್ನು ಸರಿತೂಗಿಸಲು ಚೈನಾ ದೇಶದಿಂದ ಮಾಡಿದ ಸಾಲ ಈಗ ಆ ದೇಶಕ್ಕೆ ಉರುಳಾಗಿ ಪರಿಣಮಿಸಿದೆ. ಆ ದೇಶದಲ್ಲಿ ಮುದ್ರಣ ಕಾಗದಕ್ಕೂ ಬರ ಉಂಟಾಗಿದ್ದು ಮಕ್ಕಳ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಹಾಗೆಯೇ ಇರುವ ಎರಡು ದಿನಪತ್ರಿಕೆಗಳು ಸಹ ತಮ್ಮ ಮುದ್ರಣವನ್ನು ಸ್ಥಗಿತಗೊಳಿಸಿವೆ. ದೇಶದಲ್ಲಿ ಹಣದುಬ್ಬರ ಹೆಚ್ಚಾಗಿ, ಲಂಕಾ ರೂಪಾಯಿ ಮೌಲ್ಯ ಕುಸಿದಿದೆ. ಸಾಲ ತೀರಿಸಲು ಸರಕಾರ ನೋಟುಗಳನ್ನು ಹೆಚ್ಚು ಮುದ್ರಿಸಿದೆ. ಇದರಿಂದ ಬೆಲೆ ಏರಿಕೆಯಾಗಿದೆ. ಅಕ್ಕಿ, ಬೇಳೆ ಮುಂತಾದವುಗಳ ಬೆಲೆ ಗಗನ ಮುಟ್ಟಿದೆ. ಒಂದು ಕೆಜಿ ಅಕ್ಕಿಯ ಬೆಲೆ 500 ರೂಪಾಯಿ, ಕಾಫಿ ಪುಡಿ ಒಂದು ಕೆಜಿ ಬೆಲೆ 300 ರೂಪಾಯಿ ಆಗಿದೆ ಪೆಟ್ರೋಲ್ ಹಾಗೂ ಡೀಸೆಲ್ ಸಿಗುವುದೇ ಇಲ್ಲ. ಈ ರೀತಿ ಬೆಲೆಯೇರಿಕೆಯಿಂದ ತತ್ತರಿಸಿರುವ ಈ ದ್ವೀಪ ರಾಷ್ಟ್ರದಿಂದ ಅಲ್ಲಿನ ಜನ, ಭಾರತ ಸೇರಿದಂತೆ ಬೇರೆ ಬೇರೆ ದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಅಲ್ಲಿನ ರಾಷ್ಟ್ರಪತಿ ಗೋಟಬ್ಯಾಯ ರಾಜಪಕ್ಸೆ, ಪರಿಸ್ಥಿತಿಯನ್ನು ನಿಭಾಯಿಸಲು ದೇಶದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ ಹಾಗೂ ನೆರೆಯ ದೇಶಗಳಿಂದ ನೆರವು ಕೋರಿದ್ದಾರೆ.

ಇಂದಿನ ದುಸ್ಥಿತಿಗೆ ಅಧ್ಯಕ್ಷ ರಾಜಪಕ್ಸೆ ಅವರೇ ನೇರ ಕಾರಣವೆಂದು ಶ್ರೀಲಂಕಾದ ವಿರೋಧ ಪಕ್ಷಗಳು ಆರೋಪ ಮಾಡುತ್ತಿವೆ. ಜನ ಸಾಮಾನ್ಯರೂ ಸಹ ಇದೇ ಆರೋಪ ಮಾಡುತ್ತಿರುವುದರಿಂದ, ಇವು ಕೇವಲ ಆರೋಪಗಳಾಗಿರದೇ ವಸ್ತು ಸ್ಥಿತಿಯೇ ಆಗಿದೆ. ರಾಜಪಕ್ಸೆ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂಬ ಆರೋಪವನ್ನು ಆ ದೇಶದ ಜನರೇ ಮಾಡುತ್ತಿದ್ದಾರೆ. ಸರಕಾರದಲ್ಲಿ ರಾಜಪಕ್ಸೆ ಕುಟುಂಬದ ಹಸ್ತಕ್ಷೇಪ ಎಲ್ಲೆ ಮೀರಿ, ಆಡಳಿತ ಯಂತ್ರ ದಿಕ್ಕುತಪ್ಪಿದಂತಾಗಿದೆ.

ಭಾರತ ಈಗಾಗಲೇ ಶ್ರೀಲಂಕೆಗೆ 100 ಕೋಟಿ ಅಮೇರಿಕನ್ ಡಾಲರ್ ನೆರವು ನೀಡುವ ಭರವಸೆ ನೀಡಿದೆ ಇದರ ಬೆನ್ನಲ್ಲೇ 40,000 ಟನ್ ಅಕ್ಕಿ ಕೂಡ ಕಳುಹಿಸಲಾಗುತ್ತಿದೆ.

ಅಮೇರಿಕಾ ಚೈನಾ ಸೇರಿದಂತೆ ಬೇರೆ ಬೇರೆ ರಾಷ್ಟ್ರಗಳು ಸಹ ದ್ವೀಪ ರಾಷ್ಟ್ರದ ನೆರವಿಗೆ ಬರುತ್ತವೆ ಎಂಬ ನಿರೀಕ್ಷೆಯಿದೆ.

ಲಂಕೆಯಲ್ಲಿ ಜೀವನ ಮಾಡುವುದೇ ಕಷ್ಟವಾಗಿದೆ ಎಂಬ ಭಾವನೆ ಸಾರ್ವತ್ರಿಕವಾಗಿದೆ. ಒಂದು ಕಾಲದಲ್ಲಿ ತಮಿಳು

ಉಗ್ರ ಸಂಘಟನೆಗಳಿಂದ ಸಾಕಷ್ಟು ತತ್ತರಿಸಿ ಹೋಗಿದ್ದ ಶ್ರೀಲಂಕಾ, ನಂತರದ ವರ್ಷಗಳಲ್ಲಿ ಸಾಮಾನ್ಯ ಸ್ಥಿತಿಗೆ ಹಿಂದಿರುಗಿದ್ದರೂ ಸಹ, ದೇಶದ ಅರ್ಥವ್ಯವಸ್ಥೆ ಡೋಲಾಯಮಾನವಾಗಿರುವುದು ಆತಂಕಕಾರಿಯಾಗಿದೆ.

ಮುಳುಗಿ ಹೋಗುತ್ತಿರುವ ಈ ದೇಶಕ್ಕೆ ಈಗ ಅಂತರಾಷ್ಟ್ರೀಯ ಹಣಕಾಸು ನಿಧಿ, ವಿಶ್ವ ಬ್ಯಾಂಕ್ ಸೇರಿದಂತೆ ಜಾಗತಿಕ ಸಂಸ್ಥೆಗಳು ನೆರವು ನೀಡಿ ಈ ದೇಶವನ್ನು ರಕ್ಷಿಸಬೇಕಾಗಿದೆ. ಇಲ್ಲವಾದಲ್ಲಿ ದೇಶದಲ್ಲಿ ನಾಗರಿಕ ಯುದ್ಧ ಪ್ರಾರಂಭವಾಗಿ, ದೇಶ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಳ್ಳುವ ಅಪಾಯವಿದೆ



– ಡಾ.ಕೆ.ವಿ.ವಾಸು
ಮೊ.: 9341731661

# ಡೇವಿಡ್ ಮಿಲ್ಲರ್ ಅಬ್ಬರ: ಸಿಎಸ್‌ಕೆ ತತ್ತರ

## ಗುಜರಾತ್‌ಗೆ 3 ವಿಕೆಟ್ ರೋಚಕ ಜಯ



ಮುಂಬೈ, ಏ.17– ಡೇವಿಡ್ ಮಿಲ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಉಸ್ತುವಾರಿ ನಾಯಕ ರಶೀದ್ ಖಾನ್ ಅವರ ದಿಟ್ಟ ಹೋರಾಟದ ನೆರವಿನಿಂದ ಗುಜರಾತ್ ಟೈಟನ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

ಇದರೊಂದಿಗೆ ಐಪಿಎಲ್‌ನಲ್ಲಿ ಇದೇ ಮೊದಲ ಬಾರಿಗೆ ಆಡುತ್ತಿರುವ ಗುಜರಾತ್ ಆಡಿರುವ 6 ಪಂದ್ಯಗಳಲ್ಲಿ 5 ಜಯದೊಂದಿಗೆ ಒಟ್ಟು 10 ಅಂಕ ಸಂಪಾದಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಮತ್ತೊಂದೆಡೆ ಕಳೆದ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ ಜಯ ಸಾಧಿಸಿ ಗೆಲುವಿನ ಲಯಕ್ಕೆ ಮರಳಿದ್ದ ಚೆನ್ನೈ ಮತ್ತೆ ಮುಗ್ಗರಿಸಿದೆ.

ಇಲ್ಲಿನ ಎಂಸಿಎ ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಆರಂಭದಲ್ಲೇ 3 ರನ್ ಗಳಿಸಿದ್ದ ರಾಬಿನ್ ಉತ್ತಪ್ಪ ಹಾಗೂ 1 ರನ್ ಗಳಿಸಿದ್ದ ಮೊಯಿಲ್ ಅಲಿ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಋತುರಾಜ್ ಗಾಯಕವಾಡ್ ಜೊತೆಗೂಡಿದ ಅಂಬಟಿ ರಾಯುಡು 3ನೇ ವಿಕೆಟ್‌ಗೆ 92 ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಮತ್ತೊಂದೆಡೆ ಲಯಕ್ಕೆ ಮರಳಿದ ಗಾಯಕ್ವಾಡ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ತಲಾ 5 ಸಿಕ್ಸರ್, ಬೌಂಡರಿ ಒಳಗೊಂಡ 73 ಸಿಡಿಸಿ ವಿಕೆಟ್ ಒಪ್ಪಿಸಿದರು. ಅಂಬಟಿ ರಾಯುಡು 31 ಎಸೆತಗಳಲ್ಲಿ 46 ರನ್ ಗಳಿಸಿ ಔಟ್ ಆದರು. ಕೊನೆ ಹಂತದಲ್ಲಿ ಶಿವಂ ದುಬೆ 19 ಹಾಗೂ ನಾಯಕ ರವೀಂದ್ರ ಜಡೇಜಾ 22 ರನ್ ಗಳಿಸಿದರು. ಈ ಮೂಲಕ ಚೆನ್ನೈ 5 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ಗುಜರಾತ್ ಪರ ಅಲ್ಜಾರಿ ಜೋಸೆಫ್ 2, ಮೊಹಮ್ಮದ್ ಶಮಿ, ಯಶ್ ದಯಾಳ್ ಒಂದೊಂದು ವಿಕೆಟ್ ಗಳಿಸಿದರು.

ಬಳಿಕ ಬೃಹತ್ ಗುರಿ ಬೆನ್ನಟ್ಟಿದ ಗುಜರಾತ್ ತಂಡದ ಮೊತ್ತ 48 ರನ್ ಆಗುವಷ್ಟರಲ್ಲಿ 4 ವಿಕೆಟ್ ಕಳೆದು ಕೊಂಡಿತ್ತು. ಶುಭಮನ್ ಗಿಲ್ ಹಾಗೂ ವಿಜಯ್ ಶಂಕರ್ ಖಾತೆ ತೆರೆಯುವಲ್ಲಿ ವಿಫಲರಾದರು. ಅಭಿನವ್ ಮನೋಹರ್ 12 ಹಾಗೂ ವೃದ್ಧಿಮಾನ್ ಸಹಾ 11 ರನ್ ಗಳಿಸಿ ಔಟ್ ಆದರು. ಬಳಿಕ 5 ನೇ ಕ್ರಮಾಂಕದಲ್ಲಿ ಕ್ರೀಸಿಗಿಳಿದ ಡೇವಿಡ್ ಮಿಲ್ಲರ್ ಏಕಾಂಗಿ ಹೋರಾಟ ನಡೆಸಿದರು. ಅಲ್ಲದೆ ಕೇವಲ 28 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ನಡುವೆ ರಾಹುಲ್ ತೆವಾಟಿಯಾ 6 ರನ್ ಗಳಿಸಿ ಔಟಾಗುವುದರೊಂದಿಗೆ 87 ರನ್‌ಗೆ ಗುಜರಾತ್‌ನ ಅರ್ಧ ತಂಡ ಪೆವಿಲಿಯನ್‌ಗೆ ಮರಳಿತು.

ಇನ್ನೊಂದೆಡೆ ದಿಟ್ಟ ಹೋರಾಟ ನಡೆಸಿದ ಮಿಲ್ಲರ್, ಮೈದಾನದ ಎಲ್ಲಾ ದಿಕ್ಕಿಗೂ ಚೆಂಡನ್ನು ಅಟ್ಟಿದರು. ಅಂತಿಮ 30 ಎಸೆತಗಳಲ್ಲಿ ಗುಜರಾತ್ ಗೆಲುವಿಗೆ 62 ರನ್ ಬೇಕಿತ್ತು. ಮಿಲ್ಲರ್‌ಗೆ ಉಸ್ತುವಾರಿ ನಾಯಕ ರಶೀದ್ ಖಾನ್ ಅವರಿಂದ ಉತ್ತಮ ಬೆಂಬಲ ದೊರಕಿತು. ಕ್ರಿಸ್ ಜಾರ್ಡನ್ ಎಸೆದ ಇನ್ನಿಂಗ್ಸ್‌ನ 18ನೇ ಓವರ್‌ನಲ್ಲಿ ರಶೀದ್ ಮೂರು ಸಿಕ್ಸರ್ ಹಾಗೂ ಒಂದು ಬೌಂಡರಿ ಸೇರಿದಂತೆ 25 ರನ್ ಸಿಡಿಸಿದರು. ಮಿಲ್ಲರ್ ಹಾಗೂ ರಶೀದ್ ಆರನೇ ವಿಕೆಟ್‌ಗೆ 70 ರನ್‌ಗಳ ಜೊತೆಯಾಟ ನೀಡಿದರು. ನಾಯಕನ ಆಟವಾಡಿದ ರಶೀದ್ 21 ಎಸೆತಗಳಲ್ಲಿ 40 ರನ್ ಗಳಿಸಿದರು.

ಅಂತಿಮ ಓವರ್‌ನಲ್ಲಿ ಗುಜರಾತ್ ಗೆಲುವಿಗೆ 13 ರನ್‌ಗಳ ಅವಶ್ಯಕತೆಯಿತ್ತು. ಇಲ್ಲೂ ಸಿಕ್ಸರ್ ಹಾಗೂ ಬೌಂಡರಿ ಬಾರಿಸಿದ ಮಿಲ್ಲರ್ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು. ಅಲ್ಲದೇ 6 ಸಿಕ್ಸರ್, 8 ಬೌಂಡರಿ ಒಳಗೊಂಡ 94 ರನ್ ಸಿಡಿಸಿ ಅಜೇಯರಾಗಿ ಉಳಿದರು. ಚೆನ್ನೈ ಪರ ಡ್ವೇನ್ ಬ್ರಾವೊ 3 ಹಾಗೂ ಮಹೀಶ್ ತೀಕ್ಷಣ 2, ಮುಖೇಶ್ ಚೌದರಿ, ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಡೇವಿಡ್ ಮಿಲ್ಲರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

### ಅಂಕಪಟ್ಟಿ ವಿವರ

| ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ | ಅಂಕ |
|---|---|---|---|---|---|
| ಗುಜರಾತ್ | 6 | 5 | 1 | 0 | 10 |
| ಲಕ್ನೋ | 6 | 4 | 2 | 0 | 8 |
| ಆರ್‌ಸಿಬಿ | 6 | 4 | 2 | 0 | 8 |
| ಎಸ್‌ಆರ್‌ಹೆಚ್ | 6 | 4 | 2 | 0 | 8 |
| ರಾಜಸ್ಥಾನ್ | 5 | 3 | 2 | 0 | 6 |
| ಕೆಕೆಆರ್ | 6 | 3 | 3 | 0 | 6 |
| ಪಂಜಾಬ್ | 6 | 3 | 3 | 0 | 6 |
| ಡೆಲ್ಲಿ | 5 | 2 | 3 | 0 | 4 |
| ಸಿಎಸ್‌ಕೆ | 6 | 1 | 5 | 0 | 2 |
| ಮುಂಬೈ | 6 | 0 | 6 | 0 | 0 |

### ಇಂದಿನ ಪಂದ್ಯಗಳು

[ಏಪ್ರಿಲ್ 18]

ರಾಜಸ್ಥಾನ್ V/S ಕೋಲ್ಕತ್ತಾ
ಸ್ಥಳ: ಬ್ರಬೋರ್ನ್ ಕ್ರೀಡಾಂಗಣ, ಮುಂಬೈ
ಸಮಯ: ರಾತ್ರಿ 7.30

# ಪಂಜಾಬ್‌ಗೆ ಸೋಲು: ಹೈದರಾಬಾದ್‌ಗೆ ಸತತ 4ನೇ ಗೆಲುವು



ಮುಂಬೈ, ಏ.17– ಉಮ್ರಾನ್ ಮಲ್ಲಿಕ್ ಹಾಗೂ ಭುವನೇಶ್ವರ್ ಕುಮಾರ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಸನ್ ರೈಸರ್ಸ್ ಹೈದರಾಬಾದ್ ಪಂಜಾಬ್ ಕಿಂಗ್ಸ್ ವಿರುದ್ಧ 7 ವಿಕೆಟ್‌ಗಳಿಂದ ಜಯ ಸಾಧಿಸಿದೆ.

ಟೂರ್ನಿ ಆರಂಭದ ಮೊದಲೆರಡು ಪಂದ್ಯಗಳಲ್ಲಿ ಸೋಲು ಅನುಭವಿಸಿದ್ದ ಹೈದರಾಬಾದ್ ಬಳಿಕ ನಡೆದ ನಾಲ್ಕು ಪಂದ್ಯಗಳಲ್ಲಿ ಗೆಲುವು ದಾಖಲಿಸಿದೆ. ಇನ್ನೊಂದೆಡೆ ಪಂಜಾಬ್ ತಂಡವು ಆಡಿರುವ ಆರು ಪಂದ್ಯಗಳಲ್ಲಿ ಮೂರನೇ ಸೋಲಿಗೆ ಶರಣಾಗಿದೆ.

ಇಲ್ಲಿನ ಡಿ.ವೈ.ಪಾಟೀಲ್ ಮೈದಾನದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ತಂಡದ ಮೊತ್ತ 61 ರನ್ ಆಗುವಷ್ಟರಲ್ಲಿ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಲಿಯಾಮ್ ಲಿವಿಂಗ್‌ಸ್ಟೋನ್ ಬಿರುಸಿನ ಆಟಕ್ಕಿಳಿದರು. ಕೇವಲ 33 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸ್ ಒಳಗೊಂಡ 60 ಸಿಡಿಸಿದ ಅವರು ವಿಕೆಟ್ ಒಪ್ಪಿಸಿ ಹೊರ ನಡೆದರು. ಉಳಿದಂತೆ ಪಂಜಾಬ್ ಪರ ಶಿಖರ್ ಧವನ್ 8, ಪ್ರಭಸಿಮ್ರಾನ್ ಸಿಂಗ್ 14, ಜಾನಿ ಬೆಸ್ಟೊ 12, ಜಿತೇಶ್ ಶರ್ಮಾ 11, ಶಾರೂಕ್ ಖಾನ್ 26, ಓಡಿಯನ್ ಸ್ಮಿತ್ 13 ರನ್ ಗಳಿಸಿದರು. ಅಂತಿಮವಾಗಿ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 151ರನ್‌ಗೆ ಆಲೌಟಾಯಿತು. ಎಸ್‌ಆರ್‌ಹೆಚ್ ಪರ ಭುವನೇಶ್ವರ್ ಕುಮಾರ್ 3, ಉಮ್ರಾನ್ ಮಲ್ಲಿಕ್ 4, ಜೆ.ಸುಚಿತ್ ಹಾಗೂ ಟಿ.ನಟರಾಜನ್ ತಲಾ ಒಂದೊಂದು ವಿಕೆಟ್ ಪಡೆದರು.

152 ರನ್ ಗೆಲುವಿನ ಗುರಿ ಬೆನ್ನತ್ತಿದ ಹೈದರಾಬಾದ್ ಇನ್ನೂ 7 ಎಸೆತ ಬಾಕಿ ಇರುವಂತೆಯೇ 18.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ಇನ್ನಿಂಗ್ಸ್ ಆರಂಭದಲ್ಲೇ 3 ರನ್ ಗಳಿಸಿದ್ದ ನಾಯಕ ಕೇನ್ ವಿಲಿಯಮ್ಸನ್ ವಿಕೆಟ್ ಕಳೆದುಕೊಂಡರೂ, ಅಭಿಷೇಕ್ ಶರ್ಮಾ 31, ರಾಹುಲ್ ತ್ರಿಪಾಠಿ 34, ಏಡನ್ ಮಾರ್ಕರಮ್ 41 ಹಾಗೂ ನಿಕೋಲಸ್ ಪೂರನ್ 35 ರನ್‌ಗಳ ಉಪಯುಕ್ತ ಇನ್ನಿಂಗ್ಸ್ ಕಟ್ಟುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಅಲ್ಲದೇ ಏಡನ್ ಮಾರ್ಕರಮ್ ಮತ್ತು ನಿಕೋಲಸ್ ಪೂರನ್ 4ನೇ ವಿಕೆಟ್‌ಗೆ ಅಜೇಯ 72 ರನ್ ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಸುಲಭ ಜಯ ತಂದಿತ್ತರು. ಪಂಜಾಬ್ ಪರ ರಾಹುಲ್ ಚಾಹರ್ 2, ಕಗಿಸೋ ರಬಾಡ 1 ವಿಕೆಟ್ ಕಬಳಿಸಿದರು. ಉಮ್ರಾನ್ ಮಲ್ಲಿಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

# ವಿಜೃಂಭಣೆಯ ಕೋದಂಡರಾಮಸ್ವಾಮಿ ಬ್ರಹ್ಮ ರಥೋತ್ಸವ



ಬನ್ನೂರು, ಏ.17(ಪ್ರಭು)– ಪಟ್ಟಣದಲ್ಲಿ ಕೋದಂಡರಾಮ ಸ್ವಾಮಿ ಬ್ರಹ್ಮ ರಥೋತ್ಸವ ಭಾನುವಾರ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ದೇವಾಲಯದ ಪ್ರಧಾನ ಅರ್ಚಕ ಕೃಷ್ಣಸ್ವಾಮಿ ನೇತೃತ್ವದಲ್ಲಿ ದೇವಾಲಯದ ಆವರಣದಲ್ಲಿ ಮುಂಜಾನೆ ವಿಶೇಷ ಪೂಜಾ ಕೈಂಕಾರ್ಯ ನಡೆದವು. ನಂತರ ರಥ ಸಾಗುವ ರಾಜಬೀದಿಗಳಲ್ಲಿ ನೇವೈದ್ಯ, ದೇವರ ತೀರ್ಥ ಹಾಕಿದರು. ನಂತರ ರಾಮ, ಸೀತೆ, ಲಕ್ಷ್ಮಣ, ಹನುಮಂತ ಸಹಿತ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಮಾಡಿ ಬಣ್ಣ ಬಣ್ಣದ ಪತಾಕೆಯಿಂದ ಅಲಂಕೃತಗೊಂಡ ರಥದ ಮೇಲೆ ಪ್ರತಿಷ್ಠಾಪಿಸುತ್ತಿದ್ದಂತೆ ನೆರೆದಿದ್ದ ಭಕ್ತರು ರಾಮನಿಗೆ ಜೈಕಾರ ಹಾಕಿ ರಥ ಎಳೆಯಲಾರಂಭಿಸಿದರು. ರಥ ಸಾಗುವ ಮಾರ್ಗದಲ್ಲಿ ಮಹಿಳೆಯರು ರಸ್ತೆಯನ್ನು ರಂಗೋಲಿಯಿಂದ ಅಲಂಕರಿಸಿ, ಪೂಜೆ ಸಲ್ಲಿಸಿದರು. ರಥವು ತೇರಿನ ಬೀದಿ ಮೂಲಕ ಸಾಗಿ ದೊಡ್ಡಂಗಡಿ ಬೀದಿ ಮೂಲಕ ಯಾವುದೇ ಅಡೆತಡೆಗಳಿಲ್ಲದೇ ದೇವಾಲಯದ ಆವರಣ ಸೇರಿತು. ನವದಂಪತಿ, ಯುವಕ, ಯುವತಿಯರು ಹರಕೆ ಹೊತ್ತ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹಣ್ಣು ಧವನ ಎಸೆದು ಪುನೀತರಾದರು. ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*



# ಹೆಬ್ಬಾಳು ಕೆರೆ ಮೀನುಗಳ ಮಾರಣ ಹೋಮಕ್ಕೆ ಒಳಚರಂಡಿ ಕಲುಷಿತ ನೀರು ಕಾರಣ

## ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಂದ ನೀರಿನ ಸ್ಯಾಂಪಲ್ ಸಂಗ್ರಹ

### ● ಕ್ರಿಮಿನಲ್ ಪ್ರಕರಣ ದಾಖಲಿಸಿದರೂ ಪಾಲಿಕೆ, ಮುಡಾದ ನಿರ್ಲಕ್ಷ್ಯ ● ಬಿ-ರ್‍ಯಾಂಕ್‌ನಿಂದ ಡಿ-ರ್‍ಯಾಂಕ್‌ಗೆ ಕುಸಿದ ಕೆರೆ

ಮೈಸೂರು, ಏ.17(ಎಂಟಿವೈ)- ಮೈಸೂರಿನ ಹೆಬ್ಬಾಳು ಮೀನುಗಳ ಮಾರಣ ಹೋಮಕ್ಕೆ ಒಳ ಚರಂಡಿಯ ಕಲುಷಿತ ನೀರು ಸೇರಿರುವುದು ಕಾರಣ ಎಂದು ದೃಢಪಟ್ಟಿದ್ದು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಕೆರೆಗೆ ತೆರಳಿ ಪರೀಕ್ಷೆಗಾಗಿ ಕೆರೆ ನೀರಿನ ಸ್ಯಾಂಪಲ್ ಸಂಗ್ರಹಿಸಿದರು.

ಇನ್‌ಫೋಸಿಸ್ ಫೌಂಡೇಷನ್ ವತಿಯಿಂದ ಹೆಬ್ಬಾಳು ಕೆರೆಗೆ ಕಾಯಕಲ್ಪ ನೀಡಲಾಗಿತ್ತು. ಇದರಿಂದ ನೆನೆಗುದಿಗೆ ಬಿದ್ದಿದ್ದಂತಹ ಹೆಬ್ಬಾಳು ಕೆರೆಗೆ ಚೈತನ್ಯ ತುಂಬಿದಂತಾಗಿತ್ತು. ಆದರೆ ನಿರ್ವಹಣೆಯ ಕೊರತೆಯಿಂದಾಗಿ ಕೆರೆಗೆ ಕೊಳಚೆ ನೀರು ಸೇರುತ್ತಿದ್ದು, ಶುದ್ಧಗೊಂಡಿದ್ದ ಕೆರೆ ವಾತಾವರಣ ಭಾರೀ ಪ್ರಮಾಣದಲ್ಲಿ ಕಲುಷಿತಗೊಂಡು ಮೀನುಗಳ ಮಾರಣ ಹೋಮಕ್ಕೆ ಕಾರಣವಾಗಿದೆ. ಹೆಬ್ಬಾಳು ಕೆರೆಯಲ್ಲಿ ಸಾವಿರಾರು ಮೀನುಗಳು ಸತ್ತಿರುವ ಹಿನ್ನೆಲೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಆಡಳಿತಾಧಿಕಾರಿ ಗೀತಾ ಅವರ ನೇತೃತ್ವದಲ್ಲಿ ಶನಿವಾರ ಮತ್ತು ಭಾನುವಾರ ಎರಡು ದಿನ ಕೆರೆಯಲ್ಲಿರುವ ನೀರು ಹಾಗೂ ಕೆರೆಗೆ ಸೇರುತ್ತಿರುವ ನೀರಿನ ಸ್ಯಾಂಪಲ್ ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ.

ಪ್ರಾಥಮಿಕ ಹಂತದ ಪರಿಶೀಲನೆಯಲ್ಲಿ ಹೆಬ್ಬಾಳು ಕೆರೆಗೆ ಸೇರುತ್ತಿರುವ ನೀರಿನಲ್ಲಿ ಆರ್ಗ್ಯಾನಿಕ್ ಕಂಟೆಂಟ್ ಹೆಚ್ಚಾಗಿದ್ದು, ಮೀನುಗಳ ಸಾವಿಗೆ ಅದೇ ಕಾರಣ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಹೆಬ್ಬಾಳು ಕೆರೆ ಸುತ್ತಮುತ್ತಲಿನ ಬಡಾವಣೆಗಳಿಂದ ಹರಿದು ಬರುವ ಒಳ ಚರಂಡಿ ನೀರನ್ನು ಶುದ್ಧೀಕರಿಸುವ ನಿಟ್ಟಿನಲ್ಲಿ ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿದೆ. ಆದರೂ ಕೆಲವು ಬಡಾವಣೆಗಳಿಂದ ಮಿಸ್ ಲಿಂಕ್ ಆಗಿ ಒಳ ಚರಂಡಿ ನೀರು ಚರಂಡಿ ಮೂಲಕ ಕೆರೆಗೆ ಸೇರುತ್ತಿರುವುದೇ ಕೆರೆ ಕಲುಷಿತಗೊಳ್ಳಲು ಕಾರಣವಾಗಿದೆ.

**ಮುಡಾ ಮತ್ತು ಪಾಲಿಕೆ ಮೇಲೆ ಕ್ರಿಮಿನಲ್ ಪ್ರಕರಣ:** ಹೆಬ್ಬಾಳು ಕೆರೆಗೆ ಕಲುಷಿತ ನೀರು ಸೇರುತ್ತಿರುವುದು ನಿನ್ನೆ-ಮೊನ್ನೆಯಿಂದಲ್ಲ. ಕಳೆದ ಎರಡು ವರ್ಷಗಳಿಂದಲೂ ಒಳ ಚರಂಡಿ ನೀರು ಚರಂಡಿ ಮೂಲಕ ಹೆಬ್ಬಾಳು ಕೆರೆಯನ್ನು ಸೇರುತ್ತಿದೆ. ಇದನ್ನು ಗಮನಿಸಿದಂತಹ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಮುಡಾ ಹಾಗೂ ಪಾಲಿಕೆಗೆ ನೋಟಿಸ್ ಜಾರಿ ಮಾಡಿ ಕೆರೆಗೆ ಒಳ ಚರಂಡಿ ನೀರು ಸೇರುತ್ತಿರುವುದಕ್ಕೆ ಕಡಿವಾಣ ಹಾಕುವಂತೆ ಸೂಚಿಸಲಾಗಿತ್ತು. ಆದರೂ ಕೆರೆಯ ಬಗ್ಗೆ ಕಾಳಜಿ ವ್ಯಕ್ತಪಡಿಸದ ಹಿನ್ನೆಲೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ಮುಡಾ ಮತ್ತು ಪಾಲಿಕೆ ಮೇಲೆ ಕ್ರಿಮಿನಲ್ ಪ್ರಕರಣವನ್ನು ಈ ಹಿಂದೆಯೇ ದಾಖಲಿಸಿದೆ. ಆದರೂ ಕೆರೆ ಹಿತವನ್ನು ಕಾಯುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ಪ್ರದರ್ಶಿಸಿರುವುದು ಸಾರ್ವಜನಿಕ ವಲಯದಲ್ಲಿ ಟೀಕೆಗೆ ಗುರಿಯಾಗಿದೆ.

**ಬಿ-ರ್‍ಯಾಂಕ್‌ನಿಂದ ಡಿ-ಗೆ ಕುಸಿತ:** ಇನ್ಫೋಸಿಸ್ ಫೌಂಡೇಷನ್ ಕೆರೆಯನ್ನು ಅಭಿವೃದ್ಧಿಪಡಿಸಿದ್ದರಿಂದ ಹೊಸ ರೂಪ ಪಡೆದುಕೊಂಡಿದ್ದ ಹೆಬ್ಬಾಳು ಕೆರೆಯು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನೀಡುವ ರ್‍ಯಾಂಕಿಂಗ್‌ನಲ್ಲಿ ಬಿ-ರ್‍ಯಾಂಕ್ ಪಡೆದಿತ್ತು. ಎರಡೇ ವರ್ಷದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಬಿ-ರ್‍ಯಾಂಕ್‌ನಿಂದ ಹೆಬ್ಬಾಳು ಕೆರೆ ಡಿ-ರ್‍ಯಾಂಕಿಗೆ ಹಿಂಬಡ್ತಿ ಪಡೆದಿದೆ. ಇದರಿಂದ ಪರಿಸರವಾದಿಗಳಿಗೆ ನೋವುಂಟಾಗಿದೆ.

**ಮಿತಿಮೀರಿದ ಅಭಿವೃದ್ಧಿಯೇ ಕೆರೆ ಮಲಿನಕ್ಕೆ ಕಾರಣ:** ಹೆಬ್ಬಾಳು ಕೆರೆ ಸುತ್ತಮುತ್ತ ವಿವಿಧ ಬಡಾವಣೆಗಳು ತಲೆ ಎತ್ತುತ್ತಿದ್ದು, ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗಿವೆ. ಇದರೊಂದಿಗೆ ಲಕ್ಷ್ಮೀಕಾಂತನಗರ, ಸಿಎಂಸಿ ಬಡಾವಣೆ, ಹೂಟಗಳ್ಳಿ, ಹೆಬ್ಬಾಳು ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧ ಬಡಾವಣೆಗಳಿಂದ ಯುಜಿಡಿ ನೀರು ಹರಿದು ಹೋಗಲು 20 ವರ್ಷದ ಹಿಂದೆ ನಿರ್ಮಾಣ ಮಾಡಿದ್ದ ಪೈಪ್‌ಲೈನ್‌ಗೆ ಇದೀಗ ಒತ್ತಡ ಹೆಚ್ಚಾಗಿದೆ. ಹೊಸ ಹೊಸ ಕಟ್ಟಡಗಳು, ವಸತಿ ಸಮುಚ್ಚಯಗಳು ಹೆಚ್ಚಾಗಿದ್ದು, ಇವುಗಳಿಂದ ಬರುವಂತಹ ಒಳ ಚರಂಡಿ ನೀರು ಮಿಸ್ ಲಿಂಕ್ ಆಗಿ ಚರಂಡಿಗೆ ಸಂಪರ್ಕ ಕಲ್ಪಿಸಲಾಗಿದೆ. ಈ ಚರಂಡಿಗಳ ಮೂಲಕವೇ ಒಳ ಚರಂಡಿ ನೀರು ನೇರವಾಗಿ ಕೆರೆ ಸೇರುತ್ತಿದೆ. ಚರಂಡಿ ನೀರನ್ನು ಶುದ್ಧೀಕರಿಸಲು ಶುದ್ಧೀಕರಣ ಘಟಕ ಇದ್ದರೂ ಸಹ ಚರಂಡಿ ನೀರು ಶುದ್ಧೀಕರಣ ಘಟಕಕ್ಕೆ ಹೋಗದೇ ಮಾರ್ಗ ಬದಲಿಸಿ ನೇರವಾಗಿ ಕೆರೆ ಸೇರುತ್ತಿರುವುದು ದೃಢಪಟ್ಟಿದೆ.





ಹೆಬ್ಬಾಳು ಕೆರೆಗೆ ಸೇರುತ್ತಿರುವ ಕಲುಷಿತ ನೀರಿನ ಸ್ಯಾಂಪಲ್ ಸಂಗ್ರಹಿಸುತ್ತಿರುವ ಪರಿಸರ ನಿಯಂತ್ರಣ ಮಂಡಳಿಯ ಸಿಬ್ಬಂದಿಗಳನ್ನು ಕಾಣಬಹುದು.



"ಹೆಬ್ಬಾಳು ಕೆರೆಗೆ ಒಳ ಚರಂಡಿ ನೀರು ಹೆಚ್ಚಿನ ಪ್ರಮಾಣದಲ್ಲಿ ಸೇರುತ್ತಿದೆ. ಕಳೆದ ಎರಡು ವರ್ಷದಿಂದಲೂ ಚರಂಡಿ ನೀರು ಕೆರೆಗೆ ಸೇರುತ್ತಿದ್ದು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮುಡಾ ಹಾಗೂ ಪಾಲಿಕೆಗೆ ಪತ್ರ ಬರೆದು ಪ್ರಕರಣವನ್ನೂ ದಾಖಲಿಸಲಾಗಿದೆ. ಕೆರೆಗೆ ಆರ್ಗ್ಯಾನಿಕ್ ಕಂಟೆಂಟ್ ಹೆಚ್ಚಾಗಿ ಸೇರುತ್ತಿರುವುದೇ ಮೀನುಗಳ ಸಾವಿಗೆ ಕಾರಣವಾಗಿದೆ. ತುರ್ತಾಗಿ ಚರಂಡಿ ನೀರು ಕೆರೆಗೆ ಬರುವುದನ್ನು ತಡೆಗಟ್ಟಬೇಕಾಗಿದೆ. ಆ ನಿಟ್ಟಿನಲ್ಲಿ ಪಾಲಿಕೆ ಅಥವಾ ಮುಡಾ ಕ್ರಮ ಕೈಗೊಳ್ಳಬೇಕು. ಮೀನುಗಳ ಮಾರಣ ಹೋಮದ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿ ನೀರಿನ ಸ್ಯಾಂಪಲ್ ಸಂಗ್ರಹಿಸಲಾಗಿದೆ.

– ಗೀತಾ, ಆಡಳಿತಾಧಿಕಾರಿ,
ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ

# ಜಿ.ಬಿ.ಪುಟ್ಟಸ್ವಾಮಿ ಮಠಾಧಿಪತಿಯಾಗುವುದಕ್ಕೆ ಗಾಣಿಗ ಮುಖಂಡರ ವಿರೋಧ



ಮೈಸೂರು, ಏ.17-ಮಾಜಿ ಸಚಿವ ಜಿ.ಬಿ.ಪುಟ್ಟಸ್ವಾಮಿ ತೈಲೇಶ್ವರ ಗಾಣಿಗ ಮಹಾ ಸಂಸ್ಥಾನದ ಪೀಠಾಧಿಪತಿಯಾಗುವುದನ್ನು ವಿರೋಧಿಸಿ ಗಾಣಿಗ ಮುಖಂಡರು ಸಭೆ ನಡೆಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮೈಸೂರು ನಗರ ಗಾಣಿಗರ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಬೆಲವತ್ತ ಶಿವಕುಮಾರ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಜಿ.ಬಿ. ಪುಟ್ಟಸ್ವಾಮಿ ಪೀಠಾಧಿಪತಿ ಆಗುವುದನ್ನು ತೀವ್ರವಾಗಿ ವಿರೋಧಿಸಲಾಯಿತು. ಅವರಿಗೆ ದೀಕ್ಷೆ ನೀಡಬಾರದೆಂದು ಜಯೇಂದ್ರ ಪುರಿ ಸ್ವಾಮೀಜಿ ಅವರಿಗೆ ಮನವಿ ಸಲ್ಲಿಸಲು ಈ ಸಭೆ ತೀರ್ಮಾನಿಸಿತು. ಒಂದು ವೇಳೆ ತಮ್ಮ ಮನವಿ ತಿರಸ್ಕೃತವಾದಲ್ಲಿ ಕಾನೂನು ಹೋರಾಟ ನಡೆಸಲು ತೀರ್ಮಾನ ಕೈಗೊಳ್ಳಲಾಯಿತು. ಸಭೆಯಲ್ಲಿ ಗುಂಡ್ಲುಪೇಟೆ ಮಹದೇವು, ಗಾಣಿಗರ ಯುವಜನ ಸಂಘದ ಮಾಜಿ ಅಧ್ಯಕ್ಷ ಜವರಾಯ, ಮಾಜಿ ಕಾರ್ಯದರ್ಶಿ ಟಿ.ವಿ.ನಾಗರಾಜು, ನಂಜನಗೂಡಿನ ಧನಶೇಖರ್, ಎಸ್.ಮಹೇಶ್, ಕುಂಬಾರಕೊಪ್ಪಲು ನಾಗರಾಜು ಇನ್ನಿತರರು ಭಾಗವಹಿಸಿದ್ದರು.

# ಮೈಸೂರಲ್ಲಿ ದಂಪತಿ ಆತ್ಮಹತ್ಯೆ

ಮೈಸೂರು, ಏ.17- ನೇಣು ಹಾಕಿಕೊಂಡು ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನಲ್ಲಿ ಶನಿವಾರ ತಡರಾತ್ರಿ ನಡೆದಿದೆ.

ವಿಜಯನಗರದ 3ನೇ ಹಂತದ ನಿವಾಸಿ, ಪೋಸ್ಟ್ ಮ್ಯಾನ್ ಮಾಧವ ನಾಯಕ(57) ಹಾಗೂ ಪತ್ನಿ ಉಷಾ (51) ಆತ್ಮಹತ್ಯೆಗೆ ಶರಣಾಗಿರುವ ದಂಪತಿ. ಮೂಲತಃ ಸುಳ್ಯದ ಕುಕ್ಕಾಜೆಕಾನದ ಮಾಧವ ನಾಯಕ ಅವರು ಸೋಣಂಗೇರಿ, ಮಂಗಳೂರು ಸೇರಿದಂತೆ ವಿವಿಧೆಡೆ ಕಾರ್ಯನಿರ್ವಹಿಸಿದ್ದು, ಕಳೆದ 3 ವರ್ಷಗಳಿಂದ ಮೈಸೂರಿನಲ್ಲಿ ನೆಲೆಸಿದ್ದರು. ಕಳೆದ ವರ್ಷವಷ್ಟೇ ಪುತ್ರಿ ಐಶ್ವರ್ಯ ಅವರ ವಿವಾಹ ನೆರವೇರಿಸಿದ್ದ ಈ ದಂಪತಿ ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗಿದೆ ಎಂದು ವಿಜಯನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

# ಧರ್ಮ, ಸಂಸ್ಕೃತಿ ಉಳಿಸಲು ಪ್ರತಿಯೊಬ್ಬರೂ ಶ್ರಮಿಸಿ: ಅರುಣಾದೇವಿ ಯಡಿಯೂರಪ್ಪ



ನಿವೃತ್ತ ಸಹಪ್ರಾಧ್ಯಾಪಕಿ ಡಾ.ಡಿ.ಶೀಲಾ ನಂಜಪ್ಪ ಅವರಿಗೆ ಕದಳಿಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಚಾಮರಾಜನಗರ, ಏ.17(ಎಸ್‌ಎಸ್)- ನಮ್ಮ ಧರ್ಮ ಸಂಸ್ಕೃತಿ ಉಳಿಯಬೇಕು. ಧರ್ಮ ಉಳಿಸುವ ಕೆಲಸ ಸಮಾರೋಪಾದಿಯಲ್ಲಿ ಆಗಬೇಕಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಅರುಣಾದೇವಿ ಯಡಿಯೂರಪ್ಪ ಆಶಯ ವ್ಯಕ್ತಪಡಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಭಾನುವಾರ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಕದಳಿ ಮಹಿಳಾ ವೇದಿಕೆಯ 19ನೇ ವಾರ್ಷಿಕೋತ್ಸವ, ಕದಳಿ ಸಿರಿ ಪ್ರಶಸ್ತಿ ಪ್ರದಾನ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ದಿನದ ಪರಿಸ್ಥಿತಿಯನ್ನು ಅವಲೋಕಿಸಿ ನೋಡಿದರೆ, ಧರ್ಮ ಉಳಿಸುವ ಕೆಲಸ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರು ಕ್ರಾಂತಿಕಾರಿಯಾಗಿ ನಿಲ್ಲುವ ಮೂಲಕ ಗಟ್ಟಿತನ ಪ್ರದರ್ಶಿಸಬೇಕಾಗಿದೆ. ಇಂದಿನ ದಿನಗಳಲ್ಲಿ ಪೂಜೆ ಕಾಯಕವಾಗುತ್ತಿದೆ. ಕಾಯಕ ಪೂಜೆ ಆಗುತ್ತಿಲ್ಲ. ನನ್ನ ಧರ್ಮ, ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರಿನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕದಳಿ ಮಹಿಳಾ ವೇದಿಕೆ ಹಾಗೂ ಶರಣ ಸಾಹಿತ್ಯ ಪರಿಷತ್ ಒಂದೇ. ಇವುಗಳು ಸಮಾಜಮುಖಿಯಾಗಿ ಕೆಲಸ ಮಾಡುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಕ್ಕಳಿಗೆ ತಂದೆ-ತಾಯಿಗಳು ಸರಿಯಾದ ರೀತಿಯ ಸಂಸ್ಕಾರ ಕಲಿಸದ ಕಾರಣ, ಜಗತ್ತಿನಲ್ಲಿ ಇಂದು ಅನೇಕ ದುರ್ಘಟನೆಗಳು ನಡೆದಿವೆ. ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿಯೇ ಸರಿಯಾಗಿ ತಿದ್ದುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು. ಇದೇ ವೇಳೆ ನಿವೃತ್ತ ಸಹಪ್ರಾಧ್ಯಾಪಕಿ ಡಾ.ಡಿ. ಶೀಲಾ ನಂಜಪ್ಪ ಅವರಿಗೆ ಕದಳಿಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಯಿನಿದೇವಿ, ಲೋಕಾಯುಕ್ತ ಪೊಲೀಸ್ ನಿರೀಕ್ಷಕಿ ಶಶಿಕಲಾ ಮಹದೇವಸ್ವಾಮಿ, ಡಿವೈಎಸ್‌ಪಿ ಪ್ರಿಯದರ್ಶಿನಿ, ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಕೋಡಿಮೊಳೆ ರಾಜಶೇಖರ್, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ದಾಸೋಹಿ ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ವಸಂತಮ್ಮ, ಅಖಿಲ ಭಾರತ ಶರಣ ಪರಿಷತ್ ರಾಜ್ಯಾಧ್ಯಕ್ಷ ಮಲೆಯೂರು ಗುರುಸ್ವಾಮಿ, ರಾಜ್ಯ ಕದಳಿ ಮಹಿಳಾ ವೇದಿಕೆ ಸಂಚಾಲಕಿ ಸುಶೀಲಾ ಸೋಮಶೇಖರ್, ಹರವೆ ಮಠದ ಶ್ರೀ ಸರ್ಪ ಭೂಷಣ ಸ್ವಾಮೀಜಿ, ಮಲೆಯೂರು ಮಠದ ಶ್ರೀ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚಾ.ನಗರ ಮಠದ ಶ್ರೀಚನ್ನಬಸವ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ದುಗ್ಗಟ್ಟಿ ಮಲ್ಲಿಕಾರ್ಜುನಸ್ವಾಮಿ ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 18 ಏಪ್ರಿಲ್ 2022

## ಪಾಲಹಳ್ಳಿಯಲ್ಲಿ ಯೋಗ ದಿನ ಆಚರಣೆ



ಶ್ರೀರಂಗಪಟ್ಟಣ,ಏ.17(ವಿನಯ್ ಕಾರೇಕುರ)–ಮಾನಸಿಕ, ದೈಹಿಕ ಹಾಗೂ ಭೌತಿಕ ಬೆಳವಣಿಗೆಗೆ ಸಹಕಾರಿಯಾಗುವ ಯೋಗವನ್ನು ಪ್ರತಿನಿತ್ಯ ಜೀವನದಲ್ಲಿ ಎಲ್ಲರೂ ಅಳವಡಿಸಿಕೊಳ್ಳಬೇಕೆಂದು ವೈದ್ಯಾಧಿಕಾರಿ ಡಾ. ಸುರೇಶ ಹೇಳಿದರು. ತಾಲೂಕಿನ ಪಾಲಹಳ್ಳಿ ಗ್ರಾಮದ ಆರೋಗ್ಯ ಮತ್ತು ಕ್ಷೇಮದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕ್ಷೇಮ ಕೇಂದ್ರಗಳ ನಾಲ್ಕನೇ ವಾರ್ಷಿಕೋತ್ಸವ ಆಚರಣೆ ನಿಮಿತ್ತವಾಗಿ ಆಯೋಜಿಸಿದ್ದ "ಆರೋಗ್ಯ ಮತ್ತು ಕ್ಷೇಮ ಕೇಂದ್ರ ಯೋಗ ದಿನ" ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಂತರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್ ಡಿ ಬೆನ್ನೂರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಸೇರಿದಂತೆ ಯುವಕರು ಮೊಬೈಲ್‌ಗಳಿಗೆ ಮಾರುಹೋಗಿ ತಮ್ಮ ಆರೋಗ್ಯದ ಕಡೆ ಗಮನ ಕೊಡುತ್ತಿಲ್ಲ. ಮನುಷ್ಯನಿಗೆ ಆರೋಗ್ಯವೇ ಮುಖ್ಯ. ಆರೋಗ್ಯವಿಲ್ಲದೆ ಮನುಷ್ಯ ಏನೇ ಸಂಪಾದಿಸಿದರು ವ್ಯರ್ಥ. ಸಂಪಾದನೆ ಮಾಡಿದ ಸವಲತ್ತುಗಳನ್ನು ಅನುಭವಿಸಲು ಆರೋಗ್ಯವಿರಬೇಕು. ಆರೋಗ್ಯವೇ ಭಾಗ್ಯ, ಆರೋಗ್ಯಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ. ಆರೋಗ್ಯ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಹಾಗೂ ಯೋಗ ಮನುಷ್ಯನ ಸುಸ್ಥಿರ ಆರೋಗ್ಯವನ್ನು ಕಾಪಾಡುತ್ತದೆ. ಪ್ರತಿಯೊಬ್ಬರೂ ಪ್ರತಿ ದಿನ ಅರ್ಧ ಗಂಟೆ ಯೋಗಕ್ಕೆ ಸಮಯವನ್ನು ಮೀಸಲಿಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹೇಮಣ್ಣ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಪುಣ್ಯವತಿ, ಸಮುದಾಯ ಆರೋಗ್ಯ ಅಧಿಕಾರಿ ಸೌಂದರ್ಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ ಆರ್ ಸ್ವಪ್ನ, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಲೀಲಾವತಿ, ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ರಮ್ಯ ಹಾಗೂ ಆಸ್ಪತ್ರೆ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಹಾಜರಿದ್ದರು.

## ಪಿ.ಯು.ಸಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಮಂಡ್ಯ,ಏ.17– ಏ.22 ರಿಂದ ನಡೆಯಲಿರುವ 2021–22 ನೇ ಸಾಲಿನ ಪಿ.ಯು.ಸಿ ಪರೀಕ್ಷೆಯು ಸುಗಮವಾಗಿ ನಡೆಯಲು ಜಿಲ್ಲಾ ವ್ಯಾಪ್ತಿಯ 27 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯ ಪ್ರದೇಶನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ, ಜೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

# ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ

## ಪಾಂಡವಪುರದಲ್ಲಿ ಜನತಾ ಜಲಧಾರೆ ಉದ್ಘಾಟಿಸಿ ಹೆಚ್.ಡಿ.ದೇವೇಗೌಡ ಗುಡುಗು

ಪಾಂಡವಪುರ,ಏ.17– ಜೆಡಿಎಸ್ ಪಕ್ಷವನ್ನು ಮುಗಿಸಲು ಕೆಲವರು ಹೊರಟಿದ್ದಾರೆ. ರಾಜ್ಯದ ಜನರ ಆಶೀರ್ವಾದ ಇರುವವರೆಗೂ ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಗುಡುಗಿದರು. ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗ ನಡೆದ ಜೆಡಿಎಸ್ ಪಕ್ಷದ ಜನತಾ ಜಲಧಾರೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೆಡಿಎಸ್ ಪಕ್ಷವನ್ನು ಮುಗಿಸಲು ಬಹಳಷ್ಟು ಮಂದಿ ಪ್ರಯತ್ನ ನಡೆಸುತ್ತಿದ್ದಾರೆ. ರಾಜ್ಯದ ಜನತೆಯ ಆಶೀರ್ವಾದ ಇರುವವರೆಗೂ ಜೆಡಿಎಸ್‌ನ್ನು ಯಾರಿಂದಲೂ ಮುಗಿಸಲು ಸಾಧ್ಯವಿಲ್ಲ. ರಾಜ್ಯದಲ್ಲಿ ಪ್ರಾದೇಶಕ ಪಕ್ಷಗಳು ಉಳಿದರೆ ಮಾತ್ರ ಅಭಿವೃದ್ಧಿ ಸಾಧ್ಯ, ಪಕ್ಕದ ತಮಿಳುನಾಡು, ಆಂಧ್ರಪ್ರದೇಶವನ್ನು ಬಗ್ಗು ಬಡಿಯಲು ಸಾಧ್ಯವಿಲ್ಲ. ಹಾಗಾಗಿ ಪ್ರಾದೇಶಿಕ ಪಕ್ಷವನ್ನು ಉಳಿಸಿ ಬೆಳೆಸುವಂತೆ ಜನತೆಯಲ್ಲಿ ದೇವೇಗೌಡ ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷದವರು ಕಾವೇರಿ ನದಿ ನೀರಿ ವಿಚಾರದಲ್ಲಿ ಹೋರಾಟವನ್ನೇ ಮಾಡಿಲ್ಲ. ಮಂಡ್ಯದಲ್ಲಿ ಹಿರಿಯರಾದ ಜಿ.ಮಾದೇಗೌಡರು ಕಾವೇರಿ ಹೋರಾಟ ಸಮಿತಿಯ ಅಧ್ಯಕ್ಷರಾಗಿ ನದಿನೀರು ರಕ್ಷಣೆಯ ವಿಚಾರವಾಗಿ ಹೋರಾಟ ಮಾಡಿದ್ದಾರೆ. ಅದನ್ನು ಬಿಟ್ಟರೆ ಕಾಂಗ್ರೆಸ್‌ನ ರಾಜ್ಯಮಟ್ಟದ ಯಾರೊಬ್ಬ ನಾಯಕರು ಕಾವೇರಿ ನೀರು ವಿಚಾರದಲ್ಲಿ ಹೋರಾಟ ನಡೆಸಿಲ್ಲ. ಬಿಜೆಪಿ ಪಕ್ಷದವರು ನಾವು ದೆಹಲಿಗೆ ಹೋಗಿ ಮಾತನಾಡಿದ್ದೇವೆ ಎಂಬುದಾಗಿ ಸುಳ್ಳು ಹೇಳುತ್ತಾರೆ ಎಂದು ಕುಟುಕಿದರು.

ಕೇಂದ್ರ ಸರಕಾರ ಆಗಬಹುದು ಹಾಗೂ



ಕರ್ನಾಟಕದಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ಸಿದ್ದರಾಮಯ್ಯ, ಯಡಿಯೂರಪ್ಪ ಅವರು ಕಾವೇರಿ, ಕೃಷ್ಣ, ಮಹದಾಯಿ ನದಿ ನೀರು ವಿಚಾರದಲ್ಲಿ ಅನ್ಯಾಯ ಮಾಡುತ್ತಲೇ ಬಂದಿದ್ದಾರೆ. ಉತ್ತರ ಕರ್ನಾಟಕ ಜನರ ಸಮಸ್ಯೆಯನ್ನು ಬಗೆಹರಿಸುವ ಕೆಲಸ ಮಾಡಿಲ್ಲ ಎಂದು ಕಿಡಿಕಾರಿದರು.

ಹೋರಾಟಗಳು ಜನರ ಸಮಸ್ಯೆಗಳನ್ನು ನೀಗಿಸುವ ಹಾಗಿರಬೇಕು, ಯಾರೇ ಹೋರಾಟ ನಡೆಸಿದರು ಅದರಿಂದ ಜನರಿಗೆ ಉಪಯೋಗವಾಗುವಂತಿರಬೇಕು. ಅದನ್ನು ಬಿಟ್ಟು ರಾಜಕೀಯ ಲಾಭಕ್ಕಾಗಿ ಹೋರಾಟ ಬಳಸಿಕೊಳ್ಳಬಾರದು ಎಂದರು.

ನಾನು ನನ್ನ ಮಗನನ್ನು ಮುಖ್ಯಮಂತ್ರಿ ಮಾಡುವುದಕ್ಕಾಗಿ ಹೋರಾಟ ನಡೆಸುತ್ತಿಲ್ಲ, ನಮ್ಮ ರಾಜ್ಯದ ನೀರು ರಕ್ಷಣೆಗಾಗಿ ಹೋರಾಟ ಮಾಡುತ್ತಿದ್ದೇನೆ. ನಮ್ಮ ನೀರನ್ನು ನಾವು ಬಳಕೆ ಮಾಡಿಕೊಳ್ಳುವ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದೇನೆ. ನನ್ನ ದೇಹದಲ್ಲಿ ಕೊನೆಯ ಉಸಿರು ಇರುವವರೆಗೂ ನಾನು ಹೋರಾಟ ಮಾಡುತ್ತೇನೆ. ಯಾವುದೇ ಕಾರಣಕ್ಕೂ ನನ್ನ ರಾಜ್ಯದ ಜನರಿಗೆ ಅನ್ಯಾಯ ಆಗಲು ಬಿಡೋದಿಲ್ಲ ಎಂದು ಹೇಳಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ನಮ್ಮ ಕ್ಷೇತ್ರದ ಕುರುಬ ಸಮುದಾಯದ ದೇವಸ್ಥಾನ ಉದ್ಘಾಟನೆಗೆ ಸಿದ್ದರಾಮಯ್ಯನವರನ್ನು ಆಹ್ವಾನಿಸಲು ಹೋಗುವುದಾಗಿ ನಮ್ಮ ವರಿಷ್ಠ ನಾಯಕರ ಗಮನಕ್ಕೆ ತಂದೇ ಹೋಗಿದ್ದೆ. ಆ ಸಂದರ್ಭದಲ್ಲಿ ಮಾಧ್ಯಮದವರು ಅದಕ್ಕೆ ಬಣ್ಣಕಟ್ಟುವ ಕೆಲಸ ಮಾಡಿದರು. ನಾನು ವರಿಷ್ಠ ಎಚ್.ಡಿ.ದೇವೇಗೌಡರ ಗರಡಿಯಲ್ಲಿ ಬೆಳೆದವನು. ದೇವೇಗೌಡರ ಹೋರಾಟ, ನಾಯಕತ್ವವನ್ನು ಮೆಚ್ಚಿ ನಾನು ಮತ್ತು ನನ್ನ ಕುಟುಂಬದ ಎಲ್ಲಾ ಸದಸ್ಯರು ಅವರ ಹಿಂದೆ ಕೆಲಸ ಮಾಡುತ್ತಿದ್ದೇವೆ. ಕೊನೆಯ ಉಸಿರು ಇರುವವರೆಗೂ ದೇವೇಗೌಡರ ಹೋರಾಟದ ಜತೆ ಇದ್ದು ಕೆಲಸ ಮಾಡುವುದಾಗಿ ಸ್ಪಷ್ಟಪಡಿಸಿದರು.

ಕಾವೇರಿ ನದಿ ನೀರಿನ ವಿಚಾರದಲ್ಲಿ ದೇವೇಗೌಡರ ಹೋರಾಟ ದೊಡ್ಡದಿದೆ. ದೇವೇಗೌಡರು ದೊಡ್ಡ ಶಕ್ತಿ, ಅವರು ಕಾವೇರಿ ನದಿ ನೀರಿನ ವಿಚಾರವಾಗಿ ಬೆಂಗಳೂರಿನ ವಿಧಾನಸೌಧದ ಮುಂಭಾಗ ಉಪವಾಸ ಸತ್ಯಾಗ್ರಹ ಉಳಿತಾಗ ಇಡೀ ಕೇಂದ್ರ ಸರಕಾರದ ಪ್ರಮುಖ ಸಚಿವರುಗಳೇ ಬಂದು ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿ ಹೋರಾಟವನ್ನು ಹಿಂಪಡೆಯುವಂತೆ ಮನವಿ ಮಾಡಿದರು ಎಂದರು.

ಜಲಧಾರೆ ಕಾರ್ಯಕ್ರಮದ ಮೂಲಕ ದೇವೇಗೌಡರು ನಮ್ಮ ನೀರು ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಮೇಲುಕೋಟೆ ಕ್ಷೇತ್ರದಲ್ಲಿ ಅಭಿವೃದ್ಧಿಗೊಂಡಿರುವ ಎಲ್ಲಾ ನೀರಾವರಿ ಯೋಜನೆಗಳ ಹಿಂದೆ ದೇವೇಗೌಡರ ಪಾತ್ರ ದೊಡ್ಡದಿದೆ ಎಂದು ಬಣ್ಣಿಸಿದರು.

ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಜನರಿಗೆ ನೀರಿನ ಮಹತ್ವವನ್ನು ತಿಳಿಸಿಕೊಡುವ ಉದ್ದೇಶದಿಂದ ಎಚ್.ಡಿ.ದೇವೇಗೌಡರು ಜಲಧಾರೆ ಕಾರ್ಯಕ್ರಮ ನಡೆಸುತ್ತಿದ್ದಾರೆ. ಜೆಡಿಎಸ್ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ರೈತರ ಬಾಳನ್ನು ಹಸನಾಗಿಸಲು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದಾಗ ಮಂಡ್ಯಕ್ಕೆ 8600 ಕೋಟಿ ಅನುದಾನ ಬಿಡುಗಡೆ ಮಾಡಿದರು ಈಗಿನ ಬಿಜೆಪಿ ಸರಕಾರ ಆ ಎಲ್ಲಾ ಯೋಜನೆಗಳನ್ನು ವಾಪಸ್ಸು ಪಡೆದುಕೊಂಡಿತು. ಬಿಜೆಪಿ ಸರಕಾರ ಮಲತಾಯಿ ಧೋರಣೆ ನೀತಿ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ಸಮಾರಂಭದಲ್ಲಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ವಿಧಾನ ಪರಿಷತ್ ಅಭ್ಯರ್ಥಿ ರಾಜಣ್ಣ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಪಿಎಲ್‌ಡಿ ಬ್ಯಾಂಕ್ ಎಂ.ಸಿ.ಯಶವಂತ್‌ಕುಮಾರ್, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಜಿಲ್ಲಾ ಯೂನಿಯನ್ ನಿರ್ದೇಶಕ ವಿ.ಎಸ್.ನಿಂಗೇಗೌಡ, ಉದ್ಯಮಿ ಎಚ್.ಎಸ್.ಆರ್.ಮಧುಸೂದನ್, ಎಸ್.ಎ.ಮಲ್ಲೇಶ್, ವೈರಮುಡಿಗೌಡ, ಪ್ರವೀಣ್‌ಗವಿಗೌಡ, ಪುರಸಭೆ ಸದಸ್ಯರಾದ ಹಾರೋಹಳ್ಳಿ ಕೃಷ್ಣ, ಆರ್.ಸೋಮಶೇಖರ್, ಗಿರೀಶ್, ಇಮ್ರಾನ್, ಇಸ್ರತ್, ವಾಹಿದ್ ಸೇರಿದಂತೆ ಹಲವರು ಇದ್ದರು.

## ಅಗ್ರಹಾರಬಾಚಹಳ್ಳಿಯಲ್ಲಿ ಶ್ರೀ ಲಕ್ಷ್ಮೀದೇವಿ ರಥೋತ್ಸವ

ಕೆ.ಆರ್.ಪೇಟೆ,ಏ.17(ಶ್ರೀನಿವಾಸ್): ಕೋವಿಡ್–19 ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ನಡೆಯದ ಕೆ.ಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿಯ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಿ ಅಮ್ಮನವರ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಹಿನ್ನೆಲೆ ಶ್ರೀ ಲಕ್ಷ್ಮೀದೇವಿ ಅಮ್ಮನವರಿಗೆ ಮುಂಜಾನೆಯಿಂದಲೇ ವಿಶೇಷ ಪೂಜೆ, ಹಲವು ಹೋಮ ಹವನಗಳು ನಡೆಯಿತು. ವಿಶೇಷ ಪುಷ್ಪಾಲಂಕಾರ ಮಾಡಲಾಗಿತ್ತು. ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿದ ನಂತರ ಉತ್ಸವ ಮೂರ್ತಿಯನ್ನು ಸರ್ವಾಲಂಕೃತ ರಥಕ್ಕೆ ದೇವಸ್ಥಾನದ ಸುತ್ತಲು ಮಂಗಳವಾದ್ಯದೊಂದಿಗೆ ಪ್ರದಕ್ಷಿಣೆ ನಂತರ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.



ರಥವು ಗ್ರಾಮದ ಅರಳಿಕಟ್ಟೆ ವೃತ್ತದಿಂದ ಆರಂಭವಾಗಿ ಮಲ್ಲಸಮುದ್ರ ಕೆರೆ ಬೀದಿ ಮೂಲಕ ಶಾಲಾ ಬೀದಿಯಲ್ಲಿ ಸಾಗಿತು. ನಂತರ ಹೊಲಗದ್ದೆಗಳ ಬಯಲಿನಲ್ಲಿ ಸಾಗಿ, ಬ್ರಾಹ್ಮಣರ ಬೀದಿ, ಹೆಬ್ಬಾಗಿಲು ಬೀದಿ ರಂಗದ ಬೀದಿಯಲ್ಲಿ ಸಾಗಿ ರಂಗಸ್ಥಳಕ್ಕೆ ತೆರಳಿತು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸಹಸ್ರಾರು ಭಕ್ತಾದಿಗಳು ಬಾಚಳಮ್ಮ ಉಘೇ... ಉಘೇ... ಲಕ್ಷ್ಮೀದೇವಮ್ಮ ಉಘೇ.. ಉಘೇ.. ಜಯಘೋಷಗಳೊಂದಿಗೆ ರಥವನ್ನು ಭಕ್ತಿ ಭಾವದಿಂದ ಎಳೆದರು. ರಥಕ್ಕೆ ಹಣ್ಣು ಜವನ ಎಸೆದು ಭಕ್ತಿ ಮೆರೆದರು.

ರಥೋತ್ಸವದ ಅಂಗವಾಗಿ ರಂಗಕುಣಿತ, ಸಿಡಿ, ಬಾಯಿಬೀಗ, ಕೋಲಾಟ, ಕೊಂಡೋತ್ಸವ, ಸಿಡಿಮದ್ದು, ಸೋಮನ ಕುಣಿತ ಸೇರಿದಂತೆ ಹಲವು ಪ್ರಕಾರದ ಜನಪದ ಕಾರ್ಯಕ್ರಮ ನೋಡುಗರ ಗಮನ ಸೆಳೆಯಿತು. ಈ ವೇಳೆ ಭಕ್ತರಿಗೆ ರಥೋತ್ಸವ ಸಮಿತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಗ್ರಾಮದೆಲ್ಲೆಡೆ ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರವನ್ನು ಮಾಡಲಾಗಿತ್ತು. ತಾಲೂಕಿನ ಮಡುವಿನ ಕೋಡಿ, ಚಿಕ್ಕೋಸಹಳ್ಳಿ, ಹರಿರಾಯನಹಳ್ಳಿ, ದಡಿಘಟ್ಟ, ಬೇಲದಕೆರೆ, ಚಿಲ್ಲದಹಳ್ಳಿ, ಬೊಮ್ಮನಾಯಕನಹಳ್ಳಿ, ವಳಗೆರೆಮೆಣಸ, ನಗರೂರು, ಮಾರ್ಗೋನಹಳ್ಳಿ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತಾದಿಗಳು ಭಾಗವಹಿಸಿದ್ದರು.

## ಕಿಕ್ಕೇರಿ, ಗ್ರಾಪಂ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ



ಕಿಕ್ಕೇರಿ ಗ್ರಾಮ ಪಂಚಾಯಿತಿ ವತಿಯಿಂದ ಕಿಕ್ಕೇರಿ ಗ್ರಾಪಂ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಗ್ರಾಪಂ ಅಧ್ಯಕ್ಷೆ ಸುನಿತಾ ದಯಾನಂದ್ ಪುಷ್ಪಾರ್ಚನೆ ಮಾಡಿದರು. ಉಪಾಧ್ಯಕ್ಷೆ ಜಯಲಕ್ಷ್ಮಿ, ಸದಸ್ಯರುಗಳಾದ ಪುಟ್ಟೇಗೌಡ, ರಾಜೇಶ್, ಜ್ಯೋತಿ, ಪುಟ್ಟರಾಜು, ಚಂದ್ರಶೇಖರ್, ಯೋಗೀಶ್, ರೇಣುಕಾ, ಗ್ರಾ.ಪಂ. ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ದಯಾನಂದ್ ಭಾಗವಹಿಸಿದ್ದರು.



ಹಂಪಾಪುರ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಸಾರ್ವಜನಿಕರಿಗೆ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕಾಗಿ ಯೋಗ ಮತ್ತು ಧ್ಯಾನ ಅಭ್ಯಾಸ ಕ್ರಮಗಳ ಪ್ರಾತ್ಯಕ್ಷಿಕೆ ನೀಡಲಾಯಿತು. ಈ ವೇಳೆ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರಾಮಚಂದ್ರ ನಾಯಕ್, ವೈದ್ಯಾಧಿಕಾರಿ ಡಾ.ತಿರುಮಹದೇವಸ್ವಾಮಿ, ಹಂಪಾಪುರ ಮತ್ತು ಹೊಮ್ಮರಗಳ್ಳಿ ಸಮುದಾಯ ಆರೋಗ್ಯಾಧಿಕಾರಿ ಚೇತನ್.ಪಿ, ಪ್ರತಾಪ್.ಸಿ, ಆಶಾ ಕಾರ್ಯಕರ್ತರು, ಆಸ್ಪತ್ರೆ ಸಿಬ್ಬಂದಿ ಇತರರಿದ್ದರು.



ತಿ.ನರಸೀಪುರದ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ 131ನೇ ಅಂಬೇಡ್ಕರ್ ಜಯಂತಿಯನ್ನು ಪುಷ್ಪಾರ್ಚನೆ ಮಾಡುವ ಮೂಲಕ ಚಂದ್ರಶೇಖರ್ ಬಣದ ದಸಂಸ ಮುಖಂಡರು ಆಚರಿಸಿದರು. ಈ ವೇಳೆ ತಾಲೂಕು ಸಂಚಾಲಕರು ಕೆಂಪಯ್ಯನಹುಂಡಿ ರಾಜು, ಮನೋಜ್ ಕುಮಾರ್, ಸಂಘಟನಾ ಸಂಚಾಲಕರು ಮರಿಸ್ವಾಮಿ, ರಾಜಪ್ಪ, ಪ್ರಭಾಕರ್, ಮಹೇಶ್, ಕೇಶವಮೂರ್ತಿ, ಮಹದೇವ, ಪರಶುರಾಮ, ಉಮೇಶ್, ಗೋವಿಂದರಾಜು, ಜಯಣ್ಣ, ಶಿವನಂಜು, ಮಹದೇವಸ್ವಾಮಿ, ನಾಗರಾಜು ಮತ್ತಿತರರಿದ್ದರು.

## ಮೂಗೂರಿನಲ್ಲಿ ಕಸ ನಿರ್ವಹಣೆ ಘಟಕಕ್ಕೆ ಚಾಲನೆ

ಮೂಗೂರು, ಏ. 17 (ಎಂಬಿಆರ್)– ನಿಗದಿತ ಸ್ಥಳದಲ್ಲಿ ತ್ಯಾಜ್ಯದ ವಸ್ತುಗಳನ್ನು ಹಾಕಿ ಗ್ರಾಮದ ನೈರ್ಮಲ್ಯ ಕಾಪಾಡುವುದರ ಜತೆಗೆ ಸ್ಥಳೀಯರು ಸ್ವಚ್ಛತೆಗೆ ಒತ್ತು ನೀಡಬೇಕು ಎಂದು ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ ಹೇಳಿದರು.

ಮೂಗೂರು ಗ್ರಾಮ ಪಂಚಾಯಿತಿಯಿಂದ ಗ್ರಾಮದ ವಿವಿಧೆಡೆ ಹಾಕಲಾದ ಒಣ, ಹಸಿ ಕಸದ ನಿರ್ವಹಣೆ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದರು. ಸ್ಥಳೀಯ ಹೋಟೇಲ್, ಅಂಗಡಿ ವ್ಯಾಪಾರಿಗಳು ಎಲ್ಲೆಂದರಲ್ಲಿ ಕಸ ಹಾಕುವುದನ್ನು ನಿಲ್ಲಿಸಿ ಸ್ವಚ್ಛತೆ ಕಡೆ ಗಮನ ಕೊಟ್ಟು ಅಮ್ಮನವರ ಧಾರ್ಮಿಕ ಕ್ಷೇತ್ರದ ಪಾವಿತ್ರ್ಯತೆಯನ್ನು ಕಾಪಾಡುವ ಪ್ರಯತ್ನವನ್ನು ಸ್ಥಳೀಯರು



ಎಂದಿಗೂ ಮರೆಯಬಾರದು ಎಂದರು.

ಗ್ರಾಮ ಪಂಚಾಯಿತಿ ಪಿಡಿಒ ಟಿ ಎಂ ಮಹೇಶ್ ಮಾತನಾಡಿ, ಗ್ರಾಪಂ 15ನೇ ಹಣಕಾಸಿನ ಅನುದಾನದಡಿಯಲ್ಲಿ ಗ್ರಾಮದ ಸಾರ್ವಜನಿಕ ಪ್ರಮುಖ ಸ್ಥಳಗಳಲ್ಲಿ ಒಣ, ಹಸಿ ಕಸದ ಡಬ್ಬಿಗಳನ್ನು ಹಾಕಲಾಗಿದೆ. ಗ್ರಾಮದ ಎಲ್ಲಾ ವಾರ್ಡಿನ ನಿವಾಸಿಗಳಿಗೆ ಸುಮಾರು 3 ಸಾವಿರ ಕಸ ವಿಲೇವಾರಿ ಬಕೆಟ್ ಅನ್ನು ಪಂಚಾಯಿತಿ ಸದಸ್ಯರ ಸಮ್ಮುಖದಲ್ಲಿ ವಿತರಿಸಲಾಗಿದೆ ಎಂದರು.

ಈ ವೇಳೆ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಎಂ. ಚಂದ್ರಶೇಖರ್, ಗ್ರಾಪಂ ಉಪಾಧ್ಯಕ್ಷ ಜಿ.ಎಸ್. ಮೋಹನ್ ಕುಮಾರ್ (ಶಿವು), ಗ್ರಾಪಂ ಲೆಕ್ಕ ಸಹಾಯಕರಾದ ಜವರೇ ಗೌಡ, ಗ್ರಾಪಂ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.



ಮೈಸೂರು ತಾಲೂಕು ಕಡಕೊಳ ಗ್ರಾಮದ ಕನ್ನಡ ಗೆಳೆಯರ ಬಳಗದಿಂದ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಭಗವಾನ್ ಮಹಾವೀರರ ಜಯಂತಿ ಆಚರಿಸಲಾಯಿತು. ಈ ವೇಳೆ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ನಿರ್ದೇಶಕರಾದ ಎಸ್.ನಟರಾಜು, ಶ್ರೀಕಂಠ ತೊಂಡೇಗೌಡ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ರವಿ, ರೈಲ್ವೆ ಮಹೇಶ್, ಬಳಗದ ಅಧ್ಯಕ್ಷ ವಿಶ್ವನಾಥ್, ಕಾರ್ಯದರ್ಶಿ ಸ್ವಾಮಿನಾಯಕ್, ಉಪಾಧ್ಯಕ್ಷ ಶಿವಪ್ಪ, ಮುಖಂಡರಾದ ನಂಜಪ್ಪ, ಜವರನಾಯಕ, ಗೋವಿಂದರಾಜು, ಲಕ್ಷ್ಮೀಕಾಂತ್, ರುದ್ರಪ್ಪ ಉಪಸ್ಥಿತರಿದ್ದರು.

## ಬಸವ ಜಯಂತಿ ಅದ್ಧೂರಿ ಆಚರಣೆಗೆ ನಿರ್ಧಾರ

ನಂಜನಗೂಡು, ಏ.17– ಪಟ್ಟಣದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ದೇವನೂರು ಮಹದೇವಪ್ಪ ತಿಳಿಸಿದರು.

ನಗರದ ಮಲ್ಲನಮೂಲೆ ಮಠದಲ್ಲಿ ಬಸವ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೇ 3ರಂದು ನಗರದಲ್ಲಿ ಬಸವಣ್ಣನವರ ಜಯಂತಿಯನ್ನು ಎಲ್ಲಾ ಸಮುದಾಯದ ಮುಖಂಡರ ನೇತೃತ್ವದಲ್ಲಿ ಅದ್ಧೂರಿಯಾಗಿ ಆಚರಿಸಲಾಗುವುದು. ಇದಕ್ಕಾಗಿ ಎಲ್ಲಾ ರೀತಿಯ ಸಿದ್ಧತೆಗಳನ್ನು ಕೈಗೊಳ್ಳಲಾಗುವುದು.

ಕೊರೊನಾ ಹಿನ್ನೆಲೆಯಲ್ಲಿ 2 ವರ್ಷಗಳಿಂದ ಬಸವ ಜಯಂತಿ ಆಚರಣೆ ಸ್ಥಗಿತಗೊಳಿಸಲಾಗಿತ್ತು. ಇದೀಗ ಸೋಂಕು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಜಯಂತಿ ಅದ್ಧೂರಿ ಆಚರಣೆಗೆ ತೀರ್ಮಾನಿಸಲಾಗಿದೆ. ಹೀಗಾಗಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಎಂ. ಕೆಂಪಣ್ಣ, ನಗರಸಭಾಧ್ಯಕ್ಷ ಮಹದೇವಸ್ವಾಮಿ, ಶಿವಬಸಪ್ಪ, ಶಿವನಾಗಪ್ಪ ಸೇರಿದಂತೆ ಇತರರಿದ್ದರು.



# ಕ್ಷೇತ್ರದ ಅಭಿವೃದ್ಧಿಯೇ ನನಗೆ ಮುಖ್ಯ: ಶಾಸಕ ಅನಿಲ್ ಚಿಕ್ಕಮಾದು

ಹೆಚ್.ಡಿ.ಕೋಟೆ ಏ.17(ಮಂಜು)– ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರವನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದು, ಈ ಸಂಬಂಧ ಕಳೆದ 4 ವರ್ಷದ ಅವಧಿಯಲ್ಲಿ ಸರ್ಕಾರದಿಂದ 900 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದೇನೆ. ಕ್ಷೇತ್ರದ ಅಭಿವೃದ್ಧಿಯೇ ನನಗೆ ಮುಖ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಕಬಿನಿ ಜಲಾಶಯದ ಮುಂಭಾಗದ ನೂತನ ಸೇತುವೆ ಹಾಗೂ ಪಟ್ಟಣದ ಕೊಲ್ಲೇಗೌಡನಹಳ್ಳಿ ವೃತ್ತದಿಂದ ಬಿದರಹಳ್ಳಿ ವೃತ್ತದವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ 50 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ. ಪ್ರವಾಹ ಸಂದರ್ಭ ಕಬಿನಿ ಜಲಾಶಯದ ಮುಂಭಾಗದ ಸೇತುವೆ ಮುಳುಗಡೆಯಾಗಿ ಸಂಪರ್ಕ ಕಳೆದುಕೊಳ್ಳುತ್ತಿದ್ದ 37 ಗ್ರಾಮಗಳಿಗೆ ರಸ್ತೆ ಮಾರ್ಗ ಹಾಗೂ ಸೇತುವೆ ನಿರ್ಮಾಣಕ್ಕೆ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ 50 ಕೋಟಿ ರೂ. ಅನುದಾನ ತಂದು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಕೊರೊನಾ ವೇಳೆ ಕ್ಷೇತ್ರದ ಬಡ ಕುಟುಂಬಗಳಿಗೆ ಬೆನ್ನೆಲುಬಾಗಿ ನಿಂತು 25 ಸಾವಿರಕ್ಕೂ ಹೆಚ್ಚು ಕುಟುಂಬಕ್ಕೆ ದಿನಸಿ ಕಿಟ್‌ಗಳನ್ನು ವಿತರಿಸಿ



ದ್ದೇನೆ. ಅಲ್ಲದೆ ತಾಲೂಕಿನಲ್ಲಿ ಕೋವಿಡ್ ಹರಡದಂತೆ ಕಾರ್ಯ ಮುನ್ನೆಚ್ಚರಿಕೆ ವಹಿಸಿ ಆರೋಗ್ಯ ಇಲಾಖೆಗೆ ಉಚಿತವಾಗಿ 4 ಆಂಬುಲೆನ್ಸ್, 3500 ಔಷಧ ಕಿಟ್‌ಗಳು, 20 ಆಕ್ಸಿಜನ್ ಘಟಕಗಳನ್ನು ನೀಡಿದ್ದೇನೆ ಎಂದ ಅವರು, ತಾಲೂಕಿನಲ್ಲಿ ಕೋವಿಡ್ ನಿಂದ ಮರಣ ಹೊಂದಿದ 65 ಮಂದಿ ಕುಟುಂಬಕ್ಕೆ ತಲಾ 10 ಸಾವಿರ ವೈಯಕ್ತಿಕ ಧನಸಹಾಯ ಮಾಡಿ ಕ್ಷೇತ್ರದ ಜನತೆಯ ಸಂಕಷ್ಟಕ್ಕೆ ಸ್ಪಂದಿಸಿದ್ದೇನೆ. ರಾಜ್ಯ ದಲ್ಲಿ ಮೊದಲ ಬಾರಿಗೆ ಗ್ರಾಮ ವಾಸ್ತವ್ಯ ಮೂಲಕ ಗ್ರಾಮಗಳ ಸಮಸ್ಯೆ ತಿಳಿಯಲು ಕಾರ್ಯಕ್ರಮ ರೂಪಿಸಿ 4 ಗ್ರಾಪಂಗಳಾದ ಎನ್.ಬೇಗೂರು, ಎನ್. ಬೆಳತ್ತೂರು, ಹಂಚಿಪುರ, ಬಿ.ಮಟಕೆರೆ ಪಂಚಾಯತಿ ವ್ಯಾಪ್ತಿಯಲ್ಲಿ ವಾಸ್ತವ್ಯ ಮಾಡಿ ಗ್ರಾಪಂ ಅಭಿವೃದ್ಧಿಗೆ 36 ಕೋಟಿ ರೂ. ಅನುದಾನದೊಂದಿಗೆ ಗ್ರಾಮಗಳ ಅಭಿವೃದ್ಧಿಗೆ ಚಾಲನೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ.

**ಅಭಿವೃದ್ಧಿ ಕಾರ್ಯಗಳಿಗೆ ಮುನ್ನುಡಿ:** ಚಿಕ್ಕದೇವಮ್ಮ ಬೆಟ್ಟದ ಅಭಿವೃದ್ಧಿಗೆ 5 ಕೋಟಿ, ಸರಗೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣಕ್ಕೆ 5 ಕೋಟಿ, ಹೊಮ್ಮರಗಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ತಲಾ ಒಂದು ಕೋಟಿ, ನುಗು ಕಬಿನಿ ಮೀನು ಸಾಕಾಣಿಕೆ ಕೇಂದ್ರಗಳ ನಿರ್ಮಾಣಕ್ಕೆ 5 ಕೋಟಿ ಅನುದಾನ ತರುವಲ್ಲಿ ಯಶಸ್ವಿಯಾಗಿದ್ದೇನೆ ಎಂದರು.

**ಕೃಷಿ ಕ್ಷೇತ್ರಕ್ಕೆ ಆದ್ಯತೆ:** ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳಿಗೆ ಹೊಸ ಸಿಎ ನಿವೇಶನವನ್ನು ಮಂಜೂರು ಮಾಡಿಸಿದ್ದು, ತಲಾ 45 ಲಕ್ಷ ರೂ. ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಂಡಿದ್ದೇನೆ. ಸರಗೂರು ಹೋಬಳಿ ಕೇಂದ್ರದಲ್ಲಿ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಹಂಪಾಪುರ ಗ್ರಾಮದಲ್ಲಿ ಹೊಸ ರೈತ ಸಂಪರ್ಕ ಕೇಂದ್ರ ಕಟ್ಟಡ ನಿರ್ಮಾಣ ಮಾಡಿ ಸಾರ್ವಜನಿಕ ಸೇವೆಗೆ ನೀಡಲಾಗಿದೆ. ತಾಪಂ ಕಚೇರಿ ನಿರ್ಮಾಣ ಪ್ರಗತಿ ಹಂತದಲ್ಲಿದ್ದು, ಸುಸಜ್ಜಿತ ಸಭಾಂಗಣ ಒಳಗೊಂಡಿದೆ. 40 ಲಕ್ಷ ರೂ. ವೆಚ್ಚದಲ್ಲಿ ತಾಲೂಕು ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ವಿವರಿಸಿದರು.



– ಅನಿಲ್ ಚಿಕ್ಕಮಾದು, ಶಾಸಕರು, ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ



ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ, ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಕಾಲೋನಿಗಳಾದ ಹಂಪಾಪುರ, ಮಾರ್ಚಹಳ್ಳಿ, ಮಥಾಸ್ ಪಾಳ್ಯ, ಗಣಿ ಶೆಡ್ಡು ಅಂತರಸಂತೆ, ಷರೀಫ್ ಕಾಲೋನಿ, ಮಟಕೆರೆ, ನಾಗನಹಳ್ಳಿ, ಹೆಚ್.ಡಿ.ಕೋಟೆ ಟೌನ್, ಡ್ರೈವರ್ ಕಾಲೋನಿಗಳನ್ನು ಅಭಿವೃದ್ಧಿ ಪಡಿಸಲಾಗಿದ್ದು, ಹಾರೋಪುರ, ಚಿನ್ನಪ್ಪನ ಪಾಳ್ಯ, ಚಕ್ಕೂರು ಜೈನರ ಬಡಾವಣೆ, ನಿಲುವಾಗಿಲು ಜೈನರ ಬಡಾವಣೆ, ಹೆಚ್.ಡಿ.ಕೋಟೆ ಮುಸ್ಲಿಂ ಬ್ಲಾಕ್, ಮುಗುತನಮೂಲೆ ಗ್ರಾಮಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗಿದೆ. ಹೆಚ್.ಡಿ.ಕೋಟೆ ಟೌನ್ ಜಮಿಯಾ ಮಸೀದಿ, ಹೆಚ್.ಮಟಕೆರೆ ಮದರಸ, ನಾಗನಹಳ್ಳಿ ಚರ್ಚ್ ಅಭಿವೃದ್ಧಿಗೆ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಡಿ ಅಭಿವೃದ್ಧಿ ಪಡಿಸಲು ಅನುದಾನ ನೀಡಲಾಗಿದೆ ಎಂದರು.

**ಪ್ರವಾಸೋದ್ಯಮಕ್ಕೆ ಒತ್ತು:** ತಾಲೂಕಿನ ಪ್ರಮುಖ ಪ್ರವಾಸಿ ತಾಣಗಳ ಅಭಿವೃದ್ಧಿಗೆ ವಿಶೇಷ ಯೋಜನೆ ಹಮ್ಮಿಕೊಳ್ಳಲಾಗಿದ್ದು, ದಮ್ಮನಕಟ್ಟೆ ಸಫಾರಿ ಕೇಂದ್ರವನ್ನು ಉನ್ನತೀಕರಿಸಲು ಕ್ರಮ ವಹಿಸಲಾಗಿದೆ. ಪ್ರವಾಸಿಗಳಾಗಿ ವೈಟಿಂಗ್ ಲಾಂಜ್, ವಿಶೇಷ ಆಕರ್ಷಣೆಯುಳ್ಳ ಪಾರ್ಕ್, ಸಫಾರಿ ಕೌಂಟರ್, ಸಫಾರಿಗೆ 2 ಹೆಚ್ಚುವರಿ ಬಸ್‌ಗಳನ್ನು ಮಂಜೂರು ಮಾಡಿಸಲಾಗಿದೆ. ಕಬಿನಿ ಜಲಾಶಯದ ಹಿನ್ನೀರಿನಲ್ಲಿ ದೋಣಿ ವಿಹಾರ ಕೇಂದ್ರದ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಬಿನಿ ಜಲಾಶಯದಲ್ಲಿ ಖಾಸಗಿ ಸಹ ಭಾಗಿತ್ವದಲ್ಲಿ ಗಾರ್ಡನ್ ನಿರ್ಮಾಣ ಮಾಡಲು ಅನುಮೋದನೆ ದೊರೆತಿದ್ದು, ಮುಂದಿನ ಸಾಲಿನಲ್ಲಿ ಚಾಲನೆ ದೊರೆಯುವ ನಿರೀಕ್ಷೆ ಇದೆ. ಚಿಕ್ಕದೇವಮ್ಮನವರ ಬೆಟ್ಟದ ಪಾದದಿಂದ ಮೆಟ್ಟಿಲುಗಳು, ದೇವಸ್ಥಾನಕ್ಕೆ ತೆರಳಲು ಅಂಗವಿಕಲರಿಗಾಗಿ ವಿಶೇಷ ಮಾರ್ಗ, ಮೆಟ್ಟಿಲುಗಳಿಗೆ ಮೇಲ್ಛಾವಣಿ, ಕುಸಿಯುತ್ತಿರುವ ಭಾಗದಲ್ಲಿ ಸಂರಕ್ಷಣಾ ಗೋಡೆಗಳ ನಿರ್ಮಾಣ, ಭದ್ರತಾ ಸಿಬ್ಬಂದಿಗಳಿಗೆ ಕೊಠಡಿಗಳು, ಸಾರ್ವಜನಿಕ ಶೌಚಾಲಯ, ವಿಶೇಷ ಬಸ್ಸುಗಳ ಸೌಕರ್ಯ ಮುಂತಾದವುಗಳ ಅಭಿವೃದ್ಧಿ ಕಾರ್ಯಗಳಿಗೆ ಕ್ರಮ ವಹಿಸಲಾಗಿದೆ ಎಂದರು.

ತಾರಕ ಜಲಾಶಯದ ಮೇಲ್ದರ್ಜೆಗೆ ಏರಿಸುವುದು, ಪ್ರವಾಸಿ ವಸತಿ ಗೃಹ, ದೋಣಿ ವಿಹಾರ ಕೇಂದ್ರ ಸ್ಥಾಪನೆ ಹಾಗೂ ದಮ್ಮನ ಕಟ್ಟೆ ಸಫಾರಿ ಕೇಂದ್ರದಿಂದ ತಾರಕ ಜಲಾಶಯ ಸಂಪರ್ಕ ರಸ್ತೆ ಅಭಿವೃದ್ಧಿ ಮತ್ತಿತರ ಕೆಲಸಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಅನುಮೋದನೆ ದೊರೆಯುವ ನಿರೀಕ್ಷೆ ಇದೆ. ಕಬಿನಿ ಹಿನ್ನೀರಿನಲ್ಲಿ ಜಲಸಾರಿಗೆ ಸಂಪರ್ಕ ಸ್ಥಾಪಿಸಿ, ಭೀಮನಕೊಲ್ಲಿ ಮಹದೇಶ್ವರ ದೇವಸ್ಥಾನ, ಗಂಡತ್ತೂರು, ಉದ್ದೂರು ಹಾಡಿ ಮತ್ತು ಕಬಿನಿ ಜಲಾಶಯ ಹತ್ತಿರ 4 ಕೇಂದ್ರಗಳನ್ನು ಸಂಪರ್ಕಿಸಿ ಜಲಸಾರಿಗೆಯಿಂದ ಸಾರಿಗೆ ಸಂಪರ್ಕದ ಅಂತರವನ್ನು ಕಡಿಮೆ ಮಾಡುವ ಉದ್ದೇಶವಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

# ಕನ್ನಡ ಭಾಷೆ ಉಳಿಸಿ–ಬೆಳೆಸಲು ಪೂರಕ ಚಟುವಟಿಕೆ ಅಗತ್ಯ

**● ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ ಅಭಿಮತ ● ಕಾವ್ಯ ದಸರಾ-2022 ಸಾಹಿತ್ಯಕ ಕಾರ್ಯಕ್ರಮ, ವಿವಿಧ ಪ್ರಶಸ್ತಿ ಪ್ರದಾನ**

ಮೈಸೂರು,ಏ.17(ಪಿಎಂ)– ಕನ್ನಡ ಉಳಿಸಿ ಬೆಳೆಸಲು ಕೇವಲ ಮಾತುಗಳಿಂದ ಸಾಧ್ಯವಿಲ್ಲ. ಜೊತೆಗೆ ಅದಕ್ಕೆ ಪೂರಕ ಚಟುವಟಿಕೆಗಳೂ ಅಗತ್ಯ ಎಂದು ಭಾಷಾ ವಿದ್ವಾಂಸರೂ ಆದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಪ್ರಧಾನ ಗುರುದತ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಗ್ರಾಮಾಂತರ ಬುದ್ಧಿಜೀವಿಗಳ ಬಳಗ, ಪ್ರಗತಿಪರ ಪ್ರಕಾಶನ ಮತ್ತು ಅಖಿಲ ಭಾರತೀಯ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ ಸಂಯುಕ್ತಾಶ್ರಯದಲ್ಲಿ ಕಾವ್ಯ ದಸರಾ–2022 ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ 10 ಕೃತಿಗಳ ಬಿಡುಗಡೆ, ವಿವಿಧ ಪ್ರಶಸ್ತಿ ಪ್ರದಾನ ಸೇರಿದಂತೆ ಸಾಹಿತ್ಯಕ ಕಾರ್ಯಕ್ರಮ ಉದ್ಘಾಟಿಸಿ, 'ಕಾವ್ಯ ದಸರಾ–2' ಕೃತಿ ಬಿಡುಗಡೆಗೊಳಿಸಿ, 'ಪ್ರೊ.ಎಚ್ಚೆಸ್ಕೆ ಶತಮಾನೋತ್ಸವ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಯಾವ ದೃಷ್ಟಿಯಲ್ಲೂ ಕಡಿಮೆ ಇಲ್ಲ ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಕನ್ನಡ ಉಳಿಸಿ, ಬೆಳೆಸಿ ಎಂದು ಮಾತಿನಲ್ಲಿ ಹೇಳಿದರೆ ಸಾಲದು, ಇಂದಿನ ಕಾರ್ಯಕ್ರಮದಂತಹ ಚಟುವಟಿಕೆಗಳು ಅಗತ್ಯ. ಇಂತಹ ಕಾರ್ಯಕ್ರಮ ಆಯೋಜಿಸಿರುವ ಗ್ರಾಮಾಂತರ ಬುದ್ಧಿಜೀವಿಗಳ ಬಳಗದ ಅಧ್ಯಕ್ಷ ಭೇರ್ಯ ರಾಮ್‌ಕುಮಾರ್ ಅವರು ಮನೆ ಮನೆಗೆ ಕವಿಗೋಷ್ಠಿ ತೆಗೆದುಕೊಂಡು ಹೋದ ಹಿರಿಮೆ ಹೊಂದಿದ್ದಾರೆ. ಇವರು ಅಪರೂಪದ ಸಾಹಿತ್ಯ ಸಂಚಾಲಕ, ಸಂಘಟಕರು. ರಾಮ್‌ಕುಮಾರ್ ಈ ಸಂಸ್ಥೆ ಕಟ್ಟಿ ಹಲವು ಪುಸ್ತಕ ಹೊರತಂದಿದ್ದಾರೆ. ಇಂದಿನ ಪುರಸ್ಕೃತರ ಪಟ್ಟಿ ನೋಡಿದರೆ ಮಿನಿ ಸಾಹಿತ್ಯ ಸಮ್ಮೇಳನದಂತೆ ಭಾಸವಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಇಂದು ಬಿಡುಗಡೆಗೊಳಿಸಿದ 'ಕಾವ್ಯ ದಸರಾ–2' ಕೃತಿಯಲ್ಲಿ 28 ಕವಿಗಳ 198 ಕವನಗಳಿದ್ದು, ಅನೇಕ ವಿಷಯಗಳ ಮೇಲೆ ಕವನಗಳು ರಚನೆಗೊಂಡಿವೆ. ಇತಿಹಾಸ ಸೃಷ್ಟಿಸಿದ ಸಾಲು ಮರದ ತಿಮ್ಮಕ್ಕ, ಕಾವೇರಿಯಿಂದ ಗೋದಾವರಿವರೆಗಿನ ಪ್ರಾಚೀನ ಸಾಹಿತ್ಯ, ಕೋವಿಡ್ ಸೇರಿದಂತೆ ಇಂದಿನ ಸಮಸ್ಯೆ ಕುರಿತ ವಿಷಯಗಳ ಬಗ್ಗೆ ಕವನ ಬರೆದು ಸಾಹಿತ್ಯವನ್ನು ಜೀವಂತವಾಗಿರಿಸಿದ್ದಾರೆ ಎಂದು ಬಣ್ಣಿಸಿದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದಕ್ಕಲು ನಡೆಸಿದ ಹೋರಾಟವೂ ಇಲ್ಲಿ ಕವನ ಸ್ವರೂಪ ಪಡೆದಿದೆ. ತಮಿಳು ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಷ್ಟು ಸುಲಭದಲ್ಲಿ ಕನ್ನಡಕ್ಕೆ ಈ ಮಾನ್ಯತೆ ದಕ್ಕಲಿಲ್ಲ. ಈಗಲೂ ರಾಜ್ಯವು ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ರಾಜ್ಯದ ಬಹುತೇಕ ಸಂಸದರು ನಾಡಿನ ಪಾಲನ್ನು ಪಡೆಯುವಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿಲ್ಲ. ಕೇವಲ ನಾಮಕಾವಸ್ತೆ ಸದಸ್ಯರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ವಾಸ್ತವವಾಗಿ ಇಂದು ನಾನು ಏನಾಗಿದ್ದೇನೋ ಅದಕ್ಕೆಲ್ಲಾ ಮೂಲ ಕಾರಣ ಎಚ್ಚೆಸ್ಕೆ ಅವರು ನನಗೆ ಮಾರ್ಗದರ್ಶಕರಾಗಿದ್ದರು. ಅವರು ಬ್ಯಾಂಕಿಂಗ್ ವ್ಯವಹಾರದಲ್ಲಿ ಕನ್ನಡ ಅಳವಡಿಸಲು ಅಗಾಧ ಕೆಲಸ ಮಾಡಿದ್ದಾರೆ ಎಂದು ಸ್ಮರಿಸಿದರು.

ಕೊಡಗು ಜಿಲ್ಲೆ ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಆರ್.ಕೆ.ಬಾಲಚಂದ್ರ ಅವರಿಗೂ 'ಪ್ರೊ.ಎಚ್ಚೆಸ್ಕೆ ಶತಮಾನೋತ್ಸವ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಡಾ.ಪುಷ್ಪ ಅಯ್ಯಂಗಾರ್ ಅವರ 'ದಾರಿದೀಪ', 'ಧೀಮಂತ ಮಹಿಳೆಯರು' ಮತ್ತು 'ನಮ್ಮ ಮನೆ ಬಾಗಿಲಲ್ಲೇ ನಮ್ಮ ಆರೋಗ್ಯ' ಕೃತಿಗಳನ್ನು ಕ್ರಮವಾಗಿ ಹಿರಿಯ ಸಾಹಿತಿಗಳಾದ ಕೆ.ಎನ್.ಮಹಾಬಲ, ಡಾ.ಹೆಚ್.ಎ.ಪಾರ್ಶ್ವನಾಥ್, ಹಿರಿಯ ವೈದ್ಯ ಡಾ.ಹೆಚ್.ಬಿ.ರಾಜಶೇಖರ್ ಬಿಡುಗಡೆಗೊಳಿಸಿದರು.

ಶೋಭಾ ಪುರೋಹಿತ ಅವರ 'ಮೊದಲ ತೊದಲು', 'ಕಾವ್ಯ ರಸಗಂಗೆ' ಕೃತಿಗಳನ್ನು ಕ್ರಮವಾಗಿ ಸಾಹಿತಿಗಳಾದ ಎ.ಹೇಮಗಂಗಾ, ಜಯಶ್ರೀ, ಮುತ್ತು ಲಕ್ಷ್ಮೀ ಅವರ 'ಭಕ್ತಿ ಲಹರಿ–ಗೀತ ಲಹರಿ' ಕೃತಿಯನ್ನು ಚಿಂತಕಿ ಡಾ.ಎ.ಪುಷ್ಪ ಅಯ್ಯಂಗಾರ್, ಛಾಯಾ ಅವರ 'ಕಾವ್ಯ ಲಹರಿ' ಕೃತಿಯನ್ನು ಸಾಹಿತಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಲೋಕಾರ್ಪಣೆ ಮಾಡಿದರು. ಕೆ.ಎಸ್.ಮಹಾಬಲ ಅವರ 'ಬೊಗಸೆ ತುಂಬಾ ಹೂವು' ಕೃತಿಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಭೇರ್ಯ ರಾಮಕುಮಾರ್ ಸಂಪಾದಕತ್ವದ 'ಪ್ರೇಮಕವಿ ಕೆ.ಎಸ್.ನ–107' ಕೃತಿಯನ್ನು ಕವಯತ್ರಿ ಡಾ.ಲತಾ ರಾಜಶೇಖರ್ ಬಿಡುಗಡೆ ಮಾಡಿದರು. ಇದಲ್ಲದೆ, ಪ್ರೇಮಕವಿ ಕೆ.ಎಸ್.ನ ನೆನಪಿನ ಅಪೂರ್ವ ದಂಪತಿ ಪ್ರಶಸ್ತಿ, ಡಾ.ಕೆ.ಶಿವರಾಮ ಕಾರಂತ ಕಥಾ ಪುರಸ್ಕಾರ ಹಾಗೂ ದಸರಾ ಕಾವ್ಯ ಪುರಸ್ಕಾರ ನೀಡಲಾಯಿತು. ಅಲ್ಲದೆ, ಆಹ್ವಾನಿತ ಕವಿ, ಕವಯಿತ್ರಿಯರಿಂದ ಕಾವ್ಯ ದಸರಾ ಕವಿಗೋಷ್ಠಿ ನಡೆಯಿತು. ಡಾ.ಭೇರ್ಯ ರಾಮ ಕುಮಾರ್ ಸೇರಿ ದಂತೆ ಸಂಘಟನೆಯ ಪದಾಧಿಕಾರಿಗಳು ಹಾಜರಿದ್ದರು.


ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಭಾನುವಾರ ವಿವಿಧ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.


ಹೊಸಪೇಟೆಯಲ್ಲಿ ನಡೆಯುತ್ತಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಭೇಟಿಯಾಗಿ 'ಮೋದಿ ದಿ ವಿಷನ್ ಡಾಕ್ಯುಮೆಂಟ್ ಅಂಡ್ ಸಂಘಟನ್ ಸರ್ಕಾರ್ ಸುವಿಧಾ' ಕಾರ್ಯಕ್ರಮದಡಿ ತಮ್ಮ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ, ಸಂಘಟನೆಗಳ ಕುರಿತಾದ ಪುಸ್ತಕವನ್ನು ಅವರಿಗೆ ನೀಡಿದರು. ಈ ವೇಳೆ ರಾಮದಾಸ್ ಅವರ ಕಾರ್ಯಕ್ರಮಗಳ ಬಗ್ಗೆ ನಡ್ಡಾ ಮೆಚ್ಚುಗೆ ವ್ಯಕ್ತಪಡಿಸಿದರು.

## ಮೈಸೂರಿನಲ್ಲಿ 'ವೈಸರ್' ಸ್ಮಾರ್ಟ್ ಹೋಮ್ ಎಕ್ಸ್‌ಪೀರಿಯನ್ಸ್ ಸೆಂಟರ್ ಆರಂಭ

ಮೈಸೂರು, ಏ. 15– ಇಂಧನ ನಿರ್ವಹಣೆ ಮತ್ತು ಯಾಂತ್ರೀಕೃತಗೊಂಡ ಡಿಜಿಟಲ್ ರೂಪಾಂತರದಲ್ಲಿ ಮುಂಚೂಣಿಯಲ್ಲಿರುವ ಷ್ನೇಯ್ಡರ್ ಎಲೆಕ್ಟ್ರಿಕ್, ಇಂದು ಮೈಸೂರಿನ ಮೊದಲ 'ವೈಸರ್' ಸ್ಮಾರ್ಟ್ ಹೋಮ್ ಎಕ್ಸ್‌ಪೀರಿಯನ್ಸ್ ಸೆಂಟರ್ ಅನ್ನು ದೇವರಾಜ ಅರಸು ರಸ್ತೆಯಲ್ಲಿ ಪ್ರಾರಂಭಿಸುವುದಾಗಿ ಘೋಷಿಸಿದೆ

ರಾಜ್ಯದ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಕಂಪನಿಯ ಹಿಂದಿನ ಎಕ್ಸ್‌ಪೀರಿಯನ್ಸ್ ಸೆಂಟರ್ ಮಳಿಗೆಗಳ ಯಶಸ್ಸಿನ ನಂತರ, ಕಂಪನಿಯು ತನ್ನ 'ವೈಸರ್' ಹೋಮ್ ಆಟೊಮೇಷನ್ ಶ್ರೇಣಿಯ ಮೂಲಕ ಮನೆಗಳನ್ನು ಪರಿವರ್ತಿಸುವ ಮತ್ತು ಅನುಕೂಲಕರ ಜೀವನಶೈಲಿಯನ್ನು ನೀಡುವ ಉದ್ದೇಶದಿಂದ ನವೀನ ಹೋಮ್ ಆಟೊಮೇಷನ್ ಪರಿಹಾರಗಳನ್ನು ತರುವಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ ಎಂದು ಷ್ನೇಯ್ಡರ್ ಎಲೆಕ್ಟ್ರಿಕ್ ಇಂಡಿಯಾದ ಹೋಮ್ ಮತ್ತು ಡಿಸ್ಟ್ರಿಬ್ಯೂಷನ್ ವಿಭಾಗದ ಉಪಾಧ್ಯಕ್ಷ ಶ್ರೀನಿವಾಸ್ ಶಾನಭೋಗ್ ತಿಳಿಸಿದ್ದಾರೆ.


ಬೆಂಗಳೂರು–ನೀಲಗಿರಿ ರಸ್ತೆ ಮೈಸೂರು ಅರಮನೆ ಮುಖ್ಯದ್ವಾರದ ಬಳಿ ಶ್ರೀ ಸಿದ್ದಲಿಂಗೇಶ್ವರಸ್ವಾಮಿ 19ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ನಡೆದ ಮೆರವಣಿಗೆಗೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ಸಮಿತಿಯ ಅಧ್ಯಕ್ಷ ಚಂದ್ರಶೇಖರ್, ಖಜಾಂಚಿ ವಿಜಯ್ ಕುಮಾರ್, ರವಿಪ್ರಕಾಶ್, ವಿರೂಪಾಕ್ಷ, ಯುವ ಸಮಿತಿ ಅಧ್ಯಕ್ಷ ಮಂಜುನಾಥ್, ಪ್ರದೀಪ್ ಕುಮಾರ್, ಸೋಮು ಸರಗೂರು, ಆರ್.ಡಿ.ವಿಶ್ವನಾಥ, ರವಿಶಂಕರ್, ಪ್ರತಾಪ್ ರಾವ್ ಮತ್ತಿತರರು ಉಪಸ್ಥಿತರಿದ್ದರು.

# ಇ–ಶೌಚಾಲಯಗಳನ್ನು ಗುಜರಿಗೆ ಹಾಕಲು ಪಾಲಿಕೆ ನಿರ್ಧಾರ

ಮೈಸೂರು, ಏ.17(ಎಸ್‌ಬಿಡಿ)– ಮೈಸೂರು ನಗರದ ನೈರ್ಮಲ್ಯ ಕಾಪಾಡುವ ಉದ್ದೇಶದಿಂದ ಅಳವಡಿಸಿದ್ದ ಇ–ಟಾಯ್ಲೆಟ್(ಶೌಚಾಲಯ)ಗಳು ಅನುಪಯುಕ್ತವಾಗಿರುವ ಕಾರಣ ಅವುಗಳನ್ನು ಗುಜರಿಗೆ ಹಾಕಲು ನಗರ ಪಾಲಿಕೆ ನಿರ್ಧರಿಸಿದೆ.

ನಗರದ ಸ್ವಚ್ಛತೆ ಹಾಗೂ ಸಾರ್ವಜನಿಕರಿಗೆ ಅಲ್ಲಲ್ಲಿ ಶೌಚಾಲಯ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ 2016–17ನೇ ಸಾಲಿನಲ್ಲಿ ಇ–ಶೌಚಾಲಯ ಅಳವಡಿಸಲು ನಿರ್ಧರಿಸಲಾಯಿತು. ಅದರಂತೆ ದೇವರಾಜ ಅರಸು ರಸ್ತೆ ನಗರ ಬಸ್ ನಿಲ್ದಾಣ, ಜಗನ್ಮೋಹನ ಅರಮನೆ, ಮಕ್ಕಾಜಿ ಚೌಕ, ಚೆಲುವಾಂಬ ಆಸ್ಪತ್ರೆ ಅಪೋಲೊ ಆಸ್ಪತ್ರೆ ಹತ್ತಿರ, ಮಹಾರಾಣಿ ಕಾಲೇಜು ಆವರಣ, ರಾಮಕೃಷ್ಣನಗರ ವೃತ್ತ, ರಾಮಕೃಷ್ಣನಗರ ಸಬ್‌ರಿಜಿಸ್ಟ್ರಾರ್ ಕಚೇರಿ ಬಳಿ, ರಾಮಕೃಷ್ಣ ನಗರ ಉದ್ಯಾನ, ನ್ಯೂ ಕಾಂತರಾಜ್ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಸರ್ಕಲ್, ಕುವೆಂಪುನಗರ ಸುಮಾ ಸೋಪಾನ ಪಾರ್ಕ್, ವಿದ್ಯಾರಣ್ಯಪುರಂ ಬಸ್ ನಿಲ್ದಾಣ, ಮೈಸೂರು ಕ್ಲಬ್ ಹತ್ತಿರ, ರೈಲು ನಿಲ್ದಾಣ, ಲವ–ಕುಶ ಪಾರ್ಕ್, ಶ್ಯಾಂ ಸ್ಟುಡಿಯೊ ಹತ್ತಿರ, ಮೃಗಾಲಯ, ಗಂಗೋತ್ರಿ ಲೇಔಟ್, ವಿಶ್ವಕರ್ಮ ಹಾಸ್ಟೆಲ್ ಬಳಿ ಸೇರಿ ಒಟ್ಟು 23 ಕಡೆ ಇ–ಶೌಚಾಲಯ ಅಳವಡಿಸಲಾಯಿತು.

ಹಣ ಪಾವತಿಸಿ ಬಳಸಬೇಕಿದ್ದ ಇ–ಶೌಚಾಲಯಗಳನ್ನು ಸರಬರಾಜು ಮಾಡಿದ ಸಂಸ್ಥೆಯವರೇ ಒಂದು ವರ್ಷ ನಿರ್ವಹಣೆ ಮಾಡುವ ಒಪ್ಪಂದದೊಂದಿಗೆ ಅನುಷ್ಠಾನಕ್ಕೆ ತರಲಾಯಿತು. 5 ರೂ. ನಾಣ್ಯ ಹಾಕಿದರೆ ಇ–ಶೌಚಾಲಯದ ಬಾಗಿಲು ಸ್ವಯಂ ಚಾಲಿತವಾಗಿ ತೆರೆದುಕೊಳ್ಳುತ್ತಿತ್ತು. ಶೌಚಾಲಯದೊಳಗೆ ಬೇರೆಯವರಿದ್ದರೆ ಕೆಲ ಸಮಯ ಕಾಯುವಂತೆ ಸೂಚಿಸುವಂತಹ ತಂತ್ರಜ್ಞಾನವನ್ನೂ ಅಳವಡಿಸಲಾಗಿತ್ತು.

ಇ–ಶೌಚಾಲಯ ಪರಿಕಲ್ಪನೆ ಸೂಕ್ತವೆನಿಸಿದ್ದರೂ ಅವುಗಳ ನಿರ್ವಹಣೆ ಪಾಲಿಕೆಗೆ ಹೊರೆಯಾಯಿತು. ಅಲ್ಲದೆ ನಿರ್ವಹಣೆಗೆ ಯಾವ ಕಂಪನಿಯವರೂ ಆಸಕ್ತಿ ತೋರಲಿಲ್ಲ. ಈ ನಡುವೆ ಐದು ಇ–ಶೌಚಾಲಯಗಳನ್ನು ಮಾತ್ರ ಪಾಲಿಕೆ ನಿರ್ವಹಣೆ ಮಾಡಲು ನಿರ್ಧರಿಸಲಾಗಿತ್ತಾದರೂ ಅದೂ ಸಾಧ್ಯವಾಗಲಿಲ್ಲ. ಪರಿಣಾಮ ಎಲ್ಲಾ ಶೌಚಾಲಯಗಳು ಅನುಪಯುಕ್ತವಾಗಿ ಹಾಳಾಗಿವೆ. ಈಗಾಗಲೇ 10 ಇ–ಶೌಚಾಲಯಗಳು ಸೀವೇಜ್ ಫಾರಂ ಕಸದ ರಾಶಿ ಸೇರಿದ್ದು, ಅವೂ ಸೇರಿದಂತೆ ಎಲ್ಲಾ ಇ–ಶೌಚಾಲಯಗಳನ್ನೂ ಗುಜರಿಗೆ ಹಾಕಲು ನಿರ್ಧರಿಸಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

**ಅಕ್ರಮ ಆರೋಪ:** ಸರ್ಕಾರದ ಕಾಮಗಾರಿ ಗುತ್ತಿಗೆಯಲ್ಲಿ ಕಮೀಷನ್ ದಂಧೆ ಆರೋಪ ಸದ್ದು ಮಾಡುತ್ತಿರುವ ಈ ಸಂದರ್ಭದಲ್ಲಿ ಮೈಸೂರಿನ ಇ–ಶೌಚಾಲಯದಲ್ಲೂ ಗೋಲ್‌ಮಾಲ್ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಇ–ಶೌಚಾಲಯಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಕೋರಿ ಮಾಹಿತಿ ಹಕ್ಕು ಅಧಿನಿಯಮದ ಪ್ರಕಾರ ಅರ್ಜಿ ಸಲ್ಲಿಸಿದರೂ ಸಂಪೂರ್ಣ ಮಾಹಿತಿ ಮತ್ತು ದಾಖಲೆ ನೀಡಿಲ್ಲ. ಅಲ್ಲದೆ ನೀಡಿರುವ ಮಾಹಿತಿಯೂ ಗೊಂದಲಮಯವಾಗಿದೆ. ಈ ಮೂಲಕ ಅಕ್ರಮವನ್ನು ಮರೆಮಾಚುವ ಪ್ರಯತ್ನ ನಡೆಸಿರುವ ಅನುಮಾನ ಮೂಡಿದೆ. ಈ ಬಗ್ಗೆ ಪಾಲಿಕೆ ಆಯುಕ್ತರು ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಸ್ತುಕ್ರಮ ಕೈಗೊಂಡು ಮುಂದಾಗಬಹುದಾದ ಅಕ್ರಮಗಳನ್ನು ತಡೆಯುವಂತೆ ಸಾಮಾಜಿಕ ಕಾರ್ಯಕರ್ತ ಅರವಿಂದ ಶರ್ಮ ಆಗ್ರಹಿಸಿದ್ದಾರೆ. ನಗರದಲ್ಲಿ ಒಟ್ಟು 23 ಇ–ಶೌಚಾಲಯಗಳಿದ್ದು, ಇದಕ್ಕಾಗಿ 1.16 ಕೋಟಿ ರೂ. ವೆಚ್ಚ ಮಾಡಲಾಗಿದೆ. ಆದರೆ ನಿರ್ವಹಣೆಗೆ ಪಾಲಿಕೆ ಹಣ ಭರಿಸಿಲ್ಲ.




ಇದರಲ್ಲಿ ಪಿ.ಕುಬೇಂದ್ರನ್ 18 ಹಾಗೂ ಈರಂ ಸೈಂಟಿಫಿಕ್ ಸೆಲ್ಯೂಷನ್ ಪ್ರೈವೇಟ್ ಲಿ.ನವರು 5 ಇ–ಟಾಯ್ಲೆಟ್‌ಗಳನ್ನು ಸರಬರಾಜು ಮಾಡಿರುವುದಾಗಿ ಒಳಚರಂಡಿ ವಿಭಾಗದ ಕಾರ್ಯಪಾಲಕ ಅಭಿಯಂತರರು ಹಿಂಬರಹದಲ್ಲಿ ತಿಳಿಸಿದ್ದಾರೆ. ಪಿ.ಕುಬೇಂದ್ರನ್‌ಗೆ 1,20,14,496 ರೂ. ನಿಗದಿಯಾಗಿದ್ದರೂ 3,42,823 ರೂ.ಗಳನ್ನು ಹೆಚ್ಚುವರಿಯಾಗಿ ನೀಡಿರುವುದು ಮಾಹಿತಿಯಿಂದ ಸ್ಪಷ್ಟವಾಗಿದೆ. ಈರಂ ಸೈಂಟಿಫಿಕ್ ಸೆಲ್ಯೂಷನ್ ಪ್ರೈವೇಟ್ ಲಿ.ನವರು ಒಂದು ಇ–ಶೌಚಾಲಯಕ್ಕೆ 5,88,226 ರೂ. ನಿಗದಿ ಮಾಡಿದ್ದರೂ 6.29 ಲಕ್ಷದಿಂದ 7.64 ಲಕ್ಷ ರೂ. ಸೂಚಿಸಿರುವ ಪಿ.ಕುಬೇಂದ್ರನ್‌ರವರಿಂದ 18 ಇ–ಶೌಚಾಲಯಗಳನ್ನು ತರಿಸಿಕೊಳ್ಳಲಾಗಿದೆ. ಇ–ಶೌಚಾಲಯ ಸರಬರಾಜುದಾರರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರದ ದೃಢೀಕೃತ ಪ್ರತಿಗಳನ್ನೂ ನೀಡಿಲ್ಲ. ನಿರ್ವಹಣೆ ಬಗ್ಗೆಯೂ ಸ್ಪಷ್ಟ ಮಾಹಿತಿ ಒದಗಿಸಿಲ್ಲ. ಈ ಎಲ್ಲಾ ಕಾರಣಗಳಿಂದ ಭ್ರಷ್ಟಾಚಾರ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಈ ಬಗ್ಗೆ ತನಿಖೆ ನಡೆಸಬೇಕೆಂದು ಅರವಿಂದ ಶರ್ಮ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

## ಮೈಸೂರಿನಿಂದ ಮುಂಬೈಗೆ 'ಐರಾವತ ಮಲ್ಟಿ ಆಕ್ಸೆಲ್ ಕ್ಲಬ್ ಕ್ಲಾಸ್ ಹವಾನಿಯಂತ್ರಿತ' ಬಸ್ ವ್ಯವಸ್ಥೆ

ಮೈಸೂರು, ಏ.17– ವಾರದಲ್ಲಿ ಎರಡು ದಿನ ಮೈಸೂರಿನಿಂದ ಮುಂಬೈಗೆ 'ಐರಾವತ ಮಲ್ಟಿ ಆಕ್ಸೆಲ್ ಕ್ಲಬ್ ಕ್ಲಾಸ್ ಹವಾನಿಯಂತ್ರಿತ' ಐಷಾರಾಮಿ ಬಸ್ಸು ಸಂಚರಿಸಲಿವೆ.

ಮೈಸೂರಿನಿಂದ ಮುಂಬೈಗೆ ಪ್ರಯಾಣಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಐರಾವತ ಮಲ್ಟಿ ಆಕ್ಸೆಲ್ ಕ್ಲಬ್ ಕ್ಲಾಸ್ ಹವಾನಿಯಂತ್ರಿತ ಐಷಾರಾಮಿ ಸಾರಿಗೆ ವ್ಯವಸ್ಥೆ ಕಲ್ಪಿಸಿದ್ದು, ಶುಕ್ರವಾರ ಮತ್ತು ಶನಿವಾರ ಮಧ್ಯಾಹ್ನ 1ಕ್ಕೆ ಮೈಸೂರಿನಿಂದ ಮುಂಬೈಗೆ ಹೊರಡಲಿದ್ದು, ಮಾರನೇ ದಿನ ಮುಂಬೈನಿಂದ ಹಿಂದಿರುಗಲಿದೆ. ಪ್ರಯಾಣ ದರವನ್ನು 1,520 ರೂ. ನಿಗದಿ ಪಡಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮೈಸೂರು ವಿಭಾಗ ತಿಳಿಸಿದೆ.

ಮೈಸೂರಿನಿಂದ ನೇರವಾಗಿ ಕೆ.ಆರ್.ನಗರ, ಶ್ರವಣ ಬೆಳಗೊಳ, ಚನ್ನರಾಯಪಟ್ಟಣ, ಹಾಸನ, ಬೇಲೂರು, ಚಿಕ್ಕಮಗಳೂರು, ಕಡೂರು, ಶಿವಮೊಗ್ಗ, ಹರಿಹರ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ನಿಪ್ಪಾಣಿ, ಕೊಲ್ಲಾಪುರ, ಪುಣೆ ಮಾರ್ಗದ ಮುಖಾಂತರ ಮುಂಬೈಗೆ ತಲುಪಲಿದ್ದು, ಮಾರನೇ ದಿನ ಮಧ್ಯಾಹ್ನ 1ಕ್ಕೆ ಮತ್ತೆ ಅದೇ ಮಾರ್ಗವಾಗಿ ಮುಂಬೈನಿಂದ ಮೈಸೂರಿಗೆ ಹಿಂದಿರುಗಲಿದೆ ಈ ಸಾರಿಗೆ ವ್ಯವಸ್ಥೆಯನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಪ್ರಕಟಣೆ ಕೋರಿದೆ.

# ಸರ್ಕಾರಗಳು ಒಂದು ಧರ್ಮದ ಪರವಾಗಿ ಇರಬಾರದು

**ಇಫ್ತಾರ್ ಕೂಟದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆ**



ಮೈಸೂರು, ಏ.17(ಜಿಎ)– ಸಂವಿಧಾನದಡಿ ನಿರ್ಮಿತವಾದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಂದು ಧರ್ಮದ ಸರ್ಕಾರವಾಗ ಬಾರದು ಎಂದು ವಿರೋಧ ಪಕ್ಷದ ನಾಯಕ ಸಿದ್ದ ರಾಮಯ್ಯ ಅವರು ಪರೋಕ್ಷವಾಗಿ ಆಡಳಿತರೂಢ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರು–ಬೆಂಗಳೂರು ರಸ್ತೆಯ ಖಾಸಗಿ ಕನ್ವೆನ್ಷನ್ ಹಾಲ್‌ನಲ್ಲಿ ಭಾನುವಾರ ಮುಸ್ಲಿಂ ಬಾಂಧವರಿಗಾಗಿ ತಾವು ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ನಾನು ಹಿಂದೂವಾಗಿ ಹಿಂದೂ ಧರ್ಮದ ಆಚರಣೆಗಳನ್ನು ಮಾಡುತ್ತೇನೆ. ಮುಸ್ಲಿಂ ಧರ್ಮದವರು ಅವರ ಧಾರ್ಮಿಕ ಸಂಪ್ರದಾಯಗಳನ್ನು ಆಚರಣೆ ಮಾಡುತ್ತಾರೆ. ಹಿಂದೂಗಳು ಮುಸ್ಲಿಮರ ಸಂಪ್ರದಾಯಗಳಲ್ಲಿ ಪ್ರವೇಶ ಮಾಡುವುದು ತಪ್ಪು. ಸಂವಿಧಾನ ಅವರವರ ಧರ್ಮದ ಪಾಲನೆ ಮಾಡಲು ಸಂಪೂರ್ಣ ಅವಕಾಶ ನೀಡಿದೆ. ಎಲ್ಲಾ ಧರ್ಮ, ಜಾತಿಗಳನ್ನು ಸಮಾನವಾಗಿ ಗೌರವಿಸುವುದರೊಂದಿಗೆ ಪ್ರೀತಿಸಬೇಕು ಎಂದರು.

ರಾಷ್ಟ್ರಕವಿ ಕುವೆಂಪು ಅವರು ತಿಳಿಸಿದಂತೆ ರಾಜ್ಯ ಸರ್ವ ಜನಾಂಗದ ಶಾಂತಿಯ ತೋಟದಂತೆ ಶಾಂತಿಯಿಂದ ಇರಬೇಕೇ ಹೊರತು ಯಾರು ಅದನ್ನು ಕದಡಬಾರದು. ಒಂದು ತಾಯಿಯ ಮಕ್ಕಳಂತೆ ಪ್ರೀತಿ, ಸೌಹಾರ್ದತೆಯಿಂದ ಬಾಳುವ ವಾತಾವರಣ ಸೃಷ್ಟಿಸುವುದು ಸರ್ಕಾರದ ಜವಾಬ್ದಾರಿ. ಅದನ್ನು ಬಿಟ್ಟು ಸರ್ಕಾರ ಒಂದು ಧರ್ಮಕ್ಕೆ ಸೀಮಿತವಾಗಬಾರದು. ಸಮಾಜದಲ್ಲಿ ಹೆಚ್ಚುತ್ತಿರುವ ಅಶಾಂತಿ ಹಾಗೂ ಅಸಹಿಷ್ಣುತೆಗಳನ್ನು ನಿಯಂತ್ರಿಸುವ ಕೆಲಸವಾಗಬೇಕು ಎಂದರು.

ನಾವು ಅಧಿಕಾರ ಸಿಕ್ಕಿದಾಗಲೆಲ್ಲ ಎಲ್ಲರನ್ನೂ ಸಮಾನವಾಗಿ ಕಾಣುವ ಕೆಲಸ ಮಾಡಿದ್ದೇವೆ. ಮುಂದೆಯೂ ನಮಗೆ ಅಧಿಕಾರ ಸಿಕ್ಕಿದರೆ ಅದೇ ರೀತಿ ನೋಡಲಾಗುವುದು ಮತ್ತು ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುತ್ತೇವೆ ಎಂದು ಭರವಸೆ ನೀಡಿದರು.

ನಾವೆಲ್ಲಾ ಮೊದಲು ಭಾರತೀಯರು. ಅದರಂತೆ ಸಂವಿಧಾನದಲ್ಲಿ ತಿಳಿಸಿರುವ ಸಹಿಷ್ಣುತೆ ಹಾಗೂ ಸಹಬಾಳ್ವೆಯಿಂದ ಬಾಳಬೇಕು ಪರಧರ್ಮವನ್ನು ತುಳಿಯದೇ ಸಹಿಸಿಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ ಎಂದ ಅವರು ಸ್ವಾತಂತ್ರ್ಯಕ್ಕಾಗಿ ಎಲ್ಲ ಧರ್ಮದವರೂ ಹೋರಾಡಿದ್ದಾರೆ. ಹಾಗಾಗಿಯೇ ಎಲ್ಲರಿಗೂ ಸ್ವಾತಂತ್ರ್ಯ ಸಿಕ್ಕಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಂದು ಧರ್ಮದ ಸರ್ಕಾರವಾಗಲು ಸಂವಿಧಾನದಲ್ಲಿ ಅವಕಾಶ ಇಲ್ಲ. ಇನ್ನಾದರೂ ಎಲ್ಲರನ್ನೂ ಪ್ರೀತಿಸುವ, ಸಮಾನವಾಗಿ ಗೌರವಿಸುವ ಹಾಗೂ ಮನುಷ್ಯರಾಗಿ ಬಾಳುವ ಕೆಲಸವಾಗಬೇಕು ಎಂದು ಕರೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ ಅವರು, ಈಶ್ವರಪ್ಪ ವಿರುದ್ಧ ಭ್ರಷ್ಟಾಚಾರದ ಪ್ರಕರಣ ದಾಖಲಿಸಿ ಬಂಧಿಸಬೇಕು ಎಂದು ಒತ್ತಾಯಿಸಿದರು. ಮತ್ತು ಹುಬ್ಬಳ್ಳಿ ಗಲಭೆಯಲ್ಲಿ ನಿರಪರಾಧಿಗಳಿಗೆ ತೊಂದರೆ ಕೊಡಬಾರದು ಎಂದರು.

ಇದೇ ವೇಳೆ ಶಾಸಕ ತನ್ವೀರ್ ಸೇಠ್ ಮಾತನಾಡಿ, 1998ರಿಂದ ಸಿದ್ದರಾಮಯ್ಯನವರು ಇಫ್ತಾರ್ ಕೂಟವನ್ನು ಆಯೋಜಿಸುತ್ತಿದ್ದಾರೆ. ಕೊರೊನಾ ಹಿನ್ನೆಲೆ ಕಳೆದ ಎರಡು ವರ್ಷಗಳು ಈ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ. ಈ ವರ್ಷವೂ ಬೇಡ ಎಂದು ತಿಳಿಸಿದ ತಕ್ಷಣ ಅವರು ನಿರಂತರವಾಗಿ ನಡೆದು ಬಂದಿರುವ ಸಂಪ್ರದಾಯವನ್ನು ಬಿಡುವುದು ಬೇಡ ಎಂದು ತಿಳಿಸಿ ಈ ಬಾರಿ ಎಂದಿನಂತೆ ಅದ್ಧೂರಿಯಾಗಿ ಆಯೋಜಿಸಿದ್ದಾರೆ ಎಂದರು.

ಎಲ್ಲಾ ಧರ್ಮಗಳ ಪರವಾಗಿ ನಿಲ್ಲುವಂತೆ ಮುಸ್ಲಿಂ ಸಮುದಾಯದ ಪರವಾಗಿ ಗಟ್ಟಿಯಾಗಿ ನಿಂತಿದ್ದಾರೆ. ಈ ಹಿಂದೆ ಅವರು ಮುಖ್ಯಮಂತ್ರಿಯಾಗಿದ್ದ ವೇಳೆಯಲ್ಲಿ ಹಲವಾರು ಜನಪ್ರಿಯ ಯೋಜನೆ ಗಳನ್ನು ನೀಡಿದ್ದಾರೆ. ಅವುಗಳು ಇಂದಿಗೂ ಜನಪ್ರಿಯ ವಾಗಿವೆ. ಮುಂದಿನ ಬಾರಿ ಅವರು ಮತ್ತೆ ಮುಖ್ಯ ಮಂತ್ರಿಯಾಗಿ ಉತ್ತಮ ಆಡಳಿತವನ್ನು ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ, ಶಾಸಕರಾದ ಎಚ್.ಪಿ.ಮಂಜುನಾಥ್, ಡಾ.ಯತೀಂದ್ರ ಸಿದ್ದರಾಮಯ್ಯ, ಮತ್ತು ಜಿಲ್ಲಾ, ಗ್ರಾಮಾಂತರ ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರು ಭಾಗವಹಿಸಿದ್ದರು.

## ಜಿಎಸ್‌ಟಿಯಲ್ಲಿ ಶೇ.5ರ ಸ್ಲ್ಯಾಬ್ ತೆಗೆಯಲು ಚಿಂತನೆ

ನವದೆಹಲಿ, ಏ.17– ಹಲವು ರಾಜ್ಯಗಳ ಆದಾಯ ಏರುತ್ತಿದ್ದು ಜಿಎಸ್‌ಟಿ ವಿಷಯವಾಗಿ ಕೇಂದ್ರದಿಂದ ಪರಿಹಾರದ ಅವಲಂಬನೆ ಕಡಿಮೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದ್ದು ಜಿಎಸ್‌ಟಿ ಪರಿಷತ್ ತೆರಿಗೆ ದರದಲ್ಲಿ ಮಹತ್ವದ ಬದಲಾವಣೆಗಳಿಗೆ ಮುಂದಾಗಿದೆ.

ಮುಂದಿನ ತಿಂಗಳು ಜಿಎಸ್‌ಟಿ ಪರಿಷತ್ ಸಭೆ ನಡೆಯಲಿದ್ದು, ಶೇ.5ರ ತೆರಿಗೆ ದರವನ್ನು (ಸ್ಲ್ಯಾಬ್) ತೆಗೆದುಹಾಕುವ ಪ್ರಸ್ತಾವನೆಯನ್ನು ಪರಿಗಣಿಸಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಹೆಚ್ಚು ಮಂದಿ ಬಳಸುವ (mass consumption) ಸರಕುಗಳ ತೆರಿಗೆ ವಿಭಾಗವನ್ನು ಶೇ.3ಕ್ಕೆ ವರ್ಗಾವಣೆ ಮಾಡಿ, ಉಳಿದ ಸರಕುಗಳ ತೆರಿಗೆ ದರವನ್ನು ಶೇ.8ರ ವಿಭಾಗಕ್ಕೆ ಸೇರಿಸುವ ಪ್ರಸ್ತಾವನೆ ಇದೆ. ಈಗಿರುವ ಜಿಎಸ್‌ಟಿ ಸ್ವರೂಪ ನಾಲ್ಕು ತೆರಿಗೆ ವಿಭಾಗಗಳಲ್ಲಿದ್ದು, ಶೇ.5, 12, 18, 28 ರ ವಿಭಾಗಗಳಿವೆ. ಉಳಿದಂತೆ ಚಿನ್ನ ಹಾಗೂ ಚಿನ್ನಾಭರಣಕ್ಕೆ ಶೇ.3ರಷ್ಟು ತೆರಿಗೆ ವಿಧಿಸಲಾಗುತ್ತಿದೆ.

ಬ್ರಾಂಡೆಡ್ ಅಲ್ಲದ, ಪ್ಯಾಕ್ ಮಾಡದ ಆಹಾರ ಪದಾರ್ಥಗಳಿಗೆ ಯಾವುದೇ ತೆರಿಗೆ ವಿಧಿಸದೇ ಜಿಎಸ್‌ಟಿಯಿಂದ ಹೊರಗೆ ಇಡಲಾಗಿದೆ. ಮೂಲಗಳ ಪ್ರಕಾರ ಆದಾಯ ವೃದ್ಧಿಗಾಗಿ ಆಹಾರೇತರ ಸರಕುಗಳನ್ನು ಶೇ.3 ಕ್ಕೆ ಇಳಿಕೆ ಮಾಡುವ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು ಯೋಜಿಸಿದೆ. ಶೇ.5ರಷ್ಟಿದ್ದ ತೆರಿಗೆ ದರವನ್ನು ಶೇ.7 ಕ್ಕೆ ಅಥವಾ 8, 9ಕ್ಕೆ ಏರಿಕೆ ಮಾಡುವ ಪ್ರಸ್ತಾವನೆಯೂ ಇದೆ. ಶೇ.5 ರ ತೆರಿಗೆಯನ್ನು ಶೇ.1ರಷ್ಟು ಏರಿಕೆ ಮಾಡಿದರೂ ವಾರ್ಷಿಕವಾಗಿ ಇದರಿಂದ 50,000 ಕೋಟಿ ರೂ ಆದಾಯ ಹೆಚ್ಚಳಲಿದೆ.

ಮೈಸೂರು ಮಿತ್ರ ಸೋಮವಾರ 18 ಏಪ್ರಿಲ್ 2022

# ಅರ್ಥಪೂರ್ಣವಾಗಿ ತ್ರಿವಿಧ ದಾಸೋಹಿಯ ಜಯಂತಿ ಆಚರಣೆ

## ■ 30 ಮಂದಿಯಿಂದ ರಕ್ತದಾನ ■ ರಾಮಸಮುದ್ರದ ಬಸವ ಭವನದ ಮುಂಭಾಗದ ವೃತ್ತಕ್ಕೆ ಡಾ.ಶಿವಕುಮಾರ ಸ್ವಾಮೀಜಿ ಹೆಸರು ನಾಮಕರಣ




ಚಾಮರಾಜನಗರ, ಏ.17(ಎಸ್‌ಎಸ್)– ತುಮಕೂರಿನ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತಿಯನ್ನು ನಗರದ ರಾಮಸಮುದ್ರದಲ್ಲಿ ಭಾನುವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ರಾಮಸಮುದ್ರದ ಬಸ್ ನಿಲ್ದಾಣದ ಬಳಿ ಇರುವ ಬಸವ ಭವನದ ಸ್ಥಳದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಸುಮಾರು 30 ಜನರು ರಕ್ತದಾನ ಮಾಡಿದರು. ಇದೇ ವೇಳೆ ಬಸವ ಭವನದ ಬಳಿಯ ವೃತ್ತಕ್ಕೆ ಡಾ. ಶಿವಕುಮಾರ ಸ್ವಾಮೀಜಿ ವೃತ್ತ ಎಂದು ನಾಮಕರಣ ಮಾಡಲಾಯಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರಿ ಅರುಣಾದೇವಿ ಯಡಿಯೂರಪ್ಪ ಅವರು ಡಾ.ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ರಸ್ತೆಯ ನಾಮಫಲಕವನ್ನು ಅನಾವರಣ ಗೊಳಿಸಿದರು. ಜಯಂತಿ ಅಂಗವಾಗಿ ಮಧ್ಯಾಹ್ನ ಅನ್ನದಾನ ನಡೆಯಿತು. ನಂತರ ರಾಮಸಮುದ್ರದ ಪ್ರಮುಖ ಬೀದಿಗಳಲ್ಲಿ ಡಾ. ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ವಿವಿಧ ಜನಪದ ಕಲಾ ತಂಡಗಳು ಪಾಲ್ಗೊಳ್ಳುವ ಮೂಲಕ ಮೆರವಣಿಗೆಗೆ ಮೆರಗು ನೀಡಿದವು.

ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅರುಣಾದೇವಿ ಅವರು, ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತಿಯನ್ನು ರಕ್ತದಾನ ಶಿಬಿರ ಏರ್ಪಡಿಸಿ ಆಚರಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಸ್ವಾಮೀಜಿ ಅವರ ಸೇವಾ ಕಾರ್ಯಗಳನ್ನು ಇಡೀ ಜಗತ್ತೇ ಒಪ್ಪಿಕೊಂಡಿದೆ ಎಂದರು.

ರಾಮಸಮುದ್ರ ಶ್ರೀ ಗುರುಕಂಬಳೀಶ್ವರ ಮಠದ ಪೀಠಾಧ್ಯಕ್ಷ ಶ್ರೀಮಹಾದೇವಸ್ವಾಮಿ ಅವರ ಸಾನ್ನಿಧ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳು ನಡೆಯಿತು. ನಗರ ಸಭೆ ಸದಸ್ಯರಾದ ಆರ್.ಎಂ.ರಾಜಪ್ಪ ಮಹದೇವಯ್ಯ, ಸುರೇಶ್ ನಾಯ್ಕ ಮನೋಜ್ ಕುಮಾರ್, ಮಾಜಿ ಸದಸ್ಯೆ ಶೋಭಾ ಪುಟ್ಟಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲಪುರ ನಂದೀಶ್, ಮಹದೇವಸ್ವಾಮಿ, ಪುಟ್ಟಸ್ವಾಮಿ, ಶಿವಮೂರ್ತಿ, ಕೋಡಿಮೋಳೆ ರಾಜಶೇಖರ್, ನಾಗಣ್ಣ, ಗುರುಮಲ್ಲಪ್ಪ, ಆಲೂರು ಮಲ್ಲು, ಹೆಚ್.ಡಿ.ಪ್ರತಾಪ್, ಪಿ.ಎನ್.ದಯಾನಿಧಿ, ಪುಟ್ಟಣ್ಣ, ಆಲೂರು ಪ್ರದೀಪ್ ಹಾಗೂ ರಾಮಸಮುದ್ರ ಶ್ರೀಶಿವಕುಮಾರ ಸ್ವಾಮೀಜಿ ಅವರ ಸ್ನೇಹ ಬಳಗದ ಪದಾಧಿಕಾರಿಗಳು ಹಾಜರಿದ್ದರು.

# ಕಾರು ಹರಿದು 9 ಕುರಿ ಸಾವು

ಕೊಳ್ಳೇಗಾಲ, ಏ.17(ನಾಗೇಂದ್ರಸ್ವಾಮಿ)– ಕುರಿಗಳ ಮೇಲೆ ಕಾರು ಹರಿದ ಪರಿಣಾಮ ಸುಮಾರು 9 ಕುರಿಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ದೊಡ್ಡಿಂದು ವಾಡಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಗ್ರಾಮದ ಶಿವಣ್ಣ ಅವರಿಗೆ ಸೇರಿದ ಕುರಿಗಳು ಸಾವನ್ನಪ್ಪಿವೆ. ಇವರು ಎಂದಿನಂತೆ ಭಾನುವಾರವೂ ಕುರಿ ಮೇವಿಗಾಗಿ ಗ್ರಾಮದ ಮಹದೇವಮ್ಮ ಅವರ



ಮನೆಯ ಮುಂದೆ ಹೋಗುತ್ತಿದ್ದಾಗ ನಂಜನಗೂಡಿನಿಂದ ಚಿಕ್ಕಲ್ಲೂರು ಕಡೆಗೆ ಹೋಗುತ್ತಿದ್ದ ಟೊಯೋಟಾ ಕ್ವಾಲಿಸ್ ಕಾರು ಚಾಲಕನ ನಿಯಂತ್ರಣ ತಪ್ಪಿ ಕುರಿಗಳ ಮೇಲೆ ಹರಿದಿದೆ. ಪರಿಣಾಮ ಸ್ಥಳದಲ್ಲಿಯೇ 9 ಕುರಿ ಸಾವನ್ನಪ್ಪಿ, 6 ಕುರಿಗಳು ಅಸ್ವಸ್ಥಗೊಂಡಿದೆ.

ಸ್ಥಳದಲ್ಲಿದ್ದ ಕುರಿ ಮಾಲೀಕ ಹಾಗೂ ಈ ಘಟನೆ ಕಂಡ ಸ್ಥಳೀಯರು ಕಾರಿನ ಚಾಲಕ ಬಳಿ ಕುರಿ ಮಾಲೀಕನಿಗೆ ಉಂಟಾದ ನಷ್ಟವನ್ನು ಭರಿಸುವಂತೆ ತೀರ್ಮಾನ ಮಾಡಿದ್ದಾರೆ. ಇನ್ನೂಳಿದ ಕುರಿಗಳು ಯಾವುದೇ ಅಪಾಯ ಉಂಟಾಗಿದೆ ಪಾರಾಗಿವೆ.

ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

# ಗಾಳಿ ಸಹಿತ ಆಲಿಕಲ್ಲು ಮಳೆ: ಮನೆಗಳ ಮೇಲ್ಛಾವಣಿ ಹಾನಿ

ಬೇಗೂರು, ಏ.17(ಕಿರಣ್)– ಗುಡುಗು, ಮಿಂಚು ಜೋರು ಗಾಳಿಯೊಂದಿಗೆ ಭಾನುವಾರ ಸಂಜೆ ಸುರಿದ ಆಲಿಕಲ್ಲು ಮಳೆಯಿಂದ ಗುಂಡ್ಲು ಪೇಟೆ ತಾಲೂಕಿನ ಬೇಗೂರು ಗ್ರಾಮದ ಹಲವು ಮನೆಗಳ ಮೇಲ್ಛಾವಣಿ ಹಾರಿ ಹೋಗಿ ಅಪಾರ ಪ್ರಮಾಣದ ಹಾನಿ ಉಂಟಾಗಿದೆ.



ಗ್ರಾಮದ ವೆಂಕಟರಾಮು ಅವರ ಮನೆಯ ಮೇಲ್ಛಾವಣಿ ಗಾಳಿಯ ರಭಸಕ್ಕೆ ಹಾರಿ ಮನೆಯ ಪಕ್ಕದ ಆವರಣದಲ್ಲಿ ಬಿದ್ದಿದ್ದು, ಮನೆಯಲ್ಲಿದ್ದ ದವಸ- ಧಾನ್ಯ ಸೇರಿದಂತೆ ಮನೆಯ ಪೀಠೋಪಕರಣಗಳು ಮಳೆ ನೀರಿನಿಂದ ಹಾಳಾಗಿದ್ದು, ಸಾವಿರಾರು ರೂಪಾಯಿ ನಷ್ಟ ಸಂಭವಿಸಿದೆ. ಮರಿರಾಚಶೆಟ್ಟಿ ಅವರ ಮನೆಯ ಮೇಲ್ಛಾವಣಿ ಹಾರಿ ಹೋಗಿದ್ದು ಮನೆಯ ಆವರಣದಲ್ಲಿ ಕಟ್ಟಿಹಾಕಿದ್ದ ಹಸುವಿನ ಮೇಲೆ ಬಿದ್ದ ಪರಿಣಾಮ ಹಸು ಸಾವಿಗೀಡಾಗಿದೆ.

ಸೋಮಾರಾಧ್ಯ ಅವರ ಮನೆಯ ತಗಡಿನ ಶೀಟ್‌ಗಳು ಹಾರಿಹೋಗಿ ಮನೆಯ ಮುಂಭಾಗವಿದ್ದ ವಿದ್ಯುತ್ ಲೈನ್‌ಗೆ ತಾಗಿದ ಪರಿಣಾಮ ಬೇಗೂರು ಗ್ರಾಮದ ವಿದ್ಯುತ್ ಸಂಪರ್ಕ ಗಂಟೆಗೂ ಹೆಚ್ಚು ಕಾಲ ಕಡಿತಗೊಂಡಿತ್ತು. ಕೂಡಲೇ ಚೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ತೆರವುಗೊಳಿಸಿದ ನಂತರ ವಿದ್ಯುತ್ ಪೂರೈಸಲಾಯಿತು.

ಆರ್ಯನ್ ಆಟೋಪಾರ್ಟ್ಸ್‌ನ ಹಿಂಭಾಗದ ಮನೆಯ ಮೇಲ್ಛಾವಣಿಯೂ ಸಹ ಗಾಳಿ ಮಳೆಗೆ ಹಾರಿಹೋಗಿದ್ದು, ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಒಟ್ಟಾರೆ ಗ್ರಾಮದಲ್ಲಿ ಭಾನುವಾರ ಸಂಜೆ ಸುರಿದ ಮಳೆ ಸಾಕಷ್ಟು ಅವಾಂತರ ಸೃಷ್ಟಿಸಿದೆ.

# ಹನೂರು: ನೇತ್ರ ತಪಾಸಣಾ ಶಿಬಿರ



ಹನೂರು, ಏ.17(ಸೋಮು)– ತಾಲೂಕಿನ ಮಾರ್ಟಳ್ಳಿ ಗ್ರಾಮದ ಸೆಂಟ್ ಮೇರಿಸ್ ಶಾಲೆಯಲ್ಲಿ ಭಾನುವಾರ ಭಾರತೀಯ ಜನತಾ ಪಾರ್ಟಿ ಓಬಿಸಿ ಮೋರ್ಚಾ ವತಿಯಿಂದ ಹಾಗೂ ಶಂಕರ ಕಣ್ಣಿನ ಆಸ್ಪತ್ರೆ ಸಹಾಯದೊಂದಿಗೆ ಋಣಸಂದಾಯ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಹೂಗ್ಯಂ, ದಿನ್ನಳ್ಳಿ, ನಾಲ್‌ರೋಡ್, ರಾಮಾಪುರ, ಸುಳ್ವಾಡಿ, ವಡಕೆಹಳ್ಳ ಸೇರಿದಂತೆ ಈ ಭಾಗದ 50ಕ್ಕೂ ಹೆಚ್ಚು ಜನರು ತಪಾಸಣೆಗೆ ಒಳಗಾದರು. ಇದರಲ್ಲಿ ತೀವ್ರ ದೃಷ್ಟಿ ದೋಷವುಳ್ಳ 22 ಜನರನ್ನು ಶಸ್ತ್ರ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದೊಯ್ಯಲಾಯಿತು.

ಈ ಸಂದರ್ಭದಲ್ಲಿ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ ವೈದ್ಯರು, ಸಿಬ್ಬಂದಿಗಳು, ಮ.ಬೆಟ್ಟ ಮಂಡಲದ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಮೀನಾ, ಕಾರ್ಯದರ್ಶಿ ಮಂಜುಳಾ, ಮುಖಂಡರಾದ ಸಮನ್ಸ್, ಕುಮಾರ್, ಹೊಂಡರಬಾಳು ರಾಜು, ಜಾನ್, ದಾಸ್, ಮರಿಯಣ್ಣನ್, ರಾಜಮಣಿ, ಎಡ್ವರ್ಡ್, ಮಾಣಿಕ್ಯ, ಗೋವಿಂದನ್, ದೇವರಾಜು, ಪಳನಿ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಎಪಿಎಂಸಿ ಚುನಾವಣೆ: ಗುಂಡ್ಲುಪೇಟೆಯಲ್ಲಿ ಶೇ.37ರಷ್ಟು ಮತದಾನ

ಗುಂಡ್ಲುಪೇಟೆ, ಏ.17(ಸೋಮ್.ಜಿ)– ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಶೇ. 37ರಷ್ಟು ಮತದಾನವಾಗಿದ್ದು, ತಾಲೂಕಿನ ಎಲ್ಲಾ 64 ಮತಗಟ್ಟೆಗಳಲ್ಲಿಯೂ ಶಾಂತಿಯುತವಾಗಿ ಮತದಾನ ನಡೆಯಿತು.

ಸಮಿತಿಯ 12 ಸ್ಥಾನಗಳಿಗೆ ಬಿಜೆಪಿ ಹಾಗೂ ಕಾಂಗ್ರೆಸ್‌ನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಹಿಂದಿನಿಂದಲೂ ಅಧಿಕಾರ ಹಿಡಿಯುತ್ತಿದ್ದ ಕಾಂಗ್ರೆಸ್ ತನ್ನ ಅಸ್ತಿತ್ವಕ್ಕಾಗಿ ಯುವ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ನೇತೃತ್ವದಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಬಿರುಸಿನ ಪ್ರಚಾರ ಮಾಡಿದ್ದರು. ಹಾಗೆಯೇ ಈ ಬಾರಿ ಎಪಿಎಂಸಿ ಬೋರ್ಡ್ ವಶಕ್ಕೆ ಪಡೆಯಲು ಶಾಸಕ ಸಿ.ಎಸ್. ನಿರಂಜನಕುಮಾರ್ ನೇತೃತ್ವದಲ್ಲಿ ಬಿಜೆಪಿಯ ಮುಖಂಡರು ಶತಾಯ ಗತಾಯ ಶ್ರಮಿಸಿದ್ದರು. ತಾವು ಈ ಬಾರಿ ಗದ್ದುಗೆ ಹಿಡಿಯಲೇ ಬೇಕು ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಎರಡು ಪಕ್ಷಗಳ ಮುಖಂಡರು ಹಠಕ್ಕೆ ಬಿದ್ದು ಬೆವರು ಹರಿಸಿದ್ದರೂ ಮತದಾರ ಮಾತ್ರ ನೀರಸ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾನೆ. ಏ. 20ರಂದು ಬುಧವಾರ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟವಾಗಲಿದೆ. ಈ ಬಾರಿ ಯಾರು ಗದ್ದುಗೆ ಹಿಡಿಯಲಿದ್ದಾರೆ ಎಂಬುದು ತಾಲೂಕಿನ ಜನತೆಯ ಕುತೂಹಲಕ್ಕೆ ಕಾರಣವಾಗಿದೆ.

2017ರಲ್ಲಿ ನಡೆದ ಚುನಾವಣೆಯಲ್ಲಿಯೂ ಕಡಿಮೆ ಮತದಾನವಾಗಿದ್ದು, ಕಾಂಗ್ರೆಸ್ ಗದ್ದುಗೆ ಹಿಡಿದಿತ್ತು. ಈ ಬಾರಿಯೂ ಕಡಿಮೆ ಮತದಾನವಾಗಿರುವುದು ಕಾಂಗ್ರೆಸ್‌ಗೆ ಅನುಕೂಲವಾಗಿದ್ದು ವರ್ತಕರ ಕ್ಷೇತ್ರ ಸೇರಿದಂತೆ ಕನಿಷ್ಠ 10 ಸ್ಥಾನಗಳನ್ನು ಗೆಲ್ಲಲಿದ್ದೇವೆ ಎಂದು ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಪ್ರತಿಕ್ರಿಯೆ ನೀಡಿದ್ದಾರೆ.



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರಿಗೆ ಹೆಚ್ಚಿನ ಯೋಜನೆಗಳ ಮೂಲಕ ನೆರವಾಗಿರುವುದು ಮತ್ತು ತಾವು ಶಾಸಕರಾದ ನಂತರ ತಾಲೂಕಿನ ಎಲ್ಲಾ ಕೆರೆಗಳಿಗೂ ನದಿ ಮೂಲದಿಂದ ನೀರು ತುಂಬಿಸುತ್ತಿರುವುದರಿಂದ ಜನತೆ ಬಿಜೆಪಿ ಪರ ಒಲವು ಹೊಂದಿದ್ದಾರೆ. ಇತ್ತೀಚೆಗೆ ಬಿದ್ದ ಮಳೆಯಿಂದ ಹೆಚ್ಚಿನ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದರಿಂದ ಮತದಾನ ಪ್ರಮಾಣ ಕಡಿಮೆಯಾಗಿದ್ದರೂ ಈ ಬಾರಿ ನಮ್ಮ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿತರಾಗಲಿದ್ದಾರೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

# ರುಕ್ಮಿಣಮ್ಮ ನಿಧನ



ಗುಂಡ್ಲುಪೇಟೆ, ಏ.17– ಪಟ್ಟಣದ ನಿವಾಸಿ ರುಕ್ಮಿಣಮ್ಮ (79) ಶನಿವಾರ ನಿಧನರಾದರು. ಮೃತರು ಪಟ್ಟಣದ ಅಯ್ಯಪ್ಪಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ರವಿ ಜೋಯಿಸ್ ಸೇರಿದಂತೆ ಮೂವರು ಪುತ್ರರನ್ನು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿತು.

# ಡಾ.ನಾಗರಾಜು ನಿಧನ



ಚಾಮರಾಜನಗರ, ಏ.17– ನಗರದ ನಿವಾಸಿ ಹಾಗೂ ವೀರಶೈವ ಸಮಾಜದ ಮಾಜಿ ಅಧ್ಯಕ್ಷ ಡಾ.ನಾಗರಾಜು(73) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ನಂಜನಗೂಡು ಹೊರವರ್ತುಲ ರಸ್ತೆಯಲ್ಲಿರುವ (ಬೈಪಾಸ್ ರೋಡ್) ಬಂಜಾರಾ ಶಾಲೆಯ ಹತ್ತಿರದ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

# ಕೆ.ಎಸ್.ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ: ನಾಳೆ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರತಿಭಟನೆ




ಚಾಮರಾಜನಗರ, ಏ.17(ಎಸ್‌ಎಸ್)– ಗುತ್ತಿಗೆದಾರ ಸಂತೋಷ ಆತ್ಮಹತ್ಯೆಗೆ ಕಾರಣರಾದ ಕೆ.ಎಸ್.ಈಶ್ವರಪ್ಪ ಅವರನ್ನು ಬಂಧಿಸಬೇಕೆಂದು ಆಗ್ರಹಿಸಿ ನಗರದಲ್ಲಿ ಏ.19ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೊಂದಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಸೇರಿದಂತೆ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಬಿಜೆಪಿ ಅಂಗ ಸಂಸ್ಥೆಗಳು ಅಶಾಂತಿ ವಾತಾವರಣ ಸೃಷ್ಟಿ ಮಾಡುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಏ.19ರಂದು ಬೆಳಗ್ಗೆ 11 ಗಂಟೆಗೆ ಪ್ರವಾಸಿ ಮಂದಿರದಿಂದ ಪ್ರತಿಭಟನೆ ಆರಂಭವಾಗಲಿದೆ. ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಿಂದ ಹಳೇ ಖಾಸಗಿ ಬಸ್ ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ. ನಂತರ ಅದೇ ಸ್ಥಳದಲ್ಲಿ ಪ್ರತಿಭಟನಾ ಸಭೆ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಾಮುಲ್ ಅಧ್ಯಕ್ಷ ನಂಜುಂಡಪ್ರಸಾದ್, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನಾ) ಹಾಜರಿದ್ದರು.

# ಪಾಲಿಬೆಟ್ಟ ಪೈಸಾರಿಯಲ್ಲಿ ದಿಢೀರ್ ಗುಡಿಸಲು ಕಟ್ಟಿದ ಸಂತ್ರಸ್ತರು

ಸಿದ್ದಾಪುರ, ಏ.17–ಪಾಲಿಬೆಟ್ಟ ಗ್ರಾಮದಲ್ಲಿರುವ ಪೈಸಾರಿ ಜಾಗವೊಂದರಲ್ಲಿ 10ಕ್ಕೂ ಹೆಚ್ಚು ಕುಟುಂಬಗಳು ಡಿಢೀರ್ ಪ್ಲಾಸ್ಟಿಕ್ ಗುಡಿಸಲುಗಳನ್ನು ಕಟ್ಟಿ ವಾಸ ಮಾಡಲು ಮುಂದಾಗಿವೆ.

ಹಲವು ವರ್ಷಗಳಿಂದ ಸ್ವಂತ ಮನೆಯಿಲ್ಲದೆ ಬಾಡಿಗೆ ಮನೆಗಳಲ್ಲಿ ಸಂಕಷ್ಟದಲ್ಲಿ ವಾಸಿಸುತ್ತಿದ್ದ ಕುಟುಂಬಗಳು, ಹಲವು ಬಾರಿ ನಿವೇಶನಕ್ಕಾಗಿ ಮನವಿ ಸಲ್ಲಿಸಿದ್ದವು. ಆದರೆ ಇದುವರೆಗೂ ಪ್ರಯೋಜನವಾಗಿರಲಿಲ್ಲ. ಅಲ್ಲದೆ ಇರುವ ಪೈಸಾರಿ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದರೂ ಸಂಬಂಧಪಟ್ಟವರು ತೆರವುಗೊಳಿಸದ ಹಿನ್ನೆಲೆಯಲ್ಲಿ ಪೈಸಾರಿ ಜಾಗಗಳಲ್ಲಿ ವಾಸಿಸಲು ತಮಗೂ ಹಕ್ಕಿದೆ ಎಂದು ನಿವೇಶನ ರಹಿತರು ದಿಢೀರ್ ಗುಡಿಸಲನ್ನು ಹಾಕಿಕೊಂಡು ವಾಸಿಸಲು ಮುಂದಾಗಿದ್ದಾರೆ.



ಕೂಲಿ ಕೆಲಸ ಮಾಡಿ ಜೀವನ ನಡೆಸುತ್ತಿರುವ ಬಹುತೇಕ ಕಾರ್ಮಿಕರು ಸ್ವಂತ ಸೂರು ನಿವೇಶನ ಇಲ್ಲದೆ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿದ್ದರೂ ಇದುವರೆಗೆ ಬೇಡಿಕೆ ಈಡೇರಲಿಲ್ಲ. ಗ್ರಾಮದಲ್ಲಿ ಬಹುತೇಕ ಕಡೆಗಳಲ್ಲಿ ಪೈಸಾರಿ ಜಾಗ ಇದ್ದರೂ ಗುರುತಿಸುವ ಕೆಲಸಕ್ಕೆ ಅಧಿಕಾರಿಗಳು ಮುಂದಾಗುತ್ತಿಲ್ಲ ಎಂದು ಆರೋಪಿಸಿರುವ ಸಂತ್ರಸ್ತರು, ಶಾಶ್ವತವಾಗಿ ನಿವೇಶನ ಸಿಗುವವರೆಗೂ ತಾವು ಇಲ್ಲೇ ವಾಸ ಇರುವುದಾಗಿ ತಿಳಿಸಿದ್ದು, ನಮ್ಮನ್ನು ಒಕ್ಕಲೆಬ್ಬಿಸಿದರೆ ಆತ್ಮಹತ್ಯೆ ಮಾಡಿಕೊಳ್ಳುವ ಎಚ್ಚರಿಕೆ ನೀಡಿದರು. ವಿಷಯ ತಿಳಿದು ಸ್ಥಳಕ್ಕೆ ಕಂದಾಯ ಇಲಾಖೆ ಅನಿಲ್ ಕುಮಾರ್ ಭೇಟಿ ನೀಡಿ, ಗುಡಿಸಲು ಹಾಕದಂತೆ ಮನವೊಲಿಸಿದರು. ಈ ಸಂದರ್ಭ ನಿರಾಶ್ರಿತರಾದ ಅಬ್ದುಲ್ ರೌಫ್, ಶಕ್ತಿವೇಲ್, ರಾಧಾ, ವನಜ, ಸಂತೋಷ, ಜಲೀಲ್, ಸುನೀಲ್, ಶೈಲಾ, ಮೋಹನ, ಮಣಿಕಂಠ, ನರಸಿಂಹ, ನೌಫಲ್, ಫೈಸಲ್, ಹಂಸ, ಮಂಜು ವಸಂತಕುಮಾರ್, ಪುಷ್ಪಾ ಸೇರಿದಂತೆ ಮತ್ತಿತರರಿದ್ದರು.

# ಸುಂಕದಕಟ್ಟೆಯ ಪಂಪ್ ಕೆರೆ ಪುನಶ್ಚೇತನ

## ಶಾಸಕರ ಸಮ್ಮುಖದಲ್ಲಿ ವಿರಾಜಪೇಟೆ ಪಪಂಗೆ ಹಸ್ತಾಂತರ



ವಿರಾಜಪೇಟೆ,ಏ.17–ಮನುಷ್ಯನಿಗೆ ನೀರು ಮತ್ತು ಗಾಳಿ ಅತ್ಯವಶಕವಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಕೆರೆಗಳನ್ನು ಅಭಿವೃದ್ಧಿಗೊಳಿಸುತ್ತಿರುವುದು ಉತ್ತಮ ಕಾರ್ಯ ಎಂದು ಶಾಸಕ ಕೆ.ಜಿ.ಬೋಪಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 335ನೇ 'ನಮ್ಮೂರ ನಮ್ಮ ಕೆರೆ' ಕಾರ್ಯಕ್ರಮದಡಿ ಹೂಳೆತ್ತಿ ಪುನಶ್ಚೇತನ ಗೊಳಿಸಲಾದ ಸುಂಕದ ಕಟ್ಟೆಯಲ್ಲಿರುವ 'ಪಂಪ್ ಕೆರೆ ಹಸ್ತಾಂತರ ಕಾರ್ಯಕ್ರಮ'ದಲ್ಲಿ ನಾಮಫಲಕ ಅನಾವರಣ ಗೊಳಿಸಿದ ನಂತರ ನಡೆದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು ಕೆರೆ ಅಭಿವೃದ್ಧಿ ಕಾರ್ಯದ ಮೂಲಕ ಸರ್ಕಾರದೊಂದಿಗೆ ಕೈಜೋಡಿಸಿದ್ದಾರೆ. ಇಲ್ಲಿ ಅಭಿವೃದ್ಧಿಗೊಳಿಸಿರುವ ಕೆರೆಯ ಸುತ್ತ ಪಟ್ಟಣ ಪಂಚಾಯಿತಿ ತಂತಿ ಬೇಲಿ ನಿರ್ಮಾಣಮಾಡಬೇಕು. ಕೆರೆ ಒತ್ತಿನಲ್ಲಿರುವ ಜಾಗವನ್ನು ಯಾರೂ ಅತಿಕ್ರಮಣ ಮಾಡಬಾರದು. ಉಳಿದಿರುವ ಜಾಗದಲ್ಲಿ (ಪಾರ್ಕ್) ಬೃಂದಾವನ ನಿರ್ಮಿಸುವಂತೆ ಪಂಚಾಯಿತಿ ಮುಖ್ಯಾಧಿಕಾರಿಗೆ ಸೂಚಿಸಿದರು.

ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ವಸಂತ ಸಾಲ್ಯಾನ್ ಮಾತನಾಡಿ, ಕೆರೆ ಅಭಿವೃದ್ಧಿಗಾಗಿ ಸಂಸ್ಥೆಯಿಂದ 30 ಕೋಟಿ ರೂ.ಯೋಜನೆ ರೂಪಿಸಲಾಗಿದ್ದು, ಈ ವರ್ಷ ರಾಜ್ಯದಲ್ಲಿ 110 ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಪೂಜ್ಯ ಹೆಗ್ಗಡೆಯವರು ಕೆರೆ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡಿದ್ದಾರೆ ಎಂದರು.

ಪಂಚಾಯಿತಿ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ನಮ್ಮಿಂದ ಕೆರೆ ಕಟ್ಟಲು ಸಾಧ್ಯವಾಗದಿದ್ದರೂ ಹಿರಿಯರು ಮಾಡಿರುವಂತ ಕೆರೆಗಳನ್ನು ಉಳಿಸಿಕೊಂಡು ಹೋಗುವುದು ನಮ್ಮ ಕರ್ತವ್ಯ. ಪಟ್ಟಣ ವ್ಯಾಪ್ತಿಯಲ್ಲಿ 4 ಕೆರೆಗಳಿದ್ದು, ಎಲ್ಲಾ ಕೆರೆಗಳನ್ನು ಮುಂದಿನ ದಿನದಲ್ಲಿ ಅಭಿವೃದ್ಧಿಗೊಳಿಸುವುದಾಗಿ ತಿಳಿಸಿದರಲ್ಲದೆ. ಈಗ ಹೂಳೆತ್ತಿರುವ ಕೆರೆ ಪಕ್ಕದಲ್ಲಿ ಕಸಗಳನ್ನು ಹಾಕುವುದು ಕಂಡಲ್ಲಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ಪಂಚಾಯಿತಿ ಸದಸ್ಯ ಡಿ.ಪಿ.ರಾಜೇಶ್, ಯೋಜನೆಯ ಜಿಲ್ಲಾ ನಿರ್ದೇಶಕ ಡಾ.ಎ.ಯೋಗೇಶ್, ಜಿಪಂ ಮಾಜಿ ಸದಸ್ಯ ಶಶಿ ಸುಬ್ರಮಣಿ ಮಾತನಾಡಿದರು. ಪಪಂ ಅಧ್ಯಕ್ಷೆ ಸುಶ್ಮಿತಾ ಮಹೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಸ್ಥಾಯಿ ಸಮಿತಿ ಅಧ್ಯಕ್ಷೆ ಸುನಿತಾ ಜೂನಾ, ಸದಸ್ಯರಾದ ಮತೀನ್, ಮಹ್ಮದ್ ರಫಿ ಇತರರು ಉಪಸ್ಥಿತರಿದ್ದರು.

# ಶ್ರೀ ಮುತ್ತಪ್ಪ ದೇಗುಲದ ಪುನರ್ ನಿರ್ಮಾಣಕ್ಕೆ ಎ.ಎಸ್.ಪೊನ್ನಣ್ಣ ದೇಣಿಗೆ



ವಿರಾಜಪೇಟೆ,ಏ.17–ಗ್ರಾಮದ ಪ್ರಾಚೀನ ಶ್ರೀ ಮುತ್ತಪ್ಪ ದೇಗುಲದ ಪುನರ್ ನಿರ್ಮಾಣ ಕಾರ್ಯಕ್ಕೆ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್.ಪೊನ್ನಣ್ಣ ದೇಣಿಗೆ ನೀಡಿದರು.

ಸಿದ್ದಾಪುರ ಬಾಡಗ ಬಾಣಾಂಗಲಹುಂಡಿ ಗ್ರಾಮದಲ್ಲಿರುವ ಶ್ರೀ ಮುತ್ತಪ್ಪ ದೇವಾಲಯದ ಪುನರ್ ನಿರ್ಮಾಣ ಕಾರ್ಯವು ಭರದಿಂದ ಸಾಗಿದ್ದು, ದೇಗುಲದ ಪುನರ್ ನಿರ್ಮಾಣ ಕಾರ್ಯ ವೀಕ್ಷಣೆಗೆ ಎ.ಎಸ್.ಪೊನ್ನಣ್ಣ ಆಗಮಿಸಿದ್ದರು. ಈ ವೇಳೆ ದೇಗುಲದ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ವಿವಿಧ ಸಂಸ್ಕೃತಿ ಧರ್ಮ ಜಾತಿಗಳಿಂದ ಕೂಡಿದ ಐಕ್ಯ ಮತ ಹೊಂದಿರುವ ದೇಶವಾಗಿದೆ. ಆಯಾ ಧರ್ಮಗಳ ಆಚರಣೆಯು ವಿಶಿಷ್ಟ ಸಂಸ್ಕೃತಿಗಳ ಮೇಲೆ ನೆಲೆ ಕಂಡಿದೆ. ದೇಗುಲ, ಮಸೀದಿ–ಚರ್ಚ್‌ಗಳು ಆಚರಣೆಯ ಭಾಗವೇ ಆಗಿದೆ. ಗ್ರಾಮದ ನಿವಾಸಿಗಳಿಗೆ ದೇಗುಲ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ದೇಗುಲದ ಪುನರ್ ನಿರ್ಮಾಣ ಕಾರ್ಯಕ್ಕೆ ಧನ ಸಹಾಯ ನೀಡುವುದು ಪ್ರತಿಯೊಬ್ಬರ ಕರ್ತವ್ಯ ಎಂದರಲ್ಲದೆ, ಒಬ್ಬರನ್ನು ಮಾತ್ರ ಆಶ್ರಯಿಸದೇ ಸಂಘ–ಸಂಸ್ಥೆಗಳನ್ನು ಸಂಪರ್ಕಿಸುವಂತೆ ಗ್ರಾಮ ವಾಸಿಗಳಿಗೆ ಸಲಹೆ ನೀಡಿದರು.

ಮಾಲ್ದಾರೆ ವಲಯ ಕಾಂಗ್ರೆಸ್ ಅಧ್ಯಕ್ಷ ಸಜಿ ಥೋಮಸ್ ಮಾತನಾಡಿ, ಹುಂಡಿ ಗ್ರಾಮದಲ್ಲಿ ಪ್ರಾಚೀನ ಕಾಲದ ಶ್ರೀ ಮುತ್ತಪ್ಪ ದೇವಾಲಯವು ಶಿಥಿಲಗೊಂಡಿತ್ತು. ಈ ನಿಟ್ಟಿನಲ್ಲಿ ಗ್ರಾಮಸ್ಥರು ದೇಗುಲದ ಪುನರ್ ನಿರ್ಮಾಣಕ್ಕೆ ಮುಂದಾಗಿದ್ದು, ವಿರಳ ಜನ ಸಂಖ್ಯೆ ಹೊಂದಿರುವ ಗ್ರಾಮದಲ್ಲಿ ಜನರು ಕೂಲಿ ಮೇಲೆ ಅವಲಂಬಿತರಾಗಿದ್ದಾರೆ. ದೇಗುಲ ಅಭಿವೃದ್ಧಿಗೆ ದಾನಿಗಳು ನೆರವು ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಮುತ್ತಪ್ಪ ದೇವಾಲಯದ ಅಧ್ಯಕ್ಷ ಕರುಣಾಕರನ್, ಕಾರ್ಯದರ್ಶಿ ನಂದಾ, ಪ್ರಮುಖರಾದ ಧರ್ಮಜ ಉತ್ತಪ್ಪ, ಟಾಟು ಮೊಣ್ಣಪ್ಪ, ವೀರಾಜಪೇಟೆ ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ಪಿ.ತಿಮ್ಮಯ್ಯ, ಸಂದೀಪ್, ಪಿ.ವಿ.ಜಾನ್ಸನ್, ಚಿನ್ನಮ್ಮ, ಮಾಲ್ದಾರೆ ಗ್ರಾಪಂ ಸದಸ್ಯರು ಮತ್ತು ಗ್ರಾಮಸ್ಥರಿದ್ದರು.

# ಶ್ರೀ ಅಯ್ಯಪ್ಪ ಭಗವತಿ ದೇಗುಲ ವಾರ್ಷಿಕೋತ್ಸವ

ವಿರಾಜಪೇಟೆ, ಏ.17– ಸಮೀಪದ ಹೆಗ್ಗಳ ಗ್ರಾಮದಲ್ಲಿರುವ ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನದ ವಾರ್ಷಿಕ ಮಹೋತ್ಸವವು ಏ.15ರಿಂದ ಆರಂಭಗೊಂಡಿದ್ದು, ಏ.23ರಂದು ಪಟ್ಟಣಿ ಹಾಗೂ ಏ.24ರಂದು ದೇವರ ದೊಡ್ಡಹಬ್ಬ ನಡೆಯಲಿದೆ. ಏ.27ರಂದು ಶುದ್ಧ ಕಲಶ ನಡೆಯಲಿದ್ದು, ಉತ್ಸವದ ಎಲ್ಲಾ ದಿನಗಳು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಅಯ್ಯಪ್ಪ ಭಗವತಿ ದೇವಸ್ಥಾನ ಸಮಿತಿ ಅಧ್ಯಕ್ಷ ಅಮ್ಮಣ ಕುಟ್ಟಂಡ ಜಿ.ಬೋಪಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳ ಬೇಸಿಗೆ ಶಿಬಿರ

# ಮಕ್ಕಳಲ್ಲಿ ದೇಶ, ಪರಿಸರ ಪ್ರೇಮ ಬೆಳೆಬೇಕು: ಪಿ.ಜಿ.ಆರ್.ಸಿಂಧ್ಯಾ




ಮಡಿಕೇರಿ,ಏ.17–ಮಕ್ಕಳಲ್ಲಿ ದೇಶ ಮತ್ತು ಪರಿಸರ ಪ್ರೇಮವನ್ನು ಬೆಳೆಸುವ ಕಾರ್ಯವಾಗಬೇಕು ಎಂದು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಹೇಳಿದರು.

ನಾಪೋಕ್ಲುವಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ನಡೆದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಷ್ಟ್ರ ಪ್ರೇಮ, ಪ್ರಕೃತಿ ಹಾಗೂ ವನ್ಯಜೀವಿಗಳ ಸಂರಕ್ಷಣೆ ಕುರಿತು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮಕ್ಕಳಿಗೆ ಮಾರ್ಗದರ್ಶನ ನೀಡುವಲ್ಲಿ ಯಶಸ್ವಿಯಾಗಿದೆ. ಸತ್ಯ, ನಿಷ್ಠೆ, ಪ್ರಾಮಾಣಿಕತೆಗೆ ಹೆಸರಾಗಿರುವ ಸಂಸ್ಥೆಯ ಚಟುವಟಿಕೆಗಳಲ್ಲಿ ಶಿಕ್ಷಕರ ಪಾತ್ರ ಪ್ರಮುಖ ಎಂದರು.

ಮಕ್ಕಳು ಮಾನಸಿಕ ಹಾಗೂ ದೈಹಿಕವಾಗಿ ಸದೃಢರಾಗಿರಬೇಕು. ಕೊಡಗಿನ ಫೀ.ಮಾ. ಕೆ.ಎಂ.ಕಾರ್ಯಪ್ಪ ಅವರ ದಕ್ಷತೆ ಹಾಗೂ ಶಿಸ್ತನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದು ಸಿಂಧ್ಯಾ ಕಿವಿಮಾತು ಹೇಳಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಸಂಘಟನಾ ಆಯುಕ್ತ ಪ್ರಭಾಕರ್ ಭಟ್ ಮಾತನಾಡಿ, ಗ್ರಾಮೀಣ ಮಟ್ಟದಲ್ಲಿ ಬೇಸಿಗೆ ಶಿಬಿರ ಆಯೋಜಿಸಿ ಯಶಸ್ವಿಗೊಳಿಸಿರುವುದು ಶ್ಲಾಘನೀಯ. ರಾಜ್ಯದ ವಿವಿಧೆಡೆ ನಡೆದ ಶಿಬಿರಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿರುವುದು ಹೆಮ್ಮೆಯ ವಿಚಾರ. ಇನ್ನು ಮುಂದೆಯೂ ಇದೇ ರೀತಿ ಪೋಷಕರು ಹಾಗೂ ಶಿಕ್ಷಕರ ಸಹಕಾರ ಅಗತ್ಯ ಎಂದರು.

ಸರ್ವಧರ್ಮ ಪ್ರಾರ್ಥನೆಯಲ್ಲಿ ಹಿಂದೂ ಧರ್ಮ ಪ್ರಮುಖ ಚಿನಾ.ಸೋಮೇಶ್, ನಾಪೋಕ್ಲು ಟೌನ್ ಜಮಾಯತ್ ಖತೀಬ ಮೊಹಮ್ಮದ್ ಅಶ್ರಫ್ ಅಹ್ಸನಿ ಕಾಮಿಲಿ ಸಖಾಫಿ ಹಾಗೂ ಸಂತ ಮರಿಯಮ್ಮ ದೇವಾಲಯದ ಧರ್ಮಗುರು ಪ್ರಕಾಶ್ ಪಾಲ್ಗೊಂಡಿದ್ದರು.

ಕರ್ನಾಟಕ ಪಬ್ಲಿಕ್ ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಕೆ.ಎ.ಹ್ಯಾರೀಸ್, ಸಿವಿಲ್ ಕಾಮಗಾರಿ ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ಜಿನ್ನು ನಾಣಯ್ಯ, ಶೈಕ್ಷಣಿಕ ಗುಣಮಟ್ಟ ಖಾತ್ರಿ ಸಮಿತಿ ಅಧ್ಯಕ್ಷ ಎನ್.ಎಸ್.ಉದಯ ಶಂಕರ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೊಂಡೀರ ನಾಣಯ್ಯ, ನಾಪೋಕ್ಲು ಟೌನ್ ಜಮಾತ್ ಅಧ್ಯಕ್ಷ ಪಿ.ಎಂ.ಸಲೀಂ ಹ್ಯಾರೀಸ್, ಕೆಪಿಎಸ್ ಶಾಲೆಯ ಪ್ರಾಂಶುಪಾಲೆ ಡಾ. ಅವನಿಜ ಸೋಮಯ್ಯ, ಸ್ಕೌಟ್ಸ್ ನಾಯಕ ಕೆ.ಯು.ರಂಜಿತ್, ಸ್ಕೌಟ್ಸ್ ಸಹನಾಯಕ ಎನ್.ಸಿ.ದೇವಾನಂದ, ಗೈಡ್ಸ್ ನಾಯಕಿ ಮೈಥಿಲಿ ರಾವ್ ಉಪಸ್ಥಿತರಿದ್ದರು.

### ಪ್ರಸ್ತುತ ಪರಿಸ್ಥಿತಿಗೆ ದ್ವೇಷ ರಾಜಕಾರಣ ಕಾರಣ

ಮಡಿಕೇರಿ,ಏ.17–ಪ್ರಸ್ತುತ ಪರಿಸ್ಥಿತಿ ಹದಗೆಡಲು ದ್ವೇಷ ರಾಜಕಾರಣ ಪ್ರಮುಖ ಕಾರಣವೆಂದು ಅಭಿಪ್ರಾಯಪಟ್ಟಿರುವ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ, ಯಾವುದೇ ರಾಜಕೀಯ ಪಕ್ಷಗಳು ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವ ಪ್ರಯತ್ನ ಮಾಡಬಾರದು ಎಂದು ಸಲಹೆ ನೀಡಿದರು.

ನಾಪೋಕ್ಲುವಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆ ಇಂದು ಜನಪರ ಚರ್ಚೆಯ ಮನೆಯಾಗಿ ಉಳಿದುಕೊಂಡಿಲ್ಲ. ವೈಯುಕ್ತಿಕ ನಿಂದನೆ, ಆಪಾದನೆ, ದ್ವೇಷ, ಅಸೂಯೆ ತುಂಬಿ ವಾತಾವರಣ ಕೆಟ್ಟಿದೆ. ಇದನ್ನು ಸರಿಪಡಿಸಲು ಸೂಕ್ತ ಕ್ರಮದ ಅಗತ್ಯವಿದೆ. ಪರಿಸ್ಥಿತಿ ಸುಧಾರಣೆಗೆ ರಾಜಕೀಯ ಪಕ್ಷಗಳು ಒಮ್ಮತದಿಂದ ಪ್ರಯತ್ನಿಸಬೇಕು. ವಿದ್ಯಾರ್ಥಿಗಳಲ್ಲಿ ಪಕ್ಷಾತೀತ ಮತ್ತು ಜಾತ್ಯತೀತ ಮನೋಭಾವ ಬೆಳೆಸುವ ಪ್ರಯತ್ನಗಳಾಗಬೇಕು. ಹಾಗೇ ಆದಾಗ ಮಾತ್ರ ಮಕ್ಕಳ ಭವಿಷ್ಯ ಉತ್ತಮವಾಗಲು ಸಾಧ್ಯ ಎಂದರು. ನೆಮ್ಮದಿಯ ಬದುಕಿಗಾಗಿ ಪ್ರಕೃತಿಯ ಆಶೀರ್ವಾದ ಬೇಕು. ಅದು ಕೊಡಗಿನ ಜನರಿಗೆ ಲಭಿಸಿದೆ. ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಚುರುಕುಗೊಳ್ಳಬೇಕಿದೆ ಮತ್ತು ಯುವ ಸಮೂಹಕ್ಕೆ ಉದ್ಯೋಗ ಸೃಷ್ಟಿಯಾಗಬೇಕಿದೆ ಎಂದು ಸಿಂಧ್ಯಾ ಹೇಳಿದರು.

ಮೈಸೂರು ಮಿತ್ರ ಸೋಮವಾರ 18 ಏಪ್ರಿಲ್ 2022

## ತನ್ವೀರ್ ಸೇಠ್ ಆಪ್ತ ಅಬ್ದುಲ್ ಖಾದರ್ ಶಾಹಿದ್ ಜೆಡಿಎಸ್ ಸೇರ್ಪಡೆ




ಮೈಸೂರು,ಏ.17–ಮೈಸೂರಿನ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರಾಗಿದ್ದು, ಪಕ್ಷದಿಂದ ಉಚ್ಚಾಟನೆಗೊಂಡಿದ್ದ ಶಾಸಕ ತನ್ವೀರ್ ಸೇಠ್ ಆಪ್ತ ಅಬ್ದುಲ್ ಖಾದರ್ ಶಾಹಿದ್ ಅವರು ಇಂದು ಜೆಡಿಎಸ್‌ಗೆ ಸೇರ್ಪಡೆಯಾದರು.

ಬೆಂಗಳೂರಿನ ಜೆಡಿಎಸ್ ಕಚೇರಿ ಜೆಪಿ ಭವನದಲ್ಲಿ ನಡೆದ ಸಿ.ಎಂ.ಇಬ್ರಾಹಿಂ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಸಮಾರಂಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ಅಬ್ದುಲ್ ಖಾದರ್ ಶಾಹಿದ್ ಅವರಿಗೆ ಶಾಲು ಹೊದಿಸುವ ಮೂಲಕ ಅವರನ್ನು ಸಿ.ಎಂ.ಇಬ್ರಾಹಿಂ ಪಕ್ಷಕ್ಕೆ ಬರಮಾಡಿಕೊಂಡರು. ವಿಧಾನಪರಿಷತ್ ಸದಸ್ಯರಾಗಿದ್ದ ಸಿ.ಎಂ.ಇಬ್ರಾಹಿಂ ಕೆಲ ತಿಂಗಳ ಹಿಂದೆ ಶಾಹಿದ್ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ಆಗ ಕಾಂಗ್ರೆಸ್‌ನಲ್ಲೇ ಇದ್ದ ಇಬ್ರಾಹಿಂ ಅವರಿಗೆ ಸ್ವಾಗತ ಕೋರಿದ್ದಾರೆ ಎಂಬ ಆರೋಪದ ಮೇರೆಗೆ ಶಾಹಿದ್ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟಿಸಲಾಗಿತ್ತು. ಇದೀಗ ಇಬ್ರಾಹಿಂ ನೇತೃತ್ವದಲ್ಲೇ ಶಾಹಿದ್ ಜೆಡಿಎಸ್ ಸೇರಿದ್ದಾರೆ.

ಒಂದನೇ ಪುಟದಿಂದ

## ಹುಬ್ಬಳ್ಳಿ ಉದ್ವಿಗ್ನ



ಭಯದ ವಾತಾವರಣದಿಂದಾಗಿ ನಗರದಲ್ಲಿ ಯಾವುದೇ ಅಂಗಡಿ–ಮುಂಗಟ್ಟುಗಳು ತೆರೆಯದೇ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿದೆ.

**ವಿವರ:** ಹುಬ್ಬಳ್ಳಿಯ ಆನಂದ ನಗರ ನಿವಾಸಿ ಅಭಿಷೇಕ್ ಹಿರೇಮಠ ಎಂಬಾತ ತನ್ನ ವಾಟ್ಸಾಪ್‌ನ ಸ್ಟೇಟಸ್‌ನಲ್ಲಿ ಪ್ರಚೋದನಾಕಾರಿ ಪೋಸ್ಟ್ ಮಾಡಿದ್ದ. ಈ ವಿಚಾರ ಶನಿವಾರ ವೈರಲ್ ಆಗುತ್ತಿದ್ದಂತೆಯೇ ಒಂದು ಸಮುದಾಯದ ಮುಖಂಡರು ಪೊಲೀಸ್ ಠಾಣೆಗೆ ಆಗಮಿಸಿ ಆರೋಪಿಯನ್ನು ಬಂಧಿಸುವಂತೆ ಆಗ್ರಹಿಸಿದ್ದರು. ಪೊಲೀಸರು ಆರೋಪಿಯನ್ನು ಬಂಧಿಸಿ ಕರೆತರುವಷ್ಟರಲ್ಲಿ ಠಾಣೆಯ ಮುಂದೆ ಸಾವಿರಾರು ಮಂದಿ ಜಮಾಯಿಸಿ ಆತನನ್ನು ತಮ್ಮ ವಶಕ್ಕೆ ನೀಡುವಂತೆ ಪ್ರತಿಭಟಿಸಲಾರಂಭಿಸಿದರು. ಹಠಾತ್ತನೆ ಉದ್ರಿಕ್ತ ಗುಂಪು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಲಾರಂಭಿಸಿತು. ಠಾಣೆ ಮುಂದೆ ನಿಲ್ಲಿಸಿದ್ದ ಜೀಪ್ ಅನ್ನು ಮೊಗುಚಿ ಹಾಕಿತು.

ಕಲ್ಲು ತೂರಾಟದಲ್ಲಿ ಹುಬ್ಬಳ್ಳಿ ಪೂರ್ವ ಸಂಚಾರಿ ಠಾಣೆ ಇನ್ಸ್‌ಪೆಕ್ಟರ್ ಕಾಡದೇವರ ಮಠ ಅವರ ತಲೆಗೆ ಗಂಭೀರವಾಗಿ ಗಾಯವಾಯಿತು. ಅಲ್ಲದೇ ಅವರೂ ಸೇರಿದಂತೆ 12 ಪೊಲೀಸರು ಗಾಯಗೊಂಡಿದ್ದಾರೆ. ಪರಿಸ್ಥಿತಿ ತಹಬದಿಗೆ ತರಲು ಪೊಲೀಸರು ಮೊದಲಿಗೆ ಲಾಠಿ ಚಾರ್ಜ್ ಮಾಡಿದರು. ಆಗಲೂ ಉದ್ರಿಕ್ತ ಗುಂಪು ಕಲ್ಲು ತೂರಾಟ ಮಾಡುತ್ತಲೇ ಇದ್ದುದರಿಂದ ಮೊದಲಿಗೆ ಅಶ್ರುವಾಯು ಸಿಡಿಸಿ ನಂತರ ಗಾಳಿಯಲ್ಲಿ ಗುಂಡು ಹಾರಿಸಿದರು. ಅಲ್ಲಿಂದ ಚದುರಿದ ಒಂದು ಗುಂಪು ಆಸ್ಪತ್ರೆಯೊಂದಕ್ಕೆ ನುಗ್ಗಿ ದಾಂಧಲೆ ನಡೆಸಿದರೆ, ಮತ್ತೊಂದು ಗುಂಪು ಆಂಜನೇಯ ದೇವಸ್ಥಾನದ ಕಿಟಕಿ ಗಾಜುಗಳನ್ನು ಪುಡಿ ಪುಡಿ ಮಾಡಿತು. ರಸ್ತೆಯಲ್ಲಿ ನಿಂತಿದ್ದ ವಾಹನಗಳ ಮೇಲೆ ಕೂಡ ಉದ್ರಿಕ್ತ ಗುಂಪು ಕಲ್ಲು ತೂರಾಟ ನಡೆಸಿದ್ದಲ್ಲದೇ, ಆ ವೇಳೆ ಆ ಮಾರ್ಗವಾಗಿ ಬಂದ ಬಸ್ಸಿನ ಮೇಲೂ ದಾಳಿ ನಡೆಸಿತು.

ರಾತ್ರಿ 1 ಗಂಟೆಯವರೆಗೂ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಹಿಂಭಾಗದ ಪ್ರದೇಶದಲ್ಲಿ ಉದ್ರಿಕ್ತರು ಕಲ್ಲು ತೂರಾಟ ನಡೆಸಿದರು. ಹೆಚ್ಚಿನ ಪೊಲೀಸ್ ಪಡೆ ಆಗಮಿಸುವಷ್ಟರಲ್ಲಿ ಹಲವಾರು ವಾಹನಗಳು ಕಲ್ಲು ತೂರಾಟಕ್ಕೆ ಒಳಗಾಯಿತು.

ಇಂದು ಮುಂಜಾನೆ ಸ್ಥಳಕ್ಕಾಗಮಿಸಿದ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ಲಾಬೂರಾಂ ಅವರು, ಏ.20ರ ತನಕ ನಿಷೇಧಾಜ್ಞೆ ವಿಧಿಸಿ ಆದೇಶಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜೊತೆ ಮಾತನಾಡಿದ ಪೊಲೀಸ್ ಆಯುಕ್ತ ಲಾಬೂರಾಂ, ಘಟನೆಗೆ ಸಂಬಂಧಿಸಿದಂತೆ 40 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. 6 ಎಫ್‌ಐಆರ್‌ಗಳು ದಾಖಲಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಏ.20ರವರೆಗೆ ನಿಷೇಧಾಜ್ಞೆ ವಿಧಿಸಲಾಗಿದೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಮತ್ತಷ್ಟು ಮಂದಿಗಾಗಿ ಹುಡುಕಾಟ ನಡೆದಿದೆ. ದೊಡ್ಡ ಪ್ರಮಾಣದ ಕಲ್ಲುಗಳು ಹ್ಯಾಗೆ ಸ್ಥಳದಲ್ಲಿ ಸಂಗ್ರಹವಾಯಿತು ಎಂಬುದರ ಬಗ್ಗೆ ಕೂಡ ತನಿಖೆ ನಡೆಸುತ್ತಿದ್ದೇವೆ. ಸಾರ್ವಜನಿಕರು ಗಾಯಗೊಂಡಿರುವ ಬಗ್ಗೆ ಮಾಹಿತಿ ಇದ್ದು, ಅಂತಹವರು ಠಾಣೆಗೆ ಬಂದು ದೂರು ಸಲ್ಲಿಸಬಹುದು ಎಂದು ತಿಳಿಸಿದರು.

## ದುಷ್ಪ್ರಯತ್ನಗಳು ಕಳವಳಕಾರಿ

ಕೆಟ್ಟ ಪ್ರವೃತ್ತಿ ಸರಿಯಲ್ಲ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಸಂಭವಿಸಿದ ಉದ್ವಿಗ್ನ ಪರಿಸ್ಥಿತಿ ಕುರಿತು ಟ್ವೀಟ್ ಮಾಡಿರುವ ಅವರು, ತಡರಾತ್ರಿ ಹುಬ್ಬಳ್ಳಿಯಲ್ಲಿ ನಡೆದ ಕಹಿ ಘಟನೆಗಳು ನನಗೆ ತೀವ್ರ ಆಘಾತ ಉಂಟು ಮಾಡಿವೆ. ಕರ್ನಾಟಕದ ಶಾಂತಿ, ಸಾಮರಸ್ಯ ಹಾಳು ಮಾಡುವ ದುಷ್ಪ್ರಯತ್ನಗಳು ಕಳವಳಕಾರಿ. ಧರ್ಮ ಧರ್ಮಗಳ ನಡುವೆ ಬೆಂಕಿ ಹಾಕಿ ಬೇಳೆ ಬೇಯಿಸಿಕೊಳ್ಳುವ ಕೆಟ್ಟ ಪ್ರವೃತ್ತಿ ಸರಿಯಲ್ಲ. ಎರಡೂ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ–ಕಾಂಗ್ರೆಸ್ ಪಕ್ಷಗಳಿಗೆ ಇಂಥ ಕಿಡಿಗೇಡಿ ಘಟನೆಗಳೆಂದರೆ ಬಲು ಇಷ್ಟ. ಚುನಾವಣೆಗೆ ಸಜ್ಜಾಗುತ್ತಿರುವ ಕರ್ನಾಟಕವನ್ನು ಒಡೆದು ಆಳುವ ಮೂಲಕ 'ಬ್ರಿಟಿಷ್ ನೀತಿ'ಯನ್ನೇ ಇವು ಅನುಸರಿಸುತ್ತಿವೆ. ಈ ಪಕ್ಷಗಳ ಬಗ್ಗೆ ಜನ ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದ್ದಾರೆ.

## ಚುನಾವಣಾ ರಣ ಕಹಳೆ

ಭ್ರಷ್ಟಾಚಾರದ ಗಂಗೋತ್ರಿ ಕಾಂಗ್ರೆಸ್. ದೇಶದಲ್ಲಿ ಭ್ರಷ್ಟಾಚಾರ ಆರಂಭವಾದದ್ದೇ ನೆಹರು ಅವರ ಕಾಲದಲ್ಲಿ. ಕಾಂಗ್ರೆಸ್‌ಗೆ ಭ್ರಷ್ಟಾಚಾರವೇ ಅವರ ಕಾರ್ಯಕ್ರಮ, ಭ್ರಷ್ಟಾಚಾರವೇ ಅವರ ನೀತಿ. ಅಕ್ಕಿ ಕೊಡುವುದರಿಂದ ಹಿಡಿದು ಬಡವರಿಗೆ ಕೊಡುವ ದಿಂಬು, ಹಾಸಿಗೆಯಲ್ಲೂ ಭ್ರಷ್ಟಾಚಾರ ಮಾಡಿ ಹಣ ಕೊಳ್ಳೆ ಹೊಡೆದಿದ್ದಾರೆ ಎಂದರು.

ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಪುಣ್ಯಭೂಮಿ ವಿಜಯನಗರ ಜಿಲ್ಲೆಯಿಂದಲೇ ವಿಜಯ ಪತಾಕೆ ಹಾರಿಸೋಣ. ನಿಮ್ಮೆಲ್ಲರ ಬೆಂಬಲ ನನಗೆ ಬೇಕು. ನಿಮ್ಮೆಲ್ಲರ ಬೆಂಬಲ ನರೇಂದ್ರ ಮೋದಿ ಅವರಿಗೆ ಬೇಕು. ಎಲ್ಲರೂ ಸಿದ್ಧರಾಗಿ... ಸಿದ್ಧರಾಗಿ... ಎಂದು ಬಸವರಾಜ ಬೊಮ್ಮಾಯಿ ರಣ ಕಹಳೆ ಮೊಳಗಿಸಿದರು.

**ನಡ್ಡಾ ಮೆಚ್ಚುಗೆ:** ವಿಜಯನಗರ ಜಿಲ್ಲೆಯಿಂದಲೇ ವಿಜಯ ಪತಾಕೆ ಹಾರಿಸೋಣ ಎಂದು ಚುನಾವಣಾ ರಣ ಕಹಳೆ ಮೊಳಗಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಷಣಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮೆಚ್ಚುಗೆ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಾತುಗಳ ಮೂಲಕ ನಿಮಗೆ ಉತ್ಸಾಹ ತುಂಬಿದ್ದಾರೆ. ಅವರಷ್ಟು ಜೋಷ್‌ನಿಂದ ನಾನು ಮಾತನಾಡುತ್ತೇನೋ ಇಲ್ಲವೋ ಗೊತ್ತಿಲ್ಲ ಎಂದು ಅವರು ಹೇಳಿದರು.

**ಖಂಡನಾ ನಿರ್ಣಯ:** ರಾಜ್ಯದಲ್ಲಿ ಕಾಂಗ್ರೆಸ್ ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಸರ್ಕಾರದ ಸರ್ವ ಸ್ಪರ್ಶಿ ಅಭಿವೃದ್ಧಿ ಕಾರ್ಯವನ್ನು ಮೆಚ್ಚುವ ಬದಲು ಬರೀ ಟೀಕೆಗಳನ್ನೇ ಮಾಡುವ ಆತ್ಮವಂಚಕ ವಿಪಕ್ಷಗಳ ಧೋರಣೆಯನ್ನು ಖಂಡಿಸುವ ರಾಜಕೀಯ ನಿರ್ಣಯವನ್ನು ಈ ಕಾರ್ಯಕಾರಿಣಿಯಲ್ಲಿ ಅಂಗೀಕರಿಸಲಾಗಿದೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಹೇಳಿದರು. ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಆರ್.ಅಶೋಕ್ ಖಂಡನಾ ನಿರ್ಣಯ ಮಂಡಿಸಿದರೆ, ಮಾಜಿ ಸಚಿವರಾದ ಲಕ್ಷ್ಮಣ ಸವದಿ ಮತ್ತು ಅಪ್ಪಚ್ಚು ರಂಜನ್ ಅನುಮೋದಿಸಿದರು ಎಂದು ಅವರು ಹೇಳಿದರು.

## ಬಹಿರಂಗ ಸಭೆ

ಸಂಬಂಧಿಸಿದಂತೆ ಚರ್ಚಿಸಿದರಲ್ಲದೆ, ಎರಡೂ ಕಟ್ಟಡವು ರಾಜರ ಆಳ್ವಿಕೆ ಕಾಲದಲ್ಲೇ ನಿರ್ಮಿಸಲಾಗಿದ್ದು, ಅವುಗಳನ್ನು ರಕ್ಷಿಸಿ ಪಾರಂಪರಿಕತೆ ಉಳಿಸಿಕೊಂಡು ಮರು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಇದರಿಂದಾಗಿ ಯಾವುದೇ ಕಾರಣಕ್ಕೂ ಪಾರಂಪರಿಕ ಕಟ್ಟಡಗಳ ನೆಲಸಮಕ್ಕೆ ಮೈಸೂರು ರಾಜಮನೆತನ ಸಮ್ಮತಿಸಬಾರದು ಎಂದು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮನವಿ ಮಾಡಿದರು. ಪುನರ್ ನಿರ್ಮಾಣದಿಂದ ಪಾರಂಪರಿಕತೆಯನ್ನು ಯಥಾವತ್ತಾಗಿ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದನ್ನು ಮನಗಂಡು ಮೈಸೂರಿನ ನಾಗರೀಕರ ಪರವಾಗಿ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಹೋರಾಟ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇನ್ನೆರಡು ದಿನದಲ್ಲಿ ಬೃಹತ್ ಸಭೆಯೊಂದನ್ನು ಕರೆಯಲಾಗಿದ್ದು, ಆ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಪರಿಣಿತರು ಪಾಲ್ಗೊಳ್ಳಲಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಭೆಗೆ ಆಗಮಿಸುತ್ತೇನೆ. ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಸಂಬಂಧಿಸಿದಂತೆ ರಾಜಮನೆತನದ ನಿಲುವನ್ನು ಶೀಘ್ರವೇ ಪ್ರಕಟಿಸುವುದಾಗಿ ತಿಳಿಸಿದರು ಎಂದು ಮಹದೇವ್ ಹೇಳಿದರು.

# ಮೈಸೂರಲ್ಲಿ ನಿರ್ಮಾಣವಾಗುತ್ತಿವೆ ಪರಿಸರ ಸ್ನೇಹಿ ಮಣ್ಣಿನ ಮನೆಗಳು!







ಮೈಸೂರು,ಏ.17(ಜಿಎ)–ಮಣ್ಣಿನಿಂದ ಮನೆಗಳ ನಿರ್ಮಾಣ ಮಾಡುತ್ತಿದ್ದ ಕಾಲ ಒಂದಿತ್ತು ಮತ್ತೆ ಅದೇ ಕಾಲ ಮೈಸೂರಿನಲ್ಲಿ ಮರುಕಳಿಸಿದೆ.

ಮನೆ ಎಂದರೆ ಸುಂದರವಾಗಿರುವುದರ ಜೊತೆಗೆ ನೂರು ವರ್ಷಗಳಾದರೂ ಗಟ್ಟಿಮುಟ್ಟಾಗಿ ಇರಬೇಕು ಎಂಬುದು ಎಲ್ಲರ ಉದ್ದೇಶವಾಗಿರುತ್ತದೆ. ಆದರೆ ಮೈಸೂರಿನಲ್ಲಿ ಆರ್–ಲೀಫ್ ಎಂಬ ಕಟ್ಟಡ ನಿರ್ಮಾಣ ಸಂಸ್ಥೆಯು ಕಡಿಮೆ ವೆಚ್ಚದಲ್ಲಿ ಪರಿಸರ ಸ್ನೇಹಿ ಮಣ್ಣಿನ ಮನೆಗಳನ್ನು ನಿರ್ಮಿಸಬಹುದೆಂದು ತೋರಿಸಿಕೊಟ್ಟಿದೆ.

ಮನೆ ಕಟ್ಟಬೇಕೆಂದರೆ ಸಿಮೆಂಟ್, ಕಬ್ಬಿಣ, ಇಟ್ಟಿಗೆ, ಮರಳು, ಕಲ್ಲು ಇತ್ಯಾದಿ ವಸ್ತುಗಳನ್ನು ಬಳಸುವುದು ಸಾಮಾನ್ಯ. ಆದರೆ, ಹಳೇ ಕಾಲದಲ್ಲಿ ಮಣ್ಣಿನಿಂದಲೇ ಗಟ್ಟಿಮುಟ್ಟಾದ ಮನೆಗಳನ್ನು ನಿರ್ಮಿಸುತ್ತಿದ್ದರು. ಇದೀಗ ಮೈಸೂರಿನ ಕಟ್ಟಡ ನಿರ್ಮಾಣ ಸಂಸ್ಥೆಯೊಂದು ಹಳೇ ಕಾಲದ ಮಣ್ಣಿನ ಮನೆಯ ಪರಿಕಲ್ಪನೆಯಲ್ಲಿ ಕಡಿಮೆ ವೆಚ್ಚದಲ್ಲಿ ಪರಿಸರ ಸ್ನೇಹಿ ಮಣ್ಣಿನ ಮನೆಗಳನ್ನು ನಿರ್ಮಾಣ ಮಾಡಿದೆ.

ಈ ಸಂಸ್ಥೆಯು ಮೈಸೂರು ಜಿಲ್ಲೆಯಾದ್ಯಂತ 150ಕ್ಕೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡಿದ್ದು, ಗ್ರಾಹಕರು ಸಹ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಆರ್–ಲೀಫ್ ಸಂಸ್ಥೆಯ ಮುಖ್ಯಸ್ಥರಾದ ಎಂ.ರಾಜೇಶ್ ಕುಮಾರ್ ಜೈನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

**ಕೆಮ್ಮಣ್ಣು ಸುಣ್ಣ ಬಳಕೆ:** ಮನೆಯು ಯಾವ ವಿನ್ಯಾಸದಲ್ಲಿರಬೇಕು ಎಂದು ಮನೆಯ ಮಾಲೀಕರೊಂದಿಗೆ ಮಾತನಾಡಿ ನಂತರ ಒಂದು ಪ್ಲಾನ್ ಮಾಡಲಾಗುವುದು. ಹಿಂದಿನ ಕಾಲದಲ್ಲಿ ಮನೆ ಮತ್ತು ಅರಮನೆ ಕಟ್ಟಲು ಮಣ್ಣು, ಸುಣ್ಣ ಮತ್ತು ಮೊಟ್ಟೆ ಬಳಸಲಾಗುತ್ತಿತು. ಅದರಂತೆ ನಾವು ಸಹ ಮನೆಯ ನಿರ್ಮಾಣಕ್ಕೆ ಕೆಮ್ಮಣ್ಣು ಮತ್ತು ಸುಣ್ಣ ಬಳಸುತ್ತಿದ್ದೇವೆ. ಸಾಮಾನ್ಯವಾಗಿ ಮಣ್ಣಿನಲ್ಲಿಯೇ ಮರಳು ಇರುತ್ತದೆ. ಕೆಮ್ಮಣ್ಣನ್ನು ಜರಡಿ ಹಿಡಿದು ನಂತರ ಬರುವ ಮಣ್ಣನ್ನು ಬಳಸಿ ಸಂಪೂರ್ಣ ಮನೆ ನಿರ್ಮಾಣ ಮಾಡುತ್ತಿದ್ದೇವೆ. ತಾರಸಿ ಹಾಕಲು ಅತಿ ಕಡಿಮೆ ಕಬ್ಬಿಣ, ಇಂಟರ್‌ಲಾಕ್ ಇಟ್ಟಿಗೆಗಳನ್ನು ಬಳಸುತ್ತಿದ್ದೇವೆ. ಮಾಲೀಕರಿಗೆ ಅಗತ್ಯವಿದ್ದರೆ, ಜೊತೆಗೆ ಕಾಂಕ್ರೀಟ್ ತಾರಸಿಯನ್ನು ಹಾಕಲಾಗುತ್ತದೆ. ಈ ನಿರ್ಮಾಣ ವಾದ ಮನೆಯು ಪರಿಸರ ಸ್ನೇಹಿಯಾಗಿದ್ದು, ಯಾವುದೇ ಸಿಮೆಂಟ್, ಮರಳು ಬಳಸದೇ ಬರೀ ಮಣ್ಣಿನಿಂದ ಒಂದಸ್ತಿನ ಮನೆಯನ್ನು ನಿರ್ಮಾಣ ಮಾಡಬಹುದು. ಮಣ್ಣಿನ ಮನೆಯಾಗಿರುವುದರಿಂದ ಹೆಚ್ಚು ಉಷ್ಣಾಂಶವನ್ನು ಕಟ್ಟಡ ಹೀರಿಕೊಳ್ಳುವುದಿಲ್ಲ. ಹೀಗಾಗಿ, ಮನೆಯ ಒಳ ಭಾಗ ತಂಪಾಗಿರುತ್ತದೆ ಎಂದರು.

**ವಿಭಿನ್ನ ವಿನ್ಯಾಸದ ಇಟ್ಟಿಗೆ:** ನಂಜನಗೂಡಿನ ಕಡಕೊಳದಲ್ಲಿ ಇಟ್ಟಿಗೆ ತಯಾರಿಕೆ ಮಾಡುತ್ತಿದ್ದು, ಅವುಗಳನ್ನು ವಿಭಿನ್ನ ವಿನ್ಯಾಸಗಳಿಂದ ಮಾಡಲಾಗುತ್ತಿದೆ. ಇದರಿಂದ ಮನೆಯ ಒಳಗೆ ಮತ್ತು ಹೊರಗೆ ಪ್ಲಾಸ್ಟಿಂಗ್ ಅಗತ್ಯವಿರುವುದಿಲ್ಲ. ಅಗತ್ಯವಿದ್ದವರು ಬಣ್ಣ ಬಳಸಬಹುದಾಗಿದೆ. ಮನೆಯನ್ನು ಸಣ್ಣ ಪುಟ್ಟ ನಿರ್ವಹಣೆ ಮಾಡಿದರೆ 100 ವರ್ಷಗಳ ಕಾಲ ಯಾವುದೇ ಸಮಸ್ಯೆ ಇರುವುದಿಲ್ಲ.

**ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಾಗಾರ:** ಮಣ್ಣಿನ ಮೂಲಕ ಮನೆ ನಿರ್ಮಾಣ ಮಾಡಬಹುದು ಎಂಬ ಪರಿಕಲ್ಪನೆ ಎಲ್ಲರೂ ಮರೆತು ಹೋಗುತ್ತಿದ್ದಾರೆ. ಈ ವಿಚಾರವಾಗಿ ಕಾಲೇಜಿನಲ್ಲಿಯೂ ತಿಳಿಸುತ್ತಿಲ್ಲ. ನಮ್ಮ ಸಂಸ್ಥೆಯು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ. ಮೈಸೂರು, ನಂಜನಗೂಡು ಸೇರಿದಂತೆ ರಾಜ್ಯದಲ್ಲಿರುವ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ವಾಸ್ತುಶಿಲ್ಪ ಕಾಲೇಜುಗಳ ವಿದ್ಯಾರ್ಥಿಗಳಿಗೂ ಮಣ್ಣಿನ ಕಟ್ಟಡ ನಿರ್ಮಾಣದ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದರು.

> ನಾನು ಮೂರು ವರ್ಷಗಳ ಹಿಂದೆ ಮನೆ ನಿರ್ಮಾಣ ಮಾಡಬೇಕು ಎಂದು ಆಲೋಚಿಸಿ ಈ ಸಂಸ್ಥೆಯ ಮೂಲಕ ಮನೆಯ ನಿರ್ಮಾಣ ಮಾಡಿಸಿದ್ದೆ. ನಮ್ಮ ಅಂದಾಜು ವೆಚ್ಚಕ್ಕಿಂತ ಕಡಿಮೆ ಹಣದಲ್ಲಿಯೇ ಮನೆ ನಿರ್ಮಾಣವಾಗಿದೆ. ಮಣ್ಣಿನ ಮನೆ ಖುಷಿಕೊಟ್ಟಿದ್ದು ಮನೆಯು ಪರಿಸರ ಸ್ನೇಹಿಯಾಗಿದೆ. ಬೇರೆ ಮನೆಗಳಿಗೆ ಹೋಲಿಸಿದರೆ ಉಷ್ಣಾಂಶ ಕಡಿಮೆ ಇರುತ್ತದೆ. ಎಂತಹ ಬೇಸಿಗೆಯಲ್ಲೂ ಯಾವುದೇ ಫ್ಯಾನ್, ಎಸಿಯೇ ಬೇಕಿಲ್ಲ.
>
> –ಎಚ್.ಎಸ್. ಮುಕುಂದ, ಮನೆ ಮಾಲೀಕರು



## ಚಾ.ಬೆಟ್ಟಕ್ಕೆ ರೋಪ್ ವೇ: ವಾಟಾಳ್ ಪ್ರತಿಭಟನೆ



ಮೈಸೂರು, ಏ.17(ಎಂಟಿವೈ)– ಚಾಮುಂಡಿಬೆಟ್ಟಕ್ಕೆ ರೋಪ್ ವೇ ನಿರ್ಮಾಣ ಮಾಡುವ ನಿರ್ಧಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿ ಪ್ರತಿಭಟನೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದ ಅವರು, ಯಾವುದೇ ಪರಿಸರ ಹಾಳು ಮಾಡಿ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಮಾಡುವುದು ಅವೈಜ್ಞಾನಿಕ. ಕೇವಲ 20 ನಿಮಿಷಕ್ಕೆ ಹೋಗುವ ಬೆಟ್ಟಕ್ಕೆ ರೋಪ್ ವೇ ಅವಶ್ಯಕತೆ ಇಲ್ಲ. ಈಗಾಗಲೇ ಉತ್ತಮ ರಸ್ತೆ, ಮೆಟ್ಟಿಲುಗಳಿರುವಾಗ ರೋಪ್ ವೇ ಬೇಡ ಎಂದರು.

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ವಾಟಾಳ್ ನಾಗರಾಜ್, ಹೋರಾಟದ ಮೂಲಕ ಹಣ ವಸೂಲಿ ಮಾಡಬಹುದಿತ್ತು. ಆದರೆ ಆತ್ಮಹತ್ಯೆ ಮಾಡಿಕೊಂಡಿದ್ದು ಸರಿಯಾದ ನಿರ್ಧಾರ ಅಲ್ಲ. ಇದರಿಂದಾಗಿ ಸಂತೋಷ್ ಕುಟುಂಬ ಜೀವನ ಪೂರ್ತಿ ದುಃಖ ಪಡುತ್ತದೆ. ಪ್ರಕರಣ ಸಂಬಂಧ ಈಗಾಗಲೇ ಕೆ.ಎಸ್. ಈಶ್ವರಪ್ಪ ರಾಜೀನಾಮೆ ಕೊಟ್ಟಿದ್ದಾರೆ. ಅವರ ಮೇಲೆ ಎಫ್‌ಐಆರ್ ಕೂಡಾ ದಾಖಲಾಗಿದೆ. ತನಿಖೆ ಬಳಿಕ ಮುಂದಿನ ಕ್ರಮ ಆಗುತ್ತದೆ. ಸಿಎಂ ಈ ಬಗ್ಗೆ ನಿಷ್ಪಕ್ಷಪಾತ ಕ್ರಮ ಕೈಗೊಳ್ಳುವ ವಿಶ್ವಾಸವಿದೆ ಎಂದರು.

ಕಮಿಷನ್ ದಂಧೆ ಇಂದಿನ ಸಮಸ್ಯೆಯಲ್ಲ. ಹತ್ತಾರು ವರ್ಷಗಳಿಂದ ಈ ಸಮಸ್ಯೆ ಇದೆ. ಈ ದಂಧೆಗೆ ಕಂಟ್ರಾಕ್ಟರ್‌ಗಳೇ ಕಾರಣ. ಪರ್ಸೆಂಟೇಜ್ ವ್ಯವಸ್ಥೆ ಬಂದಿದ್ದೇ ಕಂಟ್ರಾಕ್ಟರ್‌ಗಳಿಂದ. ಕಂಟ್ರಾಕ್ಟರ್‌ಗಳು ಟೆಂಡರ್ ಪಡೆದುಕೊಳ್ಳಲು ಜಿದ್ದಿಗೆ ಬಿದ್ದು ಪರ್ಸೆಂಟೇಜ್ ಕೊಡುತ್ತಾರೆ. ಅಧಿಕಾರಿಗಳಿಗೆ, ಶಾಸಕರಿಗೆ, ಮಂತ್ರಿಗಳಿಗೆ ಹಣದ ಆಸೆ ತೋರಿಸುತ್ತಾರೆ. ಇನ್ನು ಶೇ.40ರಷ್ಟು ಕಮಿಷನ್ ಕೊಟ್ಟ ಮೇಲೆ ಯಾವ ಗುಣಮಟ್ಟದಲ್ಲಿ ಕಾಮಗಾರಿ ಮಾಡುತ್ತಾರೆ ಎಂದು ಅವಲೋಕಿಸಬೇಕು. ಕಳೆದ 25 ವರ್ಷಗಳಿಂದ ಈ ಕಮಿಷನ್ ದಂಧೆ ನಡೆಯುತ್ತಿದೆ. ಕೂಡಲೇ ಕೇಂದ್ರ ಸರ್ಕಾರ 25 ವರ್ಷಗಳ ಕಾಮಗಾರಿಗಳ ತನಿಖೆ ನಡೆಸಬೇಕು. ಸಂಪೂರ್ಣ ಸಿಬಿಐ ತನಿಖೆ ನಡೆಸಬೇಕೆಂದು ವಾಟಾಳ್ ನಾಗರಾಜ್ ಒತ್ತಾಯಿಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಾನಪದ ವಿದ್ವಾಂಸ ಡಾ.ಡಿ.ಕೆ. ರಾಜೇಂದ್ರ 80ನೇ ಹುಟ್ಟುಹಬ್ಬದ ಪ್ರಯುಕ್ತ ದಂಪತಿಯನ್ನು ಸನ್ಮಾನಿಸಲಾಯಿತು. ಪರಿಷತ್ತು ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಂಗಕರ್ಮಿ ರಾಜಶೇಖರ ಕದಂಬ, ಮಂಜಪ್ಪಶೆಟ್ಟಿ, ಎಂ.ಚಂದ್ರಶೇಖರ್, ಮೂಗೂರು ನಂಜುಂಡಸ್ವಾಮಿ, ಅಶ್ವಥ್ ಕದಂಬ, ದೇವರಾಜ್, ರಾಜೇಂದ್ರ ಕುಟುಂಬ ವರ್ಗದವರು ಭಾಗವಹಿಸಿದ್ದರು.

## ಉಚಿತ ಯೋಗಾಸನ, ಪ್ರಾಣಾಯಾಮ ತರಗತಿ

ಮೈಸೂರು, ಏ.17– ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಮೈಸೂರು ಶಾಖೆಯು ಸರಸ್ವತಿಪುರಂನಲ್ಲಿರುವ ವಿಜಯ ವಿಠ್ಠಲ ಶಾಲೆಯ ಆವರಣದಲ್ಲಿ ಏ. 18 ರಿಂದ 45 ದಿನಗಳ ಉಚಿತ ಯೋಗಾಸನ, ಪ್ರಾಣಾಯಾಮ, ಧ್ಯಾನ ತರಗತಿಯನ್ನು ಹಮ್ಮಿಕೊಳ್ಳಲಾಗಿದೆ. ತರಗತಿಯು ಬೆಳಗ್ಗೆ 6ರಿಂದ 7ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9945759762, 9448045514 ಸಂಪರ್ಕಿಸಬಹುದು.



ಮೈಸೂರು ಯುವ ಬಳಗ ವತಿಯಿಂದ ಮಹಾವೀರ ಜಯಂತಿ ಹಾಗೂ ಅಂಬೇಡ್ಕರ್ ಜಯಂತಿ ಅಂಗವಾಗಿ ದೇವರಾಜ ಅರಸ್ ರಸ್ತೆಯಲ್ಲಿ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಲಾಯಿತು. ಈ ವೇಳೆ ಪ್ರವೀಣ್, ಉಗ್ರಂರಾಜ್, ಈಶ್ವರ್, ಜೈನ್, ಜಿತೇಂದ್ರ ಜೈನ್, ವಿಘ್ನೇಶ್ವರ್‌ಭಟ್, ರವಿಚಂದ್ರ, ನಿತೀನ್, ಪ್ರಶಾಂತ್, ಹರೀಶ್‌ಗೌಡ, ಶ್ರೀನಿವಾಸ್, ಶಿವಕುಮಾರ್, ನವೀನ್, ಸನತ್ ಇದ್ದರು.

## 38ನೇ ಬ್ರಾಹ್ಮಣ ವಧು–ವರರ ಸಮಾವೇಶ

ಮೈಸೂರು, ಏ.17–ಸಪ್ತಪದಿ ಫೌಂಡೇಷನ್ ಟ್ರಸ್ಟ್ ವತಿಯಿಂದ 38ನೇ ಬ್ರಾಹ್ಮಣ ವಧು–ವರರ ಸಮಾವೇಶವನ್ನು ಏ.24ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ 'ನಮನ ಕಲಾ ಮಂಟಪ'ದಲ್ಲಿ ಆಯೋಜಿಸಲಾಗಿದೆ. ಎಲ್ಲಾ ವಿದ್ಯಾರ್ಹತೆ ಉಳ್ಳ ಹಾಗೂ ಎಲ್ಲಾ ತ್ರಿಮತಸ್ಥ ಬ್ರಾಹ್ಮಣ ವಧು–ವರರು ಏ.23ರೊಳಗೆ ಮಂಗಳ ಸೂತ್ರ, ನಂ.11, ಬ್ರಾಹ್ಮಣ ಧರ್ಮ ಸಹಾಯ ಸಭಾ ಸಂಕೀರ್ಣ, ತ್ಯಾಗರಾಜ ರಸ್ತೆ, ಮೈಸೂರು ಇಲ್ಲಿ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ. (ಹೆಣ್ಣು ಮಕ್ಕಳಿಗೆ ಹಾಗೂ ವಿಕಲಚೇತನರ ಉಚಿತ ಸೇವೆ ಹಾಗೂ ಪ್ರವೇಶ).

## ಕರಾಟೆ ತರಬೇತಿ ಶಿಬಿರ

ಮೈಸೂರು,ಏ.17–ಮೈಸೂರಿನ ಒಕಿನವಾ ಸ್ಕೂಲ್ ಆಫ್ ಕರಾಟೆ ಸಂಸ್ಥೆಯಿಂದ ಏ.20ರಿಂದ ಮೇ 20ರವರೆಗೆ ಉಚಿತ ಬೇಸಿಗೆ ಕರಾಟೆ ತರಬೇತಿ ಶಿಬಿರವನ್ನು ದೊಡ್ಡಕೆರೆ ಮೈದಾನದಲ್ಲಿರುವ ಸಾಹುಕಾರ್ ಚನ್ನಯ್ಯ ಕುಸ್ತಿ ಅಖಾಡ, ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದಲ್ಲಿ ಬೆಳಗ್ಗೆ 6ರಿಂದ 8ರವರೆಗೆ ನೀಡಲಾಗುವುದು. ವಿವರಗಳಿಗೆ ಮೊ. 9844169591 ಸಂಪರ್ಕಿಸಬಹುದು.




ಅಂಬೇಡ್ಕರ್ ಜಯಂತಿಯಂದು ಮೈಸೂರಿನ ಪುರಭವನದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಕರ್ನಾಟಕ ರಾಜ್ಯ ಭಾರತಮಾತ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಜಿ.ಸಿದ್ದರಾಜು ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಸುರೇಶ್, ಶ್ರೀನಿವಾಸ್, ಪುಟ್ಟಸ್ವಾಮಿ, ನಂಜುಂಡ, ಎಸ್.ರಾಮಣ್ಣ, ಕಲ್ಪನಾ, ಗೀತ, ಕೀರ್ತಿರಾಜ್, ರಮೇಶ್ ಇನ್ನಿತರರಿದ್ದರು.

# ನಾಡಿನ ಮನೆ–ಮನೆಗೆ ಬಿಜೆಪಿ ಭ್ರಷ್ಟಾಚಾರ ತಲುಪಿಸುವ ಕೆಲಸ

### ಕಾಂಗ್ರೆಸ್ ಪಕ್ಷದಿಂದ ಪ್ರಕಟ

### ಸಚಿವರ ಮೇಲಿನ ಭ್ರಷ್ಟಾಚಾರದ ಆರೋಪಗಳು ಇಡಿ ತನಿಖೆಗೆ ಆಗ್ರಹ



ಮೈಸೂರು, ಏ.17(ಎಂಟಿವೈ)– ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ನಾಡಿನ ಮನೆ–ಮನೆಗೆ ತಲುಪಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದ್ದು, ಸಚಿವರ ಮೇಲಿರುವ ಭ್ರಷ್ಟಾಚಾರದ ಆರೋಪಗಳನ್ನು ಇಡಿ ತನಿಖೆಗೆ ಆಗ್ರಹಿಸಿ ಜಿಲ್ಲಾ ಮಟ್ಟದಲ್ಲಿ ಹೋರಾಟ ನಡೆಸಲು ನಿರ್ಧರಿಸಿರುವುದಾಗಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಮಿತಿ ಮೀರಿದ ಭ್ರಷ್ಟಾಚಾರದಲ್ಲಿ ಮುಳುಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಅವಧಿಯಲ್ಲಿ ಲೈಂಗಿಕ ದೌರ್ಜನ್ಯ ಹಾಗೂ ಶೇ.40ರಷ್ಟು ಕಮಿಷನ್ ದಂಧೆಯಲ್ಲಿ ಶಾಮೀಲಾಗಿ ಇಬ್ಬರು ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಉಳಿದ ಐವರು ಸಚಿವರ ಮೇಲಿರುವ ಭ್ರಷ್ಟಾಚಾರದ ಆರೋಪಗಳ ವಿರುದ್ಧ ತನಿಖೆ ನಡೆಸುವಂತೆ ಹೋರಾಟ ಮಾಡಲಿದ್ದೇವೆ ಎಂದರು.

ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಅಲ್ಲದೇ, ಈಶ್ವರಪ್ಪ ಅವರ ಮೇಲೆ ಭ್ರಷ್ಟಾಚಾರ ಪ್ರಕರಣ ದಾಖಲಿಸಬೇಕು. ರಾಜೀನಾಮೆ ಕೊಡುವ ಮುನ್ನ ಹಲವಾರು ವರ್ಗಾವಣೆಗಳನ್ನು ಮಾಡಿ ಹಣ ಪಡೆಯಲಾಗಿದೆ ಎಂದರು.

ಸಚಿವರಾದ ಬಿ.ಸಿ.ಪಾಟೀಲ್, ಆರ್.ಅಶೋಕ್, ಡಾ.ಕೆ.ಸುಧಾಕರ್, ಡಾ.ಅಶ್ವತ್ಥನಾರಾಯಣ, ಗೋಪಾಲಯ್ಯ ಮತ್ತು ಶಶಿಕಲಾ ಜೊಲ್ಲೆ ಅವರ ಮೇಲೆ ಕಮಿಷನ್ ಮತ್ತು ಭ್ರಷ್ಟಾಚಾರದ ಆರೋಪಗಳಿವೆ. ಈ ಸಂಬಂಧ ಅಧಿಕಾರಿಗಳು ಲಿಖಿತವಾಗಿ ಮುಖ್ಯ ಕಾರ್ಯದರ್ಶಿಗೆ ದೂರು ಕೊಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ನಾನು ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ ಎಂದು ಹೇಳುತ್ತಾರೆ. ಸಚಿವರ ವಿರುದ್ಧವೇ ಆರೋಪಗಳಿದ್ದರೂ ಯಾಕೆ ಸುಮ್ಮನಿದ್ದಾರೆ? ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ಈಶ್ವರಪ್ಪ ಬಂಧನಕ್ಕೆ ಆಗ್ರಹಿಸಿ ನಡೆಸುತ್ತಿರುವ ಹೋರಾಟ ಮುಗಿದ ಬಳಿಕ ಉಳಿದ ಪ್ರಕರಣಗಳ ವಿರುದ್ಧ ಹೋರಾಟ ಮಾಡುತ್ತೇವೆ. ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ರಾಜ್ಯದಲ್ಲಿ ಶೇ.40 ಕಮಿಷನ್ ಮಾಡಿದ್ದು, ವೈದ್ಯಕೀಯ ಮತ್ತು ಆರೋಗ್ಯ ಇಲಾಖೆಯಲ್ಲಿ 2 ಸಾವಿರ ಕೋಟಿ ರೂ. ಅವ್ಯವಹಾರ ನಡೆದಿದೆ. ಗುತ್ತಿಗೆ ನೀಡಲು ಎಇಇ ಒಪ್ಪಿಗೆ ಪತ್ರ ಪಡೆಯಬೇಕೆಂಬ ಹೊಸ ನಿಯಮ ಜಾರಿಗೆ ತಂದು, ಭಾರೀ ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕರು ಮಾತ್ರ ಜೈಲಿಗೆ ಹೋಗಿ ಬಂದವರ ರೀತಿಯಲ್ಲಿ ಮಾತಾಡುವ ಸಚಿವ ಸಿ.ಟಿ. ರವಿ ಅವರು 110 ದಿನಗಳ ಕಾಲ ಅಮಿತ್ ಶಾ ಎಲ್ಲಿದ್ದರು? ಬಿ.ಎಸ್.ಯಡಿಯೂರಪ್ಪ ಜೈಲಿಗೆ ಯಾಕೆ ಹೋಗಿದ್ದರು? ಡಿ.ವಿ.ಸದಾನಂದಗೌಡ ಸೇರಿ 12 ಬಿಜೆಪಿ ನಾಯಕರು ಅಶ್ಲೀಲ ವಿಡಿಯೋ ಪ್ರಸಾರಕ್ಕೆ ತಡೆ ತಂದಿರುವುದು ಯಾಕೆ? ಮೈಸೂರಿನಲ್ಲಿ ಸಂಸದ–ಶಾಸಕರ ನಡುವಿನ ಗಲಾಟೆ ಏನಾಯಿತು? ಇವುಗಳ ಬಗ್ಗೆಯೂ ಮಾತಾಡಿ ಸಿ.ಟಿ.ರವಿ ಅವರೇ ಎಂದು ಒತ್ತಾಯಿಸಿದರು.

ದೇಶ ಬಿಜೆಪಿಯವರ ಸ್ವತ್ತಲ್ಲ. ಮುಸ್ಲಿಮರನ್ನು ಎತ್ತಿ ಕಟ್ಟಿ ಹಿಂದೂಗಳ ಮತಗಳ ಧ್ರುವೀಕರಣ ಮಾಡುವ ನಿಮ್ಮ ಲೆಕ್ಕಚಾರ ನಡೆಯದು. ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಈಶ್ವರಪ್ಪ ಪ್ರಕರಣವನ್ನು ವಿಷಯಾಂತರ ಮಾಡಲು ರಾಜ್ಯದಲ್ಲಿ ಗಲಾಟೆ ಹಬ್ಬಿಸುತ್ತಿದ್ದಾರೆ ಎಂದು ಲಕ್ಷ್ಮಣ್ ಹೇಳಿದರು.

ಮಾಜಿ ಸಚಿವ ಈಶ್ವರಪ್ಪ ಅವರನ್ನು ಬಂಧಿಸಬೇಕು. ಭ್ರಷ್ಟಾಚಾರ ಆರೋಪದ ಪ್ರಕರಣಗಳ ತನಿಖೆ ನಡೆಸಬೇಕು. ಬೆಲೆ ಏರಿಕೆ ವಿರೋಧಿಸಿ ಏ.20ರಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಮತ್ತು ಮೆರವಣಿಗೆ ನಡೆಯಲಿದೆ. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಪ್ರಧಾನ ಕಾರ್ಯದರ್ಶಿ ಈಶ್ವರ ಚಕ್ಕಡಿ, ಸೇವಾದಳದ ಸಂಚಾಲಕ ಗಿರೀಶ್ ನಾಯಕ, ವಕ್ತಾರ ಕೆ.ಮಹೇಶ್ ಇದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

## WALK IN INTERVIEW
Driver & Assistant work (Male PUC + age 20 to 29)
Receptionist in Boutique (Female 20 to 25 Any Degree)
Place KHB Colony Hootagalli
9036844557

## ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ಆಫೀಸ್‌ನಲ್ಲಿ ಕೆಲಸ ಮಾಡಲು ಖುದ್ದಾಗಿ ಸಂಪರ್ಕಿಸಿ. ಕಥೇರಿ ವಿಳಾಸ: ಶ್ರೀ ರೇಣುಕಾ ಎಂಟರ್ ಪ್ರೈಸಸ್, ಮಳಿಗೆ ನಂ.6, ಪೂರ್ವ ಉಪನೋಂದಣಾಧಿಕಾರಿ ಕಛೇರಿ ಕಟ್ಟಡದ ಎದುರು, ತ್ರಿವೇಣಿ ಸರ್ಕಲ್, ಡಾ|| ರಾಜ್ ಕುಮಾರ್ ರಸ್ತೆ, ಸಾತಗಳ್ಳಿ, ಮೈಸೂರು.
9008777723 / 8123629092

## ಗಿರವಿ ಚಿನ್ನಾಭರಣ ಖರೀದಿ
ಗಿರವಿ ಇಟ್ಟಿರುವವರಿಗೆ ಸುವರ್ಣಾವಕಾಶ ಗಿರವಿ ಇಟ್ಟಿರುವ ಚಿನ್ನಾಭರಣವನ್ನು ನಾವೆ ಬಿಡಿಸಿ ಕಮಿಷನ್ ಇಲ್ಲದೆ ಇಂದಿನ ಆನ್‌ಲೈನ್ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣ ಕೊಡುತ್ತೇವೆ. ಈ ಸುವರ್ಣಾವಕಾಶವನ್ನು ಕಳೆದುಕೊಳ್ಳಬೇಡಿ. ಕೂಡಲೇ ಸಂಪರ್ಕಿಸಿ
(T&C) - 5300/-1ಗ್ರಾಂ
8050518881

## ಷೇರು ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ ದಿನಕ್ಕೆ 1500–2000 ಸಂಪಾದಿಸಿ. Self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ. (Trading Tips Available) Do Not Depend on one Source of income
9945667806

## ನಿರ್ಮಲಧಾರೆ SOLUTIONS
ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
9606871188

## ಬೇಕಾಗಿದ್ದಾರೆ
ಸ್ವಿಮಿಂಗ್ ಪೂಲ್ ನೋಡಿಕೊಳ್ಳಲು ಎಲೆಕ್ಟ್ರಿಕ್ ಅನುಭವವುಳ್ಳ ಕುಟುಂಬ ಬೇಕಾಗಿದೆ ಸಂಬಳದೊಂದಿಗೆ ವಸತಿ ಉಚಿತ ಸ್ಥಳ ಇಲವಾಲ ಸಂಪರ್ಕಿಸಿ.
9148933444

## ಬೇಕಾಗಿದ್ದಾರೆ
ಶಾಲೆಯಲ್ಲಿ ಬಸ್ ಡ್ರೈವಿಂಗ್ ಮಾಡಿಕೊಂಡು ಸೆಕ್ಯೂರಿಟಿ ಹಾಗೂ ಆಯಾ ಕೆಲಸ ಮಾಡಲು ಕುಟುಂಬ ಬೇಕಾಗಿದೆ. ಸಂಬಳದೊಂದಿಗೆ ವಸತಿ ಉಚಿತ ಸಂಪರ್ಕಿಸಿ
9148933444

## ವಿನಾಯಕ ಏಜೆನ್ಸಿ ಯರಗನಹಳ್ಳಿ
ಕಂಪ್ಯೂಟರ್ ಟ್ಯಾಲಿ (ಬಿಕಾಂ) ಆಗಿರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
9448311600
9036161961

## ಸೈಟು ಮಾರಾಟಕ್ಕಿದೆ
30x50, 5500 Sq. Ft.
ವಾಸು ಲೇಔಟ್, ರಾಮಕೃಷ್ಣನಗರ, ಮೈಸೂರು.
ಕೋಳಿಫಾರಂ ಲೀಸ್‌ಗಿದೆ. ಕಣಿಯನಹುಂಡಿ
9739849143 / 7899896860

## ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

## HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

## ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

## ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

## SITE FOR SALE
40x30,
Karnanjipura Road, Opposite Teachers Layout, Chamarajanagar.
Mob: 9482923953

## ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ ಹಾಗೂ ಟಿ.ನರಸೀಪುರ ರಸ್ತೆಯ ಚಿಕ್ಕಹಳ್ಳಿ ಸುತ್ತಮುತ್ತ, ಪುರುಷ, ವಿದ್ಯಾವಂತ, ಅನುಭವವಿರುವ 50 ರಿಂದ 55 ವರ್ಷ ವಯಸ್ಸಾದ Day & Night 12 Hrs ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ಮಾಹೆ: 12,000/-, Night 10,000/-
9620180090

## ಶ್ರಾದ್ಧ ಮಾಡಿಕೊಡಲಾಗುವುದು
ರೂ.6000/–
ಮಾರ್ತಾಂಡ ಎನ್.
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ ಹತ್ತಿರ, ನಂಜನಗೂಡು. ಉಳಿದು ಕೊಳ್ಳುವ ವ್ಯವಸ್ಥೆ ಇರುತ್ತದೆ.
9632070830

## AMAZE

SUNZONE SOLAR SYSTEM
VM Double Road, Kuvempunagar, Mysuru
9845175443

## SITES FOR SALE
MUDA Approved
Bank Loan Available
Srinagara Near Srirampura Ring Road
8050345574

## ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–
7259865221 / 8867373902

## ತಕ್ಷಣ ಸೈಟು ಮಾರಾಟಕ್ಕಿದೆ
45x65, 11B ಕೇರ್ಗಳ್ಳಿ, ಸೋಮನಾಥನಗರ ಹತ್ತಿರ, ಕೇರ್ಗಳ್ಳಿ ಸ್ಕೂಲ್ ಎದುರುಗಡೆ, ಮೈಸೂರು. 46 ಲಕ್ಷಗಳು (Negotiable)
9945855516 / 8892732802

## ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

## ಬೇಕಾಗಿದ್ದಾರೆ
ಕುಶಾಲನಗರದಲ್ಲಿ ಪ್ರಾರಂಭವಾಗಿರುವ ಪ್ರಸಿದ್ಧ ಹೋಟೆಲ್‌ಗೆ ಸಸ್ಯಹಾರಿ ಅಡುಗೆ ಭಟ್ಟರು–2, ಅಡುಗೆ ಸಹಾಯಕರು –2, ದೋಸೆ ಭಟ್ಟರು–1, ಟೇಬಲ್ ಕ್ಲೀನರ್ಸ್–2, ಕ್ಯಾಷಿಯರ್–2, ವೆಯಿಟರ್–3, ಕೌಂಟರ್ ಸಪ್ಲೈಯರ್–2, ಕಾಫಿ, ಟೀ ಭಟ್ಟರು–2. ಕೂಡಲೇ ಸಂಪರ್ಕಿಸಿ.
8123132161

## ಸೇಲ್ಸ್ ಹುಡುಗ & ಹುಡುಗಿಯರು ಬೇಕಾಗಿದ್ದಾರೆ
ಬಟ್ಟೆ ಅಂಗಡಿಗೆ ಸೇಲ್ಸ್ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ಅನುಭವವುಳ್ಳವರು ಹಾಗೂ ಅನುಭವ ಇಲ್ಲದವರು ಸಂಪರ್ಕಿಸಿ ಹೆಚ್.ಬಿ.ಆರ್ ಸಿಲ್ಕ್ಸ್, ಸಂಗಮ ಟ್ಯಾಕೀಸ್ ಹತ್ತಿರ, ಮೈಸೂರು
9845112221 / 9902961162

## SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

## ಬೇಕಾಗಿದ್ದಾರೆ
ತಮಿಳು ಮತ್ತು ತೆಲುಗು ಮಾತನಾಡಲು ಬರುವ Telecaller ಬೇಕಾಗಿದ್ದಾರೆ.
ಸಂಬಳ - 20000/-
8884304444

## ಬೇಕಾಗಿದ್ದಾರೆ
ಡ್ರೈವರ್ಸ್ ಬೇಕಾಗಿದ್ದಾರೆ
ಸಂಬಳ: 12,000
ಊಟ ತಿಂಡಿ ಸೌಲಭ್ಯವಿರುತ್ತದೆ (ಹೊರಗಡೆ ಹೋದರೆ ಬ್ಯಾಟ ಇರುತ್ತದೆ)
9972829153

## ಹಳೆಯ / Old
ಮಿಕ್ಸರ್‌ಗೆ ರೂ.1500
ಕುಕ್ಕರ್‌ಗೆ ರೂ.1500
ಗ್ಯಾಸ್‌ಸ್ಟೌವ್‌ಗೆ ರೂ.2500
ಹೊಸ ಬಟರ್‌ಫ್ಲೈ, ಬಜಾಜ್, ಪ್ರೆಸ್ಟೀಜ್ ಕಂಪನಿಗೆ ಬದಲಾಯಿಸಿ.
ಶ್ರೀವಿನಾಯಕ ಎಂಟರ್ ಪ್ರೈಸಸ್, ಪ್ರಗತಿ ಮೆಡಿಕಲ್ ಎದುರು, ಅಗ್ರಹಾರ, ಮೈಸೂರು.
ಮೊ.: 7204368222

## ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಮೊಬೈಲ್ ಅಂಗಡಿಯಲ್ಲಿ ಇರುವ ಮಾಲೀಕರು ಅಥವಾ ಹುಡುಗರು ಬೇಕಾಗಿದ್ದಾರೆ.
ನಿಮ್ಮ ಮೊಬೈಲ್ ಅಂಗಡಿಯಲ್ಲಿಯೇ ಪಾರ್ಟ್ ಟೈಂ ಕೆಲಸ ಮಾಡಬಹುದಾದ ಮಾಲೀಕರು ಅಥವಾ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ ಆಸಕ್ತಿಯುಳ್ಳವರು ನಿಮ್ಮ ಯಾವುದೇ ಸ್ಥಳದಿಂದ ಕರೆ ಮಾಡಿ.
9036991977

1ಲಕ್ಷಕ್ಕೆ ತಿಂಗಳಿಗೆ 3000ರೂ, ಬಡ್ಡಿ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು.
1ಲಕ್ಷಕ್ಕೆ ತಿಂಗಳಿಗೆ 3000ರೂ ಗಳನ್ನು ಬಡ್ಡಿ ಕೊಡಲಾಗುವುದು ಅದಕ್ಕೆ ಸೆಕ್ಯೂರಿಟಿಯಾಗಿ ಚಿನ್ನ ಕೊಡಲಾಗುವುದು, ಆಸಕ್ತಿಯುಳ್ಳವರು ಕರೆ ಮಾಡಿ, MNM ಗೋಲ್ಡ್ ಫೈನಾನ್ಸ್ ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು.
9036991977

ಒಂದು ಗ್ರಾಂಗೆ 5400ರೂ.
ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಬಿಡಿಸಿ ನಿಮ್ಮ ಆಭರಣದ ಪ್ಯೂರಿಟಿಗೆ ಒಂದು ಗ್ರಾಂಗೆ 5400ರೂ ಗಳಂತೆ ಖರೀದಿಸಿ ಉಳಿದ ಹಣ ಕೊಡಲಾಗುವುದು. ಹಾಗೂ 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಸಂಪರ್ಕಿಸಿ. MNM ಗೋಲ್ಡ್, ಅಶೋಕ ರಸ್ತೆ, ಮೈಸೂರು.
9036991977

## ಬೇಕಾಗಿದ್ದಾರೆ
ಆಫೀಸ್‌ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 12000/-
Ph.9380142144
ಶಿವರಾಂಪೇಟೆ, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಮನೆಯಿಂದಲೇ ಸರಳವಾದ ಕೈ ಬರವಣಿಗೆಯ ಮೂಲಕ ಫಾರಂ ಫಿಲ್ಲಿಂಗ್ ಮತ್ತು ಡಾಟಾ ಎಂಟ್ರಿ ಮಾಡಿ ಸುಲಭವಾಗಿ ಪ್ರತಿವಾರ ಮತ್ತು ಪ್ರತಿ ತಿಂಗಳು ಕೈ ತುಂಬಾ ಹಣಗಳಿಸಿ.
ಸಂಪರ್ಕಿಸಿರಿ
7624918246 / 7259848246

## ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

## COMMERCIAL SITE FOR SALE
At R.S Naidu Nagar (Kesare) 50x80, 80x100 Sqft., Residential Sites, Houses also for sale, 30x40,40x60,50x80
Contact Agent Murthy
9341772517

## ಅಂಗಡಿ ಮಳಿಗೆ ಬಾಡಿಗೆಗೆ
G/F - 230, F/F 350 Sq. Ft, S/F 360 Sq.ft
ಮಳಿಗೆಯು ಕೆ.ಆರ್.ಸರ್ಕಲ್‌ನಲ್ಲಿ ಸಿಂಹ ಸಿಲ್ಕ್ ಪಕ್ಕದಲ್ಲಿ ಬಾಡಿಗೆಗೆ ಇದೆ. ವಿವರಗಳಿಗೆ ಸಂಪರ್ಕಿಸಿ:
9742173456

## ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಕಾರ್ಖಾನೆಯಲ್ಲಿ ಕೆಲಸ ಮಾಡಲು CNC Operators, and Mechanical Maintenance, and Quality Inspector ತಕ್ಷಣ ಬೇಕಾಗಿದ್ದಾರೆ
8553934317 / 8660196479

## IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

## GEM SELECTIONS
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

solarizer

HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

## FOR SALE
43,680 sqft., Alienated Land, 4.5 km from Srirampura Ring Road on Mysore-HD Kote Highway, near Mount Litera School, Ideal for Petrol bunk/ commercial/residential purposes.
Contact: 7795862235

## ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ
ಡಿಟಿಪಿ ಆಪರೇಟರ್‌ಗಳು ಮತ್ತು ಡಿಸೈನರ್‌ಗಳು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಮೊದಲ ಆದ್ಯತೆ
ಮೊ : 9449853308

## ಬೇಕಾಗಿದ್ದಾರೆ
ಕುಶಾಲನಗರದ ಬಾರ್ ಮತ್ತು ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವೈಟರ್, ಸರ್ವಿಸ್ ಸ್ಟಾಫ್, ಕುಕ್ ಬೇಕಾಗಿದ್ದಾರೆ ತಕ್ಷಣವೇ ಸಂಪರ್ಕಿಸುವುದು
7349477338

## ಸೈಟು ಮಾರಾಟಕ್ಕಿದೆ
ಪೂರ್ವ ದಿಕ್ಕಿನ, 40x60, 40 ಅಡಿ ರಸ್ತೆ, ಶ್ರೀನಗರ, 'ಡಿ' ಬ್ಲಾಕ್,
Good Location
ಡಿ.ಡಿ.ರಿಯಲ್ ಎಸ್ಟೇಟ್
9343361444

## ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

## ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

## ಲಕ್ಕಿ ಡಿಪ್ ಡ್ರಾ ಫಲಿತಾಂಶ
ಶ್ರೀ ಕಾವಾಡಿ ಚಾವಡಿ ಕೋಟಿ ದೇವಸ್ಥಾನ(ರಿ) ಕಾವಾಡಿ, ಅಮ್ಮತಿ
ದೇವಸ್ಥಾನ ಪುನರ್ ನಿರ್ಮಾಣ ಕಾರ್ಯಕ್ಕೆ ಸಹಾಯಾರ್ಥ ಲಕ್ಕಿ ಡಿಪ್ ಡ್ರಾ ಫಲಿತಾಂಶ
1ನೇ ಬಹುಮಾನ–7800
2ನೇ ಬಹುಮಾನ–3923
3ನೇ ಬಹುಮಾನ–8547
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ,
ಮೊ: 99000–83756

We provide healthy., hygienic home made South Indian food for yoga, PG & aged people in & around Vijayanagar 1st stage. Break fast, lunch & dinner will be provided. We take maximum of 30 members of order for any function. Contact:
8618628370/9741796756

## COMMERCIAL SITE SALE
40x60,
Srirampura, H.D. Kote Main Road,
Mob: 8792207164
8050821108

ನಲ್ಲಿ ಕೆಲಸ ಮಾಡಿಕೊಡಲಾಗುವುದು ಸ್ಯಾನಿಟರಿ ಕೆಲಸ, ಬಾತ್ ರೂಂ, ಆ್ಯಸಿಡ್ ವಾಶ್ ಮಾಡಿ ಕೊಡಲಾಗುವುದು
7829236625

## ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (Cold Pressed) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು–570015
8088887802

## ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಸಂಬಳ: 14000 ರಿಂದ 16000 (ESI, PF ಸೌಲಭ್ಯ ಇರುತ್ತದೆ)
8050699742

## ಬೇಕಾಗಿದ್ದಾರೆ
1) ಫೀಲ್ಡ್ ಆಫೀಸರ್ – ಇಬ್ಬರು (ದ್ವಿಚಕ್ರ ಹಾಗೂ ಸೆಕ್ಯೂರಿಟಿ ಅನುಭವವಿರ ಬೇಕು)
2) ಹೌಸ್ ಕೀಪರ್ (ಮಹಿಳೆಯರು ಮಾತ್ರ) (ಮೇಟಗಳ್ಳಿ ಸುತ್ತಮುತ್ತ ವಾಸಸ್ಥರು)
3) ಸೆಕ್ಯೂರಿಟಿ ಗಾರ್ಡ್‌ಗಳು (ಮೈಸೂರುಸುತ್ತಮುತ್ತ ಕಾರ್ಯ ನಿರ್ವಹಿಸಲು)
ಸಂಪರ್ಕಿಸಿ: ಸುರಕ್ಷವಲ್
9686422400 / 9686566261

## ಮನೆ ಮಾರಾಟಕ್ಕೆ & ಭೋಗ್ಯಕ್ಕೆ
17 1/2 ಅಗಲ 48 ಉದ್ದ ದಕ್ಷಿಣ – ಉತ್ತರ ರಸ್ತೆ, ಪುಲಿಕೇಶಿ ರಸ್ತೆ, ತಿಲಕ್‌ನಗರ, ಮೈಸೂರು.
30x50 ರಲ್ಲಿ ಕಟ್ಟಿರುವ 4 ಮನೆಗಳು ಪಶ್ಚಿಮ ದಿಕ್ಕು ಬಾಗಿಲುಗಳು ದಕ್ಷಿಣ ದಿಕ್ಕು ಉತ್ತನಹಳ್ಳಿ, ಮೈಸೂರು
9341158479

## WANTED
CIVIL ENGINEER
(BE/Diploma only Male)
Min exp. 2-3yrs
Kindly send us your CV @ acpltd123@gmail.com
Contact No.
7760135606 / 7337888386 / WhatsApp (10am - 6.30pm)

## REKHA'S SALON & MAKEUP STUDIO
Required Ladies Saloon Service Person
Min 1 to 2 yrs experience, Quick Joining, will get great benefits
J.P. Nagar, Goblimara Stop,
Timing 10.30 to 7pm.
Contact: 9900745780
Great Opportunity, Don't Miss It

## ಬೇಕಾಗಿದ್ದಾರೆ
ಮೈಸೂರು, ಕೊಡಗು, ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು ಬೇಕಾಗಿದ್ದಾರೆ.
1) ಡೆಲಿವರಿ ಬಾಯ್, 10,000/–
2) ಹೆವಿ ಡ್ರೈವರ್: 17,000/–
9740408488

## ತಕ್ಷಣ ಬೇಕಾಗಿದ್ದಾರೆ
KRS Road ಮೇಟಗಳ್ಳಿ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಮತ್ತು ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: S/ Sup 16,500/–8hours, S/Guard 15,500/– 8hours, ವಯೋಮಿತಿ : 45 ವರ್ಷದ ಒಳಗೆ, ESI ಮತ್ತು PF ಊಟ ತಿಂಡಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

## ತಕ್ಷಣ ಸಂಪರ್ಕಿಸಿ
ಮೈಸೂರಿನ ಕೈಗಾರಿಕ ಕಂಪನಿಗಳಿಗೆ, ಆಫೀಸ್‌ಗಳಿಗೆ 7th, SSLC, PUC, ITI, Diploma, Any Degree Pass / Fail ಆದ ಯುವಕ / ಯುವತಿಯರಿಗೆ Cashier, Billing, Data Entry, Team Leader ಮತ್ತು ಪ್ಯಾಕಿಂಗ್, ಹೆಲ್ಪರ್, Productions, Maintance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14000–39000 (ESI+PF+OT) ಸೇರಿ. ಸಂಪರ್ಕಿಸಿ.
9980630131 / 9980692151

## ಕೇರ್ ಟೇಕರ್ ಕೆಲಸಕ್ಕೆ ಬೇಕಾಗಿದ್ದಾರೆ
10th, PUC, Any Degree, ANM, GNM-GDA ಹೊಂದಿರುವ ಹುಡುಗ – ಹುಡುಗಿಯರು ಹಾಗೂ ಮಹಿಳೆಯರು & ಪುರುಷರು ತಕ್ಷಣ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಆಕರ್ಷಕ ಸಂಬಳವಿರುತ್ತದೆ. ಅನುಭವವುಳ್ಳವರು ತಕ್ಷಣ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಬೆಸ್ಟ್ ಹೋಂ ಕೇರ್
9886023235

## ಬೇಕಾಗಿದ್ದಾರೆ
TV ವಾಷಿಂಗ್ ಮೆಷಿನ್, ಫ್ರಿಡ್ಜ್ ಟೆಕ್ನಿಷಿಯನ್ ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಗ್ರೇಸ್ ಮಲ್ಟಿ ಬ್ರಾಂಡ್ ಸರ್ವೀಸಸ್
9686407955

## SITES FOR SALE
20 x 30 - 12 Lakhs
30 x 40 - 24 Lakhs
Bank Loan upto 75%, Ready for Registration near Ramabainagar,Gurur Bus Stop, Mysore, DTCP approved,
1.5 Kms from JP Nagar Ring Road
8660105902

## HOUSE AND SITE SALE MYSORE
1) 50x80 site est Akbws Kechalagudu Brahmines only 1100 sft., rate 2)35x60 site semi commercial 4500 p/sft., N/W corner Vijayanagara 4th stage 3)House sale 2BHK 68L, 80L 3 BHK 90L 4) 20x30 3BHK Duplex 72L,74L, 75L Vijayanagara 4th stage Mysore
Contact MMP:
8453771295 / 9449403021

## ತಕ್ಷಣ ಬೇಕಾಗಿದ್ದಾರೆ
ಕಡಕೊಳ, ತಾಂಡ್ಯ ಇಂಡಸ್ಟ್ರಿಯಲ್ ಮತ್ತು TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, ಸಂಬಳ: 15,500/–, ವಯೋಮಿತಿ : 50 ವರ್ಷದ ಒಳಗೆ, ESI ಮತ್ತು PF ಊಟ ತಿಂಡಿ ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9620667819

## ತಕ್ಷಣ ಬೇಕಾಗಿದ್ದಾರೆ
Hotel / Lodge ನಲ್ಲಿ ಕೆಲಸ ಮಾಡಲು ಅನುಭವವುಳ್ಳ
Supervisor
House Keeping
Experience 2-5 Years
9243536373

## ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡಿವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಬಾಧೆ, ದುಷ್ಟಶಕ್ತಿ, ಇಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ, ನಂಬಿ ಬನ್ನಿ. ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೇಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

## ಬೇಕಾಗಿದ್ದಾರೆ
Innova ಕಾರಿಗೆ ಡ್ರೈವರ್ ಬೆಂಗಳೂರು ನಗರ ತಿಳಿದಿರಬೇಕು (Salary 15000 & ಇತರೆ allowances)
9900038364

## ಜಮೀನು ಮಾರಾಟಕ್ಕಿದೆ
ಮೈಸೂರು ತಾ., ಜಯಪುರ ಹೋಬಳಿ, ಹಾರೋಹಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ 14 ಗುಂಟೆ. ಅದೇ ಗ್ರಾಮದಲ್ಲಿ 1 ಎಕರೆ 22 ಗುಂಟೆ ಜಮೀನು ಪೂರ್ಣ ಅಭಿವೃದ್ಧಿಪಡಿಸಲಾಗಿದೆ. ಗೇಟ್ ಕಾಂಪೌಂಡ್ ಅಳವಡಿಸಿದೆ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ.
7975110748 / 9945661696

## WANTED
Direct Sales Officers & Marketing Officers- 45 Nos
Any qualification is ok
Salary+Incentives, Freshers also welcome
SAVENSA BUSINESS SOLUTIONS PVT LTD
No. 527/486, Pooja Complex, 2nd Floor, Dr. Rajkumar Road, Yaraganahalli, above Muthoot Finance, Mysore-19
Hurry ! Call 9986316666

## WANTED
FEMALE EXPERIENCED OFFICE ASSISTANT
Fluency in English
Salary-150000 - to 20000/-
SMART HAIR FIXING
Anikethana Road, Kuvempunagar
Contact: 8792945515

## ಬೇಕಾಗಿದ್ದಾರೆ
ಮೈಸೂರಿನಲ್ಲಿ ಹೊಸದಾಗಿ ಆರಂಭವಾಗಿರುವ ಕಂಪನಿಯಲ್ಲಿ ಟೆಲಿಕಾಲಿಂಗ್ ಮಾಡಲು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, PUC, Diploma, Any Degree, ವಯೋಮಿತಿ: 18 ರಿಂದ 28 ವರ್ಷದ ಒಳಗೆ. ಸಂಬಳ: 7000 to 12000 (ಉಚಿತ ವಸತಿ)
7899369558 / 7338009488

## ಉದ್ಯೋಗವಕಾಶ
ಆಫೀಸರ್ಸ್ ಹುದ್ದೆಗೆ ಪ್ರಖ್ಯಾತ ಬ್ಯಾಂಕ್ ಕಂಪನಿಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿಶೇಷವಾಗಿ ನಿವೃತ್ತಿ ಅಧಿಕಾರಿಗಳಿಗೆ, ಗೃಹಣಿಯರಿಗೆ, ಉದ್ಯಮದಾರರಿಗೆ, ವಿದ್ಯಾವಂತರಿಗೆ ಸುವರ್ಣವಕಾಶ age 35 & above with fixed Salary + PF+ Incentives for Registration Contact:
9513395132

## ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಐದು ವರ್ಷದಿಂದ ಕಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.
9663466548

## WANTED
Female Office Asst. @ Sarawathipuram, Kamakshi Hospital Road, (opp. Kuvempu School Mysore.)
9342125252

## ಮೈಸೂರು ಮ್ಯಾರೇಜ್ ಲಿಂಕ್ಸ್
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಫೋಟೋ & ಬಯೋಡೇಟಾ ವಾಟ್ಸಾಪ್ ಮಾಡಿರಿ.
ಡಾ.ಗುರೂಜಿ ಮೈಸೂರು
6361740552

## ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

# ಪ್ರಭುತ್ವವೇ ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯ ನಡೆಸುತ್ತಿದೆ

## ಭಾರತೀಯರ ಭಾವೈಕ್ಯತೆ ಸಾಮರಸ್ಯದ ಸಂಕಲ್ಪ ದಿನ ಕಾರ್ಯಕ್ರಮದಲ್ಲಿ ಶಾಸಕ ಡಾ.ಯತೀಂದ್ರ ಆರೋಪ

ತಿ.ನರಸೀಪುರ ಏ.17(ಎಸ್‌ಕೆ)– ಪ್ರಭುತ್ವವೇ ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯ ನಡೆಸುತ್ತಿದ್ದು, ಈ ದೌರ್ಜನ್ಯ ತಡೆಗಟ್ಟದಿದ್ದರೆ ಮುಸ್ಲಿಮರ ನಂತರ ದಲಿತರು ಹಾಗೂ ಹಿಂದುಳಿದ ವರ್ಗಗಳ ಜನರೇ ಬಿಜೆಪಿಯ ಮುಂದಿನ ಟಾರ್ಗೆಟ್ ಆಗಲಿದ್ದಾರೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಎಚ್ಚರಿಸಿದರು.

ಪಟ್ಟಣದ ಎಂ.ಮರೀಗೌಡ ಸ್ಮಾರಕ ಸಮುದಾಯ ಭವನದಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಭಾರತೀಯರ ಭಾವೈಕ್ಯತೆಯ ಸಾಮರಸ್ಯದ ಸಂಕಲ್ಪ ದಿನ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಆರ್ಥಿಕ ವ್ಯವಸ್ಥೆ ಕುಸಿದು ಹೋಗಿದ್ದು, ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಆಡಳಿತರೂಢ ಬಿಜೆಪಿ ಸರ್ಕಾರ ಆಂತರಿಕವಾಗಿ ಧರ್ಮ ಸಂಘರ್ಷ ಸೃಷ್ಟಿಸಲು ಮುಸ್ಲಿಮರನ್ನು ಬೆದರುಗೊಂಬೆಗಳನ್ನಾಗಿ ಮಾಡಲಾಗಿದೆ ಎಂದು ಆರೋಪಿಸಿದರು.

ಬೆಲೆ ಏರಿಕೆಯಿಂದ ಜನರು ತತ್ತರಿಸಿ ಹೋಗಿದ್ದಾರೆ. ನಿರುದ್ಯೋಗ ಹಾಗೂ ಹಸಿವಿನ ಪ್ರಮಾಣ ಏರಿಕೆಯಾಗುತ್ತಿದೆ. ಇಷ್ಟೊಂದು ಸಮಸ್ಯೆಗಳು ಭೀಕರವಾಗುತ್ತಿದ್ದರೂ, ಬಿಜೆಪಿ ಸರ್ಕಾರ ಬಂಡವಾಳ ಶಾಹಿಗಳ ಜೇಬು ತುಂಬಿಸುತ್ತಿದೆ. ಅಧಿಕಾರ ಭದ್ರಪಡಿಸಿಕೊಳ್ಳಲು ಧರ್ಮ ಉಳಿಸುವ ನೆಪದಲ್ಲಿ ಕೋಮು ಸೌಹಾರ್ದತೆ



ಕದಡಲಾಗುತ್ತಿದೆ ಎಂದು ಹರಿಹಾಯ್ದರು.

ರಾಜ್ಯ ಸೇರಿದಂತೆ ದೇಶಾದ್ಯಂತ ಹರಡುತ್ತಿರುವ ಅಪಾಯಕಾರಿ ಹಿಂದುತ್ವದ ವಿರುದ್ಧ ದಸಂಸ ಬಲವಾದ ಹೋರಾಟ ರೂಪಿಸಬೇಕು. ಇಂತಹ ವಿಚಾರದಲ್ಲಿ ಹೋರಾಡಲು ರಾಜಕೀಯ ಪಕ್ಷಗಳಿಗೆ ಮತದ ಭಯ ಇದೆ. ಆದರೆ ದಸಂಸ ಹೋರಾಟಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಾಕಿಕೊಟ್ಟ ಮೇಲ್ಪಂಕ್ತಿಯಿದೆ ಎಂದು ಕರೆ ನೀಡಿದ ಡಾ.ಯತೀಂದ್ರ ಸಿದ್ದರಾಮಯ್ಯ ಆಡಳಿತಶಾಹಿಗಳು ಹಕ್ಕುಗಳನ್ನು ಕಸಿದುಕೊಳ್ಳುವ ಮುನ್ನವೇ ಅಹಿಂದ ವರ್ಗಗಳು ಒಗ್ಗೂಡಬೇಕು. ಕೋಮು ಸೌಹಾರ್ದತೆ ಬೆಸೆಯಲು ಭಾರತೀಯರ ಭಾವೈಕ್ಯತೆಯ ಸಾಮರಸ್ಯದ ಸಂಕಲ್ಪ ದಿನ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಬೆಳವಣಿಗೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಶಾಸಕ ಎಂ.ಅಶ್ವಿನ್ ಕುಮಾರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಮುಖ್ಯ ಭಾಷಣಕಾರ ಸಾಹಿತಿ ಮಹದೇವಸ್ವಾಮಿ ಅಂಬೇಡ್ಕರ್ ಅವರ ಸುದೀರ್ಘ ಹೋರಾಟ ಹಾಗೂ ಚಿಂತನೆಗಳ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು.

ಅಧ್ಯಕ್ಷತೆ ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ಶಿವಕುಮಾರ್ ಆಡಳಿತರೂಢ ಬಿಜೆಪಿ ಸರ್ಕಾರಗಳ ಸಂವಿಧಾನವನ್ನು ದುರ್ಬಲಗೊಳಿಸುವ ಹುನ್ನಾರದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ತಾಲೂಕು ಸಂಚಾಲಕ ರಾಜು ಗಣ್ಯ ರನ್ನು ಸ್ವಾಗತಿಸಿದರೆ, ಸೋಮಶೇಖರ್ ನಿರೂಪಿಸಿದರು. ಕಾರ್ಯಕ್ರಮಕ್ಕೂ ಮೊದಲು ತಾಲೂಕು ಕಚೇರಿ ಆವರಣಕ್ಕೆ ಮೆರವಣಿಗೆಯಲ್ಲಿ ತೆರಳಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಬಾಲಯೇಸು ಚರ್ಚ್ ಧರ್ಮಗುರು ಫಾ.ವಿಜೇತ ಮಾರ್ಟಿನ್, ಎನ್‌ಕೆಎಫ್ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷ ಎನ್.ಕೆ.ಫರೀದ್, ರೈತ ಸಂಘದ ನೈಸರ್ಗಿಕ ಕೃಷಿ ವಿಭಾಗದ ರಾಜ್ಯಾಧ್ಯಕ್ಷ ಕೃಷ್ಣಪ್ಪ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಪುರಸಭೆ ಅಧ್ಯಕ್ಷ ಮದನ್ ರಾಜ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಬಿ.ಮರಯ್ಯ, ಪುರಸಭೆ ಸದಸ್ಯರಾದ ಸಿ.ಪ್ರಕಾಶ್, ಎನ್.ಸೋಮು, ಬಾದಾಮಿ ಮಂಜು, ಸೇವಾಶ್ರಯ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಆರ್.ಮಣಿಕಂಠರಾಜ್‌ಗೌಡ, ರೈತ ಸಂಘದ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಮಡಿವಾಳರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ನಯನಜ ಕ್ಷತ್ರಿಯರ ಸಂಘದ ಅಧ್ಯಕ್ಷ ನಾಗೇಂದ್ರ, ಕಾಡಾದ ಮಾಜಿ ನಿರ್ದೇಶಕ ವೀರೇಂದ್ರ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಲತಾ, ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಅಣ್ಣಯ್ಯ ಸ್ವಾಮಿ, ಮಾಜಿ ಸದಸ್ಯ ಹೇಮಂತ್ ಕುಮಾರ್, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ಸ್ಫಟಿಕ ವಿವಿಧೋದ್ದೇಶ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಕುಮಾರ್, ಮುಖಂಡರಾದ ರಾಜಣ್ಣ, ಮಹಮ್ಮದ್ ಹುಸೇನ್, ಬಿ.ಮನ್ಸೂರ್ ಆಲಿ, ಶಾಂತರಾಜು, ದಸಂಸ ತಾಲೂಕು ಸಂಚಾಲಕ ರಾಜು, ಸೋಮಶೇಖರ್, ಬಸವರಾಜು, ರಜನಿ, ದಿನೇಶ, ಸೋಮಣ್ಣ, ಕುಮಾರ್, ಮರಿಸಿದ್ಧಯ್ಯ ಇನ್ನಿತರರಿದ್ದರು.

## ಇಂದು ಆರೋಗ್ಯ ಮೇಳ

ಕೆ.ಆರ್.ನಗರ, ಏ.17(ಕೆಟಿಆರ್)– ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿ ಆರೋಗ್ಯ ಕಾರ್ಡ್ ವಿತರಣೆ ಹಾಗೂ ತಾಲೂಕು ಮಟ್ಟದ ಆರೋಗ್ಯ ಮೇಳವನ್ನು ಏ.18 ರಂದು ಆಯೋಜಿಸಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಂದ್ರಪ್ಪ ತಿಳಿಸಿದರು.

ಆರೋಗ್ಯ ಮೇಳದಲ್ಲಿ ಜನರಲ್ ಮೆಡಿಸಿನ್, ತಾಯಿ ಮಕ್ಕಳ ಆರೈಕೆ, ಸ್ತ್ರೀ ರೋಗ ತಜ್ಞರಿಂದ ಕುಟುಂಬ ಯೋಜನೆ ಸಮಾಲೋಚನೆ, ಕುಟುಂಬ ಕಲ್ಯಾಣ, ಕಣ್ಣಿನ ತಪಾಸಣೆ, ಕಿವಿ ತಪಾಸಣೆ, ದಂತ ತಪಾಸಣೆ, ಮಧುಮೇಹ ತಪಾಸಣೆ, ಅಧಿಕ ರಕ್ತದೊತ್ತಡ, ಗರ್ಭ ಕೋಶದ, ಬಾಯಿ ಮತ್ತು ಸ್ತನ ಕ್ಯಾನ್ಸರ್‌ಗೆ ಸ್ಕಿನ್ ಇನ್ ಕೌಂಟರ್, ಆಯುರ್ವೇದ ಚಿಕಿತ್ಸಾ ವಿಭಾಗ, ಯೋಗ ಮತ್ತು ಧ್ಯಾನ ಕೌಂಟರ್, ಧೂಮಪಾನ ಮತ್ತು ತಂಬಾಕು ಸೇವನೆಯಿಂದ ಬಗ್ಗೆ ಆಪ್ತ ಸಮಾಲೋಚನೆ, ಕ್ಯಾನ್ಸರ್ ನಿಯಂತ್ರಣ ಜಾಗೃತಿ ಸೇರಿದಂತೆ ಅನೇಕ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

## ಹುಣಸೂರಲ್ಲಿ ಪತ್ರಕರ್ತನ ಅನುಮಾನಾಸ್ಪದ ಸಾವು

### ಕೊಲೆ ಪ್ರಕರಣ ದಾಖಲು

ಹುಣಸೂರು, ಏ.17(ಕೆಕೆ)– ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪತ್ರಕರ್ತನೋರ್ವ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ನಡೆದಿದೆ.

ಪಿರಿಯಾಪಟ್ಟಣದ ವಾರ ಪತ್ರಿಕೆಯೊಂದರ ವರದಿಗಾರ ಹಾಗೂ ಹುಣಸೂರು ನಿವಾಸಿ ಸಿ.ಎಲ್.ಸ್ವಾಮಿ (42) ಅನುಮಾನಾಸ್ಪದವಾಗಿ ಸಾವಿಗೀಡಾದ ಪತ್ರಕರ್ತ. ನಗರದ ಹೊರವಲಯದ ಹಾಲಗೆರೆ ಸಮೀಪದ ಮೂರೂರಮ್ಮ ದೇವಾಲಯದ ರಾಷ್ಟ್ರೀಯ ಹೆದ್ದಾರಿ ಬಳಿ ಶನಿವಾರ ರಾತ್ರಿ 7.30ರಲ್ಲಿ ಈತನ ಶವ ಪತ್ತೆಯಾಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ರವಿ ಮತ್ತು ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಸ್ಥಳದಲ್ಲಿ ದೊರೆತ ಬೈಕ್‌ನ ಗ್ಲಾಸ್ ಚೂರುಗಳನ್ನು ವಶಕ್ಕೆ ಪಡೆದು ಅಪಘಾತದಿಂದ ಈ ಘಟನೆ ಸಂಭವಿಸಿರಬಹುದು ಎಂದು ಭಾವಿಸಿ ಪ್ರಕರಣ ದಾಖಲಿಸಿಕೊಂಡು ಘಟನೆಗೆ ಸಂಬಂಧಿಸಿದಂತೆ (ಕೆಎ.45, ಇಸಿ.2563) ಬೈಕ್ ಅನ್ನು ವಶಕ್ಕೆ ಪಡೆದಿದ್ದಾರೆ.



**ದಸಂಸ ಪ್ರತಿಭಟನೆ:** ಆದರೆ ಮೃತ ಸ್ವಾಮಿ ಕುತ್ತಿಗೆ ಸೀಳಿರುವುದನ್ನು ಗಮನಿಸಿದ ಕುಟುಂಬಸ್ಥರು ಮತ್ತು ದಸಂಸ ಸಂಘಟನೆ ಕಾರ್ಯಕರ್ತರು ಇದು ಅಪಘಾತವಲ್ಲ. ಯಾರೋ ದುಷ್ಕರ್ಮಿಗಳು ಸ್ವಾಮಿ ಅವರನ್ನು ಅಪಹರಿಸಿ ನಗರದ ಹೊರವಲಯಕ್ಕೆ ಕರೆದೊಯ್ದು ಕತ್ತನ್ನು ಸೀಳಿ ಕೊಲೆ ಮಾಡಿದ್ದಾರೆ. ಪ್ರಕರಣ ಮುಚ್ಚಿ ಹಾಕಲು ಪೊಲೀಸರು ತಂತ್ರಗಾರಿಕೆ ಮಾಡುತ್ತಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಬರಬೇಕು ಎಂದು ಠಾಣೆ ಎದುರು ಪ್ರತಿಭಟನೆ ನಡೆಸಿದರು. 2 ದಿನಗಳ ಹಿಂದೆ ನಗರದ ಕಲ್ಪತರು ಹೋಟೆಲ್ ಎದುರು ಸ್ವಾಮಿ ಬಟ್ಟೆ ಬಿಚ್ಚಿ ಹಲ್ಲೆ ನಡೆಸಲಾಗಿದೆ. ಈತ ಪತ್ರಕರ್ತನಾಗಿದ್ದು, ಹಲವರ ವಿರೋಧ ಸಹ ಇತ್ತು. ಈ ಎಲ್ಲಾ ವೈಷಮ್ಯಗಳಿಂದ ಯಾರೋ ದುಷ್ಕರ್ಮಿಗಳು ಶನಿವಾರ ರಾತ್ರಿ ಆಟೋದಲ್ಲಿ ಅವರನ್ನು ನಗರದ ಹೊರವಲಯಕ್ಕೆ ಕರೆದೊಯ್ದು ಹತ್ಯೆ ಮಾಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ಮೃತನ ಕುಟುಂಬಕ್ಕೆ ನ್ಯಾಯ ಸಿಗಬೇಕು ಅಲ್ಲಿಯ ವರೆಗೆ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ಪ್ರತಿಭಟನಾ ಸ್ಥಳದಲ್ಲಿ ಮೃತ ಸ್ವಾಮಿ ಪತ್ನಿ ಭಾಗ್ಯ, ಬೆಂಗಳೂರಿನಲ್ಲಿ ಎಂಬಿಎ ಓದುತ್ತಿರುವ ಪುತ್ರ ಸುಭಾಷ್, ಮಂಗಳೂರಿನಲ್ಲಿ ನರ್ಸಿಂಗ್ ಮಾಡುತ್ತಿರುವ ಮಗಳು ಪೂರ್ಣಿಮಾ ಹಾಗೂ ಕುಟುಂಬಸ್ಥರು ಹಾಜರಿದ್ದು, ನಮಗೆ ನ್ಯಾಯ ಒದಗಿಸಿ ಕೊಡಿ ಎಂದು ಅಂಗಲಾಚಿ ರೋಧಿಸುತ್ತಿದ್ದರು.

ದಸಂಸ ಮುಖಂಡ ಆನಂದ ಸ್ವಾಮಿ ಮಾತನಾಡಿ, ಪತ್ರಕರ್ತ ಸಿ.ಎಲ್.ಸ್ವಾಮಿ ಸಾವು ಅಪಘಾತವಲ್ಲ. ಈತನನ್ನು ಯಾರೋ ದುಷ್ಕರ್ಮಿಗಳು ಕತ್ತನ್ನು ಸೀಳಿ ಕೊಲೆ ಮಾಡಿದ್ದಾರೆ. ಸಮಗ್ರ ತನಿಖೆ ನಡೆಸಿ ಸತ್ಯಾಂಶ ಬೆಳಕಿಗೆ ತರಬೇಕಾಗಿದೆ ಎಂದರು. ದಸಂಸ ಜಿಲಾ ಸಂಚಾಲಕ ಪುಟ್ಟಸ್ವಾಮಿ ಮಾತನಾಡಿ, ದಲಿತ ಪತ್ರಕರ್ತ ಸಿ.ಎಲ್.ಸ್ವಾಮಿ ಸಾವಿನ ಪ್ರಕರಣ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದರು.

ಪ್ರತಿಭಟನೆಯಲ್ಲಿ ಬಸವಲಿಂಗಯ್ಯ, ಸ್ವಾಮಿ, ವಕೀಲ ಪುಟ್ಟರಾಜು, ಶಿವಶೇಖರ, ರಾಮಕೃಷ್ಣ, ನಾಗರಾಜು, ಗೊವಿಂದರಾಜು, ಅಪ್ಪಣ್ಣ, ಸೇರಿದಂತೆ ನೂರಾರು ದಸಂಸ ಕಾರ್ಯಕರ್ತರು ಮತ್ತು ಕುಟುಂಬಸ್ಥರು ಹಾಜರಿದ್ದರು.

**ಎಸ್‌ಪಿ ಭೇಟಿ:** ಪತ್ರಕರ್ತನ ಅನುಮಾನಾಸ್ಪದ ಸಾವಿನ ವಿಷಯ ತಿಳಿದ ಎಸ್‌ಪಿ ಚೇತನ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಶವಾಗಾರಕ್ಕೆ ಭೇಟಿ ನೀಡಿ ಮೃತ ದೇಹವನ್ನು ಪರಿಶೀಲಿಸಿ ಪ್ರತಿಭಟನಾ ಸ್ಥಳಕ್ಕೆ ಬಂದು ನಿಮ್ಮ ಮನವಿ ಮತ್ತು ದೂರನ್ನು ಪರಿಶೀಲನೆ ಮಾಡಿ ತನಿಖೆ ಮಾಡಿಸುತ್ತೇನೆ ಎಂದು ಭರವಸೆ ನೀಡಿದರು. ಈ ಸಂಬಂಧ ಪೊಲೀಸರು ಎಸ್‌ಪಿಯವರ ಸೂಚನೆ ಮೇರೆಗೆ ಪ್ರಕರಣ ಸಂಖ್ಯೆ:73/2022 ಐಪಿಸಿ 302 ಕಾಯಿದೆ ಅನ್ವಯ ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ ಹಾಗೂ ಮೃತ ದೇಹವನ್ನು ಶವ ಪರೀಕ್ಷೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳುಹಿಸಲಾಗಿದೆ.

## ಆದಿ ಕರ್ನಾಟಕ ಸಮಾಜದಿಂದ ಅಂಬೇಡ್ಕರ್ ಜಯಂತಿ



ಸರಗೂರು, ಏ.17(ನಾಗೇಶ್)– ಪಟ್ಟಣದ ಆದಿ ಕರ್ನಾಟಕ ಸಮಾಜದಿಂದ ಭಾನುವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ 4ನೇ ವಾರ್ಡ್‌ನ ಅಂಬೇಡ್ಕರ್ ಸಮುದಾಯ ಭವನದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಅಂಬೇಡ್ಕರ್ ಪುತ್ಥಳಿ ಹೊತ್ತ ರಥಕ್ಕೆ ಚಾಲನೆ ನೀಡಲಾಯಿತು. ಸಮುದಾಯ ಭವನದಿಂದ ಹೊರಟ ಜಾಥಾ ಹುಣಸೂರು–ಬೇಗೂರು ರಸ್ತೆ ಮೂಲಕ ಸಂಚರಿಸಿ, ಪಟ್ಟಣದ ಬಸ್ ನಿಲ್ದಾಣ ತಲುಪಿ ನಂತರ ಅದೇ ಮಾರ್ಗವಾಗಿ ಸಮುದಾಯ ಭವನದಲ್ಲಿ ಕೊನೆಗೊಂಡಿತು. ಜಾಥಾ ಹೊರಟ ಮಾರ್ಗ ಮಧ್ಯೆ ಯುವಕರು ಅಂಬೇಡ್ಕರ್ ಹಾಡುಗಳನ್ನು ಹೇಳಿ ನೃತ್ಯ ಪ್ರದರ್ಶಿಸಿದರು. ಮಂಗಳ ವಾದ್ಯ, ಸತ್ತಿಗೆಂಯು ಮೆರವಣಿಗೆಯಲ್ಲಿ ಸಾಗಿತ್ತು.

ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಡಾ.ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಆ ಮೂಲಕ ಎಲ್ಲರೂ ಸಂಘಟನೆ, ಹೋರಾಟ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಪಪಂ ಸದಸ್ಯ ಎಸ್.ಎಲ್.ರಾಜಣ್ಣ, ಶ್ರೀನಿವಾಸ್, ಮಾಜಿ ಅಧ್ಯಕ್ಷ ಶಿವಣ್ಣ, ಆದಿ ಕರ್ನಾಟಕ ಸಮಾಜದ ಯಜಮಾನರಾದ ಕೃಷ್ಣ, ಭೈರಲಿಂಗಯ್ಯ, ಚಿಕ್ಕ ಯಜಮಾನ ಕೃಷ್ಣ, ಮಾಜಿ ಯಜಮಾನ ಕೃಷ್ಣ, ಭೀಮಯ್ಯ, ಈದಿಯಪ್ಪ, ಹನುಮಂತಯ್ಯ, ಕೃಷ್ಣದಾಸಿ, ಭೋಗಯ್ಯ, ಕೃಷ್ಣ, ಸುಬ್ರಹ್ಮಣ್ಯ, ಗೋಪಾಲ್, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಕೃಷ್ಣಯ್ಯ, ಬಿಲ್ಲೇಶ್, ಶಿವಶಂಕರ್, ದೇವಣ್ಣ, ರಂಗಯ್ಯ, ಕೃಷ್ಣ ಭೋಗಪ್ಪ, ಶಿವಣ್ಣ, ರಾಜಣ್ಣ, ಕೃಷ್ಣಮೂರ್ತಿ, ಪರಶಿವಮೂರ್ತಿ, ನಾಗರಾಜು ಇನ್ನಿತರರಿದ್ದರು.

## ಶ್ರೀರಾಂಪುರ ಬಡಾವಣೆಯಲ್ಲಿ ಅಂಬೇಡ್ಕರ್ ನಾಮಫಲಕ ಅನಾವರಣ



ನಂಜನಗೂಡು, ಏ.17(ಸುದರ್ಶನ್)– ನಗರದ ಶ್ರೀರಾಂಪುರ ಬಡಾವಣೆಯಲ್ಲಿ ಜೈ ಭೀಮ್ ಬಳಗದಿಂದ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕವನ್ನು ಗ್ರಾಮದ ಮುಖಂಡ ಡಿ.ವರದರಾಜು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ದೇಶಕ್ಕೆ ಡಾ.ಅಂಬೇಡ್ಕರ್ ಕೊಡುಗೆ ಅಪಾರ. ಯುವಕರು ಡಾ.ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅವರ ಹಾದಿಯಲ್ಲಿ ಸಾಗಿದಾಗ ಮಾತ್ರ ದೇಶದ ಒಳ್ಳೆಯ ಪ್ರಜೆಯಾಗಲು ಸಾಧ್ಯ ಎಂದರು. ಈ ವೇಳೆ ಮುಖಂಡರಾದ ಕಾರಯ್ಯ, ಪುಟ್ಟಸ್ವಾಮಿ, ಸಂತೋಷ, ಶ್ರೀಕಾಂತ, ನಾಗರಾಜು, ಮಹದೇವಸ್ವಾಮಿ, ಶೇಷ, ಪ್ರಸನ್ನ, ಗಜೇಂದ್ರ, ಜೈ ಭೀಮ್ ಸಂಘದ ಅಧ್ಯಕ್ಷ ಮರಿದಾಸ್, ವೆಂಕಟೇಶ್, ಶಿವಸ್ವಾಮಿ, ಶಿವಣ್ಣ, ಕಮಲೇಶ್ ಸೇರಿದಂತೆ ಇತರರಿದ್ದರು.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.
ಸ್ಕ್ರೀನ್ 3 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4 ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

## INOX LIVE THE MOVIE ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2 ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.
ಸ್ಕ್ರೀನ್ 3 ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 4 ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

## MVC ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.
ಸ್ಕ್ರೀನ್ 2 ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.
ಸ್ಕ್ರೀನ್ 3 ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4 ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ

## PVR CINEMAS ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

### ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

**ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.**

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಬೀಸ್ಟ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಆರ್‌ಆರ್‌ಆರ್ (ಕ) | 1 ಪ್ರದರ್ಶನಗಳು |
| ಆರ್‌ಆರ್‌ಆರ್ (ತೆ) | 3 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಇಲ್ಲಿಂದ ಆರಂಭವಾಗಿದೆ (ಕ) | 1 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಖಿತ್ರಾ (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕೆಜಿಎಫ್–2 (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಜೇಮ್ಸ್ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಕೆಜಿಎಫ್–2 (ಕ) | 4 ಪ್ರದರ್ಶನಗಳು |
| **ಸಂಗಂ** | |
| ಕೆಜಿಎಫ್ 2 (ಕ) | 4 ಪ್ರದರ್ಶನಗಳು |
| **ಲಿಡೋ** | |
| ಹೋಂ ಮಿನಿಸ್ಟರ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬೀಸ್ಟ್ (ತ) | 4 ಪ್ರದರ್ಶನಗಳು |

## ಹಲ್ಲಹಳ್ಳಿ ಚಿನ್ನಸ್ವಾಮಿಗೆ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ




ಮಲ್ಕುಂಡಿ, ಏ.17(ಚನ್ನಪ್ಪ)– ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಗ್ರಾಮೀಣ ಭಾಗದ ಪತ್ರಕರ್ತ ಹುಲ್ಲಹಳ್ಳಿ ಚಿನ್ನಸ್ವಾಮಿ ಅವರು ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

## ಕಾಳೇಗೌಡ ನಿಧನ



ತಿ.ನರಸೀಪುರ, ಏ.17(ಎಸ್‌ಕೆ)– ಪಟ್ಟಣದ ಕುರುಬ ಸಮುದಾಯದ ದೊಡ್ಡ ಯಜಮಾನ ಕಾಳೇಗೌಡ(80) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪುರಸಭೆ ಸದಸ್ಯ ಕೆ.ನಂಜುಂಡಸ್ವಾಮಿ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕುರುಬ ಸಮುದಾಯದ ರುದ್ರಭೂಮಿಯಲ್ಲಿ ನೆರವೇರಿತು. ಮೃತರ ನಿಧನಕ್ಕೆ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಭಾರತಿ ಶಂಕರ್, ವಸತಿ ಯೋಜನೆ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಪುರಸಭಾಧ್ಯಕ್ಷ ಮದನ್ ರಾಜ್, ಉಪಾಧ್ಯಕ್ಷೆ ಪ್ರೇಮ, ಮಾಜಿ ಅಧ್ಯಕ್ಷ ಬಸವರಾಜು, ಬಸವಣ್ಣ, ವೀರೇಶ್, ಸದಸ್ಯರಾದ ಅರ್ಜುನ್, ಕಿರಣ್, ಬಾದಾಮಿ ಮಂಜು ಸಂತಾಪ ಸೂಚಿಸಿದ್ದಾರೆ.

### ಮಹದೇವಸ್ವಾಮಿ



ನಂಜನಗೂಡು, ಏ.17– ಕಾಂಗ್ರೆಸ್ ಮುಖಂಡ, ಗ್ರಾಪಂ ಮಾಜಿ ಸದಸ್ಯ, ತಾಲೂಕು ನಾಯಕ ಜನಾಂಗದ ಚಿಕ್ಕಯ್ಯನ ಛತ್ರ ಹೋಬಳಿ ಉಪಾಧ್ಯಕ್ಷ ಮಹದೇವಸ್ವಾಮಿ(49) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಚಿಕ್ಕಯ್ಯನ ಛತ್ರದಲ್ಲಿ ನೆರವೇರಲಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ

# ಪಿಎಫ್‌ಐ ಜೊತೆ ಸಿದ್ದರಾಮಯ್ಯ ಒಳ ಒಪ್ಪಂದವೇ?

## ಬಿಜೆಪಿ ಕಾರ್ಯಕಾರಿಣಿಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಪ್ರಶ್ನೆ



ಹೊಸಪೇಟೆ,ಏ.17– ಪಿಎಫ್‌ಐ ಮೇಲಿನ ಪ್ರಕರಣಗಳನ್ನು ರದ್ದು ಮಾಡಿದ ಸಿದ್ದರಾಮಯ್ಯ ಅವರು ಒಳಗಿನಿಂದ ಆ ಸಂಘಟನೆ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆಯೇ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಪ್ರಶ್ನಿಸಿದ್ದಾರೆ.

ಹೊಸಪೇಟೆಯಲ್ಲಿ ಭಾನುವಾರ ವಿಶೇಷ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಪಂಚರಾಜ್ಯ ಚುನಾವಣೆಯಲ್ಲಿ ನಾಲ್ಕು ರಾಜ್ಯಗಳಲ್ಲಿ ಮತ್ತೆ ಗೆದ್ದಿದ್ದೇವೆ. ಕಾಂಗ್ರೆಸ್ ಎಲ್ಲ ಕಡೆ ಹೀನಾಯ ಸೋಲು ಕಂಡಿದೆ. ಭಾರತವು ಪರಿವಾರವಾದ, ಜಾತಿವಾದದಲ್ಲಿ ಈಗ ನಂಬಿಕೆ ಇಟ್ಟಿಲ್ಲ ಎಂಬುದು ಸಾಬೀತಾಗಿದೆ ಎಂದರು.

ರಾಜ್ಯದಲ್ಲಿ 2023ರಲ್ಲಿ ಬಿಜೆಪಿ ಮತ್ತೆ ಇಲ್ಲಿ ಅಧಿಕಾರ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಕಾಂಗ್ರೆಸ್ ಪಕ್ಷವು ಪ್ರಾದೇಶಿಕ ಪಕ್ಷವಾಗಿದೆ. ಜೆಡಿಎಸ್, ಶಿವಸೇನಾ, ಟಿಡಿಪಿ, ಪಿಡಿಪಿ ಸೇರಿದಂತೆ ಹತ್ತಾರು ಪಕ್ಷಗಳು ಪ್ರಾದೇಶಿಕ ಪಕ್ಷವಾಗಿ ದೇಶದ ವಿವಿಧೆಡೆ ಇವೆ. ಸಬ್ ಕಾ ಸಾಥ್ ಸಬ್ ಕಾ ವಿಶ್ವಾಸ್ ಎಂಬ ನರೇಂದ್ರ ಮೋದಿಯವರ ಕನಸು ನನಸಾಗಿಸಲು ಕರ್ನಾಟಕದಲ್ಲಿ ಬಿಜೆಪಿಯನ್ನು ಗೆಲ್ಲಿಸಬೇಕಿದೆ ಎಂದು ತಿಳಿಸಿದರು.

ಕೋವಿಡ್ ವೇಳೆ ಪ್ರಧಾನಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಮೂಲಕ 80 ಕೋಟಿಗೂ ಹೆಚ್ಚು ಜನರಿಗೆ ಪಡಿತರ ಕೊಡಲಾಗಿದೆ. ಹಸಿವಿನಿಂದ ಯಾರೂ ಸಾಯಬಾರದೆಂಬ ಉದ್ದೇಶ ಇದರಲ್ಲಿದೆ. ಬೊಮ್ಮಾಯಿಯವರು ಮಾಸಾಶನವನ್ನು ಹೆಚ್ಚಿಸಿದ್ದಾರೆ. ಇಲ್ಲಿನ ಸಂಬಾರ ಪದಾರ್ಥಗಳು ಮತ್ತು ಕಾಫಿ ರಫ್ತು ಹೆಚ್ಚಾಗಿದೆ ಎಂದರು. ಯಡಿಯೂರಪ್ಪ ಮತ್ತು ಬೊಮ್ಮಾಯಿ ಅವರ ಸರಕಾರಗಳ ಸಾಧನೆಯನ್ನು ಜನರಿಗೆ ತಲುಪಿಸಿ ಎಂದರು.

ಕರ್ನಾಟಕವು ಸ್ಟಾರ್ಟ್‌ಅಪ್‌ಗಳ ಪ್ರಮುಖ ಪ್ರದೇಶವಾಗಿದೆ. ಜಿಎಸ್‌ಟಿ ಸಂಗ್ರಹವೂ ಗಮನಾರ್ಹವಾಗಿ ಬೆಳೆದಿದೆ. ತೆರಿಗೆ ಸಂಗ್ರಹವೂ ಶೇ 34ರಷ್ಟು ಹೆಚ್ಚಾಗಿದೆ. ಭಾರತದ ಬೆಳವಣಿಗೆ ದರವು ಶೇ 7.4ರಿಂದ ಶೇ 8ಕ್ಕೂ ಹೆಚ್ಚಾಗಲಿದೆ ಎಂದು ಸರ್ವೇಗಳು ತಿಳಿಸಿವೆ ಎಂದರು. ಶೇ.31ರಷ್ಟು ಉದ್ಯೋಗ ನೀಡಿಕೆ ಬೆಳವಣಿಗೆ ಇದೆ. ಎಲ್ಲ ಕ್ಷೇತ್ರಗಳಲ್ಲಿ ನಮ್ಮ ಬೆಳವಣಿಗೆ ಸಾಗಿದೆ ಎಂದು ಮೆಚ್ಚುಗೆ ಸೂಚಿಸಿದರು. ಹಂಪಿಯು ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾಗಿತ್ತು. ವಿಜಯನಗರವನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾಡಿದ್ದಕ್ಕಾಗಿ ಜನತೆಗೆ ಅಭಿನಂದನೆ ಸಲ್ಲಿಸಿದರು. ಕರ್ನಾಟಕ 'ಮಿಷನ್ 150'ಗಾಗಿ ಕಾರ್ಯಕರ್ತರು ಶ್ರಮಿಸಲಿದ್ದಾರೆ. ಉತ್ತಮ ಬೂತ್ ಮೂಲಕ ಗೆಲುವು ನಮ್ಮದಾಗಿಸಿಕೊಳ್ಳಬಹುದು. ಆದ್ದರಿಂದ ಬೂತ್, ಪೇಜ್ ಕಮಿಟಿಗೆ ಮಹತ್ವ ಕೊಡಬೇಕು. ಜನರಿಗೆ ಸೌಲಭ್ಯಗಳನ್ನು ತಲುಪಿಸಲು ಸೈನಿಕರಂತೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

# ಮಾಜಿ ಸಿಎಂ ಹೆಚ್‌ಡಿಕೆ ಕೈ ಬಲಪಡಿಸಿ: ಸಿ.ಎನ್.ಮಂಜೇಗೌಡ



ಗುಂಡ್ಲುಪೇಟೆ,ಏ.17– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಕೈ ಬಲಪಡಿಸುವುದರ ಮೂಲಕ ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಜೆಡಿಎಸ್ ಅಧಿಕಾರಕ್ಕೆ ತರಲು ಎಲ್ಲರೂ ಸಹರಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ಗುಂಡ್ಲುಪೇಟೆ, ಬೇಗೂರು, ವೀರನಪುರ ಕ್ರಾಸ್‌ಗಳಲ್ಲಿ ನಡೆದ ಜನತಾ ಜಲಧಾರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಸಂಕಲ್ಪ ಒಂದೇ ಆಗಿದ್ದು, ಅದು ರೈತರ ಅಭಿವೃದ್ಧಿ, ರೈತರ ಬಾಳು ಹಸನಾಗಬೇಕು, ವ್ಯವಸಾಯಕ್ಕೆ ನೀರನ್ನು ಕೊಡಬೇಕು, ಪ್ರತಿಯೊಬ್ಬರಿಗೂ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು ಹಾಗೂ ರೈತರಿಗೆ ಅನ್ಯಾಯವಾದಾಗ ಹೋರಾಟ ಮಾಡಿ ಅವರಿಗೆ ನ್ಯಾಯ ಒದಗಿಸಿಕೊಡಬೇಕು ಎಂಬುದಾಗಿದೆ. ಹೊರ ರಾಜ್ಯಗಳಲ್ಲಿ ಭತ್ತದ ತಳಿಗಳಿಗೆ ದೇವೇಗೌಡರ ಹೆಸರನ್ನು ಇಟ್ಟಿದ್ದಾರೆ ಅದನ್ನು ನಾವು ಕರ್ನಾಟಕದಲ್ಲಿ ಮಾಡಬೇಕಾಗಿದೆ ಎಂದರು.

ಜನತಾ ಜಲಧಾರೆ ಕಾರ್ಯಕ್ರಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಮಾಡಿ ಎಲ್ಲಾ ನದಿಗಳ ನೀರನ್ನು ತರುವುದಾಗಿದೆ. ಇಂದು ಒಂದೇ ದಿನ 15 ಕಡೆ ಜನತಾ ಜಲಧಾರೆ ಕಾರ್ಯಕ್ರಮ ನಡೆಯುತ್ತಿದೆ ಅದು ಬೆಂಗಳೂರನ್ನು ತಲುಪಿ ಪೂರ್ಣಗೊಳಿಸಲಾಗುತ್ತದೆ. 2023ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ನೀವೆಲ್ಲರೂ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮುಂದಿನ ಚುನಾವಣೆಯಲ್ಲಿ ನೂರಕ್ಕೆ ನೂರು ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬಂದು ಕುಮಾರಣ್ಣ ಮುಖ್ಯಮಂತ್ರಿಯಾಗುತ್ತಾರೆ. ಎಲ್ಲಾ ಕಡೆ ಜನರು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಇಂದು ಚಾಮರಾಜನಗರ ಗಡಿ ಭಾಗದವರೆಗೆ ಜಲಯಾತ್ರೆ ಬಂದಿದೆ. ನಿಮ್ಮೆಲ್ಲರ ಆಶೀರ್ವಾದ ಜೆಡಿಎಸ್ ಪಕ್ಷಕ್ಕೆ ಇರಲಿ ಎಂದರು.

ಚಾಮರಾಜನಗರ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಮಂಜುನಾಥ್ ಮಾತನಾಡಿ, ರಾಜ್ಯದಲ್ಲಿ ನೀರಾವರಿಗೆ ಹೆಚ್ಚಿನ ಕೊಡುಗೆ ನೀಡಿದವರೆಂದರೆ ಮಾಜಿ ಪ್ರಧಾನಿ ದೇವೇಗೌಡರು. ರಾಜ್ಯವನ್ನು ಹಸಿರು ವಲಯವನ್ನಾಗಿಸಲು ಕನಸನ್ನು ಕಂಡಿರುವ ಕುಮಾರಣ್ಣ ಈ ಬಾರಿ ಮುಖ್ಯಮಂತ್ರಿಯಾಗಬೇಕು. ಕುಮಾರಣ್ಣ ನುಡಿದಂತೆ ನಡೆದವರು ಮುಖ್ಯಮಂತ್ರಿಯಾಗಿ ಅನೇಕ ಜನಪರ ಕೆಲಸಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ಆದ್ದರಿಂದ ಈ ಬಾರಿ ಜೆಡಿಎಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರಾಜೂಗೌಡ, ಮದನ್‌ಗೌಡ, ಮಣಿಕಂಠ, ಅಕ್ರಂಪಾಷ, ಇದ್ರೀಶ್, ಅಭೀಬ್ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

# ಪಿಎಸ್‌ಐ ನೇಮಕಾತಿ ಅಕ್ರಮ; ಆಯ್ಕೆಯಾದ ಎಲ್ಲರ ತನಿಖೆ



ಬೆಂಗಳೂರು, ಏ. 17– ರಾಜ್ಯದಲ್ಲಿ ಬಾರಿ ಸದ್ದು ಮಾಡಿರುವ 545 ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಆಯ್ಕೆಯಾದ ಪ್ರತಿಯೊಬ್ಬ ಅಭ್ಯರ್ಥಿಯ ಪೂರ್ವಾಪರ ಪರಿಶೀಲನೆ ನಡೆಸುವುದಾಗಿ ಪೊಲೀಸ್ ಇಲಾಖೆ ಭರವಸೆ ನೀಡಿದೆ.

545 ಎಸ್‌ಐ ನೇಮಕಾತಿಯಲ್ಲಿ ಅಕ್ರಮ ಸಂಬಂಧ ಸಿಐಡಿ ತನಿಖೆ ಕುರಿತು ಭಾನುವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 545 ಎಸ್‌ಐ ನೇಮಕಾತಿಯಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇರುವ ಪ್ರತಿಯೊಬ್ಬ ಅಭ್ಯರ್ಥಿಯ ಪೂರ್ವಾಪರ ಪರಿಶೀಲನೆ ನಡೆಸಲಾಗು ತ್ತದೆ. ಈ ಅಕ್ರಮದಲ್ಲಿ ತೊಡಗಿರುವ ಸರ್ಕಾರಿ ನೌಕರರ ವಿರುದ್ಧವೂ ತನಿಖೆ ನಡೆಸ ಲಾಗುತ್ತಿದೆ. ನೇಮಕಾತಿಯಲ್ಲಿ ಅಕ್ರಮ ಎಸಗಿರುವ ಅಭ್ಯರ್ಥಿ ಮತ್ತು ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ನೈಜ ಅಭ್ಯರ್ಥಿಗಳಿಗೆ ಯಾವುದೇ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಡಿಜಿಪಿ ಪ್ರವೀಣ್ ಸೂದ್ ಭರವಸೆ ನೀಡಿದ್ದಾರೆ.

2021ರ ಅಕ್ಟೋಬರ್ 3ರಂದು ನಡೆದ 545 ಎಸ್‌ಐ ನೇಮಕಾತಿಗೆ ರಾಜ್ಯದಲ್ಲಿ 92 ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆದಿದೆ. ಲಿಖಿತ ಪರೀಕ್ಷೆ ಬಳಿಕ ಅಕ್ರಮ ನಡೆದಿರುವ ಕುರಿತು ದೂರುಗಳು ಬಂದಿವೆ. ಈ ಕುರಿತು ಆಂತರಿಕ ತನಿಖೆ ನಡೆಸಲಾಗಿದೆ.

ಇದರ ನಡುವೆ ಅಕ್ರಮ ನಡೆದಿರುವ ಕುರಿತು ಏ. 7ರಂದು ಸಿಕ್ಕ ಖಚಿತ ಮಾಹಿತಿ ಮೇರೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ, ಎಸ್‌ಐ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಕುರಿತು ಸಿಐಡಿ ತನಿಖೆಗೆ ಆದೇಶಿಸಿದರು. ಈ ಆಧಾರದ ಮೇಲೆ ಏ.9ರಂದು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡ ಸಿಐಡಿ ಅಧಿಕಾರಿಗಳು, ನಾಲ್ವರು ಅಭ್ಯರ್ಥಿಗಳು ಮತ್ತು ಮೂವರನ್ನು ಮೇಲ್ವಿಚಾರಕರನ್ನು ಬಂಧಿಸಿದ್ದಾರೆ. ಕಲಬುರಗಿ ಪರೀಕ್ಷಾ ಕೇಂದ್ರದಲ್ಲಿ ಅಕ್ರಮದಲ್ಲಿ ತೊಡಗಿರುವ ಅಭ್ಯರ್ಥಿಗಳು ಮತ್ತು ಸರ್ಕಾರಿ ನೌಕರರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಸಿಐಡಿ ಕಾರ್ಯಾಚರಣೆ ಮುಂದುವರಿಸಿದೆ.

ಇದನ್ನು ಗಂಭೀರವಾಗಿ ಪರಿಗಣಿಸಿರುವ ಗೃಹ ಸಚಿವರು ಪ್ರತಿಯೊಬ್ಬ ಅಭ್ಯರ್ಥಿಯ ಪೂರ್ವಾಪರ ಪರಿಶೀಲನೆಗೆ ಸೂಚನೆ ನೀಡಿದ್ದಾರೆ. ಈ ಆಧಾರದ ಮೇಲೆ ತನಿಖೆ ಮುಂದುವರಿದಿದೆ. ತನಿಖೆ ಪೂರ್ಣಗೊಂಡು ಸಿಐಡಿ ಅಂತಿಮ ವರದಿ ನೀಡುವವರೆಗೂ 545 ಎಸ್‌ಐ ನೇಮಕಾತಿ ಕುರಿತು ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ನೈಜ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದು ಡಿಜಿಪಿ ಪ್ರವೀಣ್ ಸೂದ್ ತಿಳಿಸಿದ್ದಾರೆ.

## ಶೆಟ್ಟಳ್ಳಿ ಹಾಡಿಯಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ

# ಕಾಲಮಿತಿಯೊಳಗೆ ಸಮಸ್ಯೆ ಪರಿಹರಿಸಿ

● ಅಧಿಕಾರಿಗಳಿಗೆ ಶಾಸಕ ಹೆಚ್‌ಪಿಎಂ ಸೂಚನೆ ● ಕೆಲ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ



ಹನಗೋಡು, ಏ.17(ಮಹೇಶ್)– ಇಲ್ಲಿನ ಶೆಟ್ಟಳ್ಳಿ ಹಾಡಿಯಲ್ಲಿ ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಕಾರ್ಯಕ್ರಮದಲ್ಲಿ ಕೆಲ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸಿಕ್ಕರೆ, ಹಲವು ಸಮಸ್ಯೆಯನ್ನು ಕಾಲಮಿತಿಯೊಳಗೆ ಪರಿಹರಿಸುವಂತೆ ಶಾಸಕ ಹೆಚ್.ಪಿ.ಮಂಜುನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಶೆಟ್ಟಳ್ಳಿಯಲ್ಲಿ ಗಿರಿಜನ ಪುನರ್ವಸತಿ ಕೇಂದ್ರದಲ್ಲಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ, ಫಲಾನುಭವಿಗಳಿಗೆ ಪಡಿತರ, ಆಧಾರ್ ಕಾರ್ಡ್ ವಿತರಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮಕ್ಕೆ ಯಾವುದೇ ಅನುದಾನ ಬರುವುದಿಲ್ಲ. ಸಾಮಾಜಿಕ ಭದ್ರತೆ ಯೋಜನೆಯಡಿ ಮಾಸಾಶನ, ಆಧಾರ್ ಕಾರ್ಡ್ ಮಂಜೂರು–ತಿದ್ದುಪಡಿ, ಪಡಿತರ ಕಾರ್ಡ್ ಹೀಗೆ ಕೆಲ ಸಮಸ್ಯೆಗಳನ್ನು ಮಾತ್ರ ಪರಿಹರಿಸಲು ಸಾಧ್ಯ. ಕಾಲಮಿತಿಯೊಳಗೆ ಇನ್ನುಳಿದ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು. ಕೆಲವನ್ನು ಗ್ರಾಪಂನಿಂದಲೇ ಬಗೆಹರಿಸಬಹುದಾಗಿದ್ದು, ಆಡಳಿತ ಮಂಡಳಿ, ಪಿಡಿಓಗಳು ಪಟ್ಟಿ ಮಾಡಿಕೊಂಡು ವಿವಿಧ ಯೋಜನೆಯಡಿ ಅನುಷ್ಠಾನಗೊಳಿಸಬೇಕೆಂದು ಸೂಚಿಸಿದರು.

**ಗಿರಿಜನರ ಸಮಸ್ಯೆಗಳ ಅನಾವರಣ:** ಸಭೆಯಲ್ಲಿ ಶೆಟ್ಟಳ್ಳಿ ಪುನರ್ವಸತಿ ಕೇಂದ್ರ ಸೇರಿದಂತೆ ವಿವಿಧ ಹಾಡಿ ಸಮಸ್ಯೆಗಳ ಬಗ್ಗೆ ಗಿರಿಜನರು ಖಾರವಾಗಿಯೇ ಪ್ರಶ್ನಿಸುವ ಮೂಲಕ ಗಮನ ಸೆಳೆದರು. ಶೆಟ್ಟಳ್ಳಿಹಾಡಿಯ ಪುಟ್ಟಮ್ಮ ನಮಗೆ ಕಟ್ಟಿಕೊಟ್ಟಿರುವ ಪುಟ್ಟ ಮನೆಗಳ ಮೇಲ್ಛಾವಣಿಯೇ ಉದುರುತ್ತಿದೆ. ಮಳೆ ನೀರು ಸೋರುತ್ತಿದೆ. ವಾಸ ಮಾಡಲಾಗುತ್ತಿಲ್ಲ. ಬಸ್ ತಂಗುದಾಣ ನಿರ್ಮಿಸಿಕೊಡಿ ಎಂದು ಕೋರಿಕೊಂಡರೆ, ಶೆಟ್ಟಳ್ಳಿ ಹಾಡಿಯ ಶಿವಣ್ಣ, ರಾಜು, ಬಿಲ್ಲೇನಹೊಸಳ್ಳಿಯ ರಾಜು ನಮ್ಮ ಭೂಮಿಗೆ ಬೋರ್ ಹಾಕಿಸಿ ಕೊಡಿ, ಶೆಟ್ಟಳ್ಳಿಹಾಡಿಯ ಕಾಳ ಭೂಮಿ ಸಮತಟ್ಟು ಮಾಡಿಕೊಡಿ ಎಂದು ಕೋರಿದರು.

**ಅಯ್ಯನಕೆರೆ ಹಾಡಿ ಗೋಳು:** ಅಯ್ಯನಕೆರೆ, ತುಳಸಿ ಹಾಡಿಯ ಅನೇಕರು ಶೌಚಾಲಯವಿಲ್ಲದೆ ಬಳಲುತ್ತಿದ್ದೇವೆ. ಕೆಲವರು ಸರ್ಕಾರದ ಸೌಲಭ್ಯ ಪಡೆದವರೇ ಮತ್ತೆ–ಮತ್ತೆ ಪಡೆಯುತ್ತಿದ್ದಾರೆ ಎಂದು ದೂರಿದರು. ಶೆಟ್ಟಳ್ಳಿ ಹಳೆ ಹಾಡಿಯ ಮಹಿಳೆಯೊಬ್ಬರು 25 ಕುಟುಂಬಗಳಿಗೆ ಭೂಮಿ ಇಲ್ಲ, ಮಂಜೂರು ಮಾಡಿಸಿಕೊಡಿರೆಂದು ಮನವಿ ಸಲ್ಲಿಸಿದರು. ನೇರಳಕುಪ್ಪೆ ಬಿ ಹಾಡಿಯ ಬಾಬು ಗೂಡ್ಸ್ ವಾಹನಕ್ಕೆ ಮನವಿ ಸಲ್ಲಿದರೂ ಇನ್ನೂ ಮಂಜೂರಾಗಿಲ್ಲ ಎಂದು ದೂರಿದರು.

**ಶಾಸಕರ ಸ್ಪಂದನೆ:** ಸಮಸ್ಯೆಗಳ ಗಂಭೀರತೆ ಅರಿತ ಶಾಸಕ ಮಂಜುನಾಥ್ ಗಿರಿಜನರ ಮನೆಗಳ ದುರಸ್ಥಿಗೆ ಸರ್ಕಾರಕ್ಕೆ ಪತ್ರ ಬರೆದು 3 ವರ್ಷವಾಗಿದ್ದರೂ ಅನುದಾನ ಬಿಡುಗಡೆ ಮಾಡಿಲ್ಲ. ಮತ್ತೆ ಸರ್ಕಾರದ ಮೇಲೆ ಒತ್ತಡ ಹಾಕುವುದಾಗಿ ತಿಳಿಸಿದರು. 3 ಮಂದಿ ಗಿರಿಜನರಿಗೆ ಬೋರ್‌ವೆಲ್ ಹಾಕಿಸಿ ಕೊಡಲಾಗುವುದು. ಆದರೆ ಜಮೀನನ್ನು ಯಾರಿಗೂ ಪರಬಾರೆ ಮಾಡದಿರಿ ಎಂದು ಎಚ್ಚರಿಕೆ ನೀಡಿದರು. ಶೆಟ್ಟಳ್ಳಿ ಬಳಿ ಶಾಸಕರ ನಿಧಿಯಿಂದ ಬಸ್ ತಂಗುದಾಣ ನಿರ್ಮಿಸುವುದಾಗಿ ತಿಳಿಸಿ, ಶೌಚಾಲಯ ನಿರ್ಮಾಣಕ್ಕೆ ಹಾಗೂ ಭೂಮಿ ಸಮತಟ್ಟಿಗೆ ಅಗತ್ಯ ಕ್ರಮವಹಿಸುವಂತೆ ಇಓ ಗಿರೀಶ್ ಅವರಿಗೆ ಸೂಚಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ.ಅಶೋಕ್, ತಾಪಂ ಇಓ ಗಿರೀಶ್, ನೇರಳಕುಪ್ಪೆ ಗ್ರಾಪಂ ಅಧ್ಯಕ್ಷ ಉದಯನ್, ಉಪಾಧ್ಯಕ್ಷೆ ಜವರಮ್ಮ, ಜಿಪಂ ಮಾಜಿ ಸದಸ್ಯ ಕಟ್ಟನಾಯ್ಕ, ಉಪ ತಹಸೀಲ್ದಾರ್ ಚೆಲುವರಾಜು, ಆರ್‌ಐ ಗಳಾದ ಪ್ರಶಾಂತ ರಾಜೇಅರಸ್, ನಂದೀಶ್, ಲೋಹಿತ್, ಗ್ರಾಮ ಲೆಕ್ಕಿಗರಾದ ಮೂರ್ತಿಕುಮಾರ್, ಸುಮಂತ್, ಮಹದೇವ್, ತಾಪಂ ಮಾಜಿ ಸದಸ್ಯ ಗಣಪತಿ, ಪುನರ್ವಸತಿ ಕೇಂದ್ರದ ಅಧ್ಯಕ್ಷ ಶಂಕರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು.























